ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 15 ಬುಧವಾರ 2023

ಸಂಪುಟ: 43 | ಸಂಚಿಕೆ: 298 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ಮಾಜಿ ಸಚಿವರಾದ ವಿ.ಮುನಿಯಪ್ಪ, ವೆಂಕಟರಮಣಪ್ಪ ಸೇರಿ ಐವರ ಹೊರತು

ಉಳಿದೆಲ್ಲಾ ಹಾಲಿ ಶಾಸಕರು ಸೇರಿ
126 ಅಭ್ಯರ್ಥಿಗಳ ಕಾಂಗ್ರೆಸ್ ಮೊದಲ ಪಟ್ಟಿ
ಫೆ.28ಕ್ಕೆ ಬಿಡುಗಡೆ

- ಪಕ್ಷದ ಚುನಾವಣಾ ಪೂರ್ವ ಸಮೀಕ್ಷೆ ಆಧರಿಸಿ ಅಭ್ಯರ್ಥಿಗಳ ಆಯ್ಕೆ
- ಕೆಲವೆಡೆ ಬಹು ಆಕಾಂಕ್ಷಿಗಳಿದ್ದರೆ, ಮತ್ತೆ ಹಲವೆಡೆ ಸಮರ್ಥ ಅಭ್ಯರ್ಥಿಗಳಿಲ್ಲ!

ಬೆಂಗಳೂರು, ಫೆ. 14 (ಕೆಎಂಶಿ)– ಮಾಜಿ ಸಚಿವರಾದ ವಿ.ಮುನಿಯಪ್ಪ, ವೆಂಕಟರಮಣಪ್ಪ ಸೇರಿದಂತೆ ಹಾಲಿ ಐವರು ವಿಧಾನಸಭಾ ಸದಸ್ಯರಿಗೆ ಟಿಕೆಟ್ ನಿರಾಕರಿಸಿ, 126 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಬಿಡುಗಡೆ ಮಾಡಲು ಕಾಂಗ್ರೆಸ್ ಅಣಿಯಾಗಿದೆ.

ಅಭ್ಯರ್ಥಿಗಳ ಆಯ್ಕೆಗೆ ಚುನಾವಣಾ ಪೂರ್ವ ಸಮೀಕ್ಷಾ ವರದಿ ಸೇರಿದಂತೆ ಕಸರತ್ತಿನ ಮೇಲೆ ಕಸರತ್ತು ನಡೆಸಿ ಅಂತಿಮವಾಗಿ ಮೊದಲ ಪಟ್ಟಿ ಇದೇ 28ರಂದು ಪ್ರಕಟವಾಗಲಿದೆ. ಬಿಜೆಪಿ ಮತ್ತು ಜೆಡಿಎಸ್‌ಗೆ ಸಡ್ಡು ಹೊಡೆದು ಮುಂದಿನ ವಿಧಾನಸಭೆ ಚುನಾವಣೆಯಲ್ಲಿ ಅಧಿಕಾರಕ್ಕೆ ಬರಲೇಬೇಕು ಎಂದು ಪಣ ತೊಟ್ಟಿರುವ ಕಾಂಗ್ರೆಸ್‌ಗೆ ಅಭ್ಯರ್ಥಿಗಳ ಆಯ್ಕೆ ಕಗ್ಗಂಟಾಗಿದೆ.

ಶತಮಾನದ ಇತಿಹಾಸವುಳ್ಳ ಕಾಂಗ್ರೆಸ್‌ಗೆ ಕೆಲವು ಕ್ಷೇತ್ರಗಳಲ್ಲಿ ಆಕಾಂಕ್ಷಿಗಳ ದಂಡೇ ಇದ್ದರೆ, ಹೊಳೆನರಸೀಪುರ ಸೇರಿದಂತೆ 22 ಕ್ಷೇತ್ರಗಳಲ್ಲಿ ಸಮರ್ಥ ಅಭ್ಯರ್ಥಿಗಳು ಇಲ್ಲ. ಕೆ.ಆರ್.ಪೇಟೆ ಸೇರಿದಂತೆ ಕೆಲವು ಕ್ಷೇತ್ರಗಳಿಗೆ ಜೆಡಿಎಸ್ ಮತ್ತು ಬಿಜೆಪಿಯ ಪ್ರಭಾವಿಗಳನ್ನು ಸೆಳೆದುಕೊಂಡು ಚುನಾವಣಾ ಕಣಕ್ಕಿಳಿಸಲು ಪಕ್ಷ ಮುಂದಾಗಿದೆ.

ವಿಧಾನಸಭೆಯ 224 ಕ್ಷೇತ್ರಗಳ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಕಳೆದ ಮೂರು ದಿನಗಳಿಂದ ವರಿಷ್ಠರು ನೇಮಿಸಿರುವ ಪರಿಶೀಲನಾ ಸಮಿತಿ ಕಸರತ್ತು ನಡೆಸಿ ಒಂದು ತೀರ್ಮಾನಕ್ಕೆ ಬಂದಿದೆ. ಕಾಟಾಚಾರಕ್ಕೆ ಎಂಬಂತೆ ನಾಳೆಯಿಂದ ಎರಡು ಮೂರು ದಿನಗಳ ಕಾಲ ಪರಿಶೀಲನಾ ಸಮಿತಿ ಪ್ರತಿ ಕ್ಷೇತ್ರದ ಆಕಾಂಕ್ಷಿಗಳೊಂದಿಗೆ ಸಮಾಲೋಚನೆ ನಡೆಸಲಿದೆ. ಆಕಾಂಕ್ಷಿಗಳು ಮತ್ತು ರಾಜ್ಯದ ನಾಯಕರೊಂದಿಗೆ ಚರ್ಚೆ ನಡೆಸಿದ ನಂತರ ವಿವಾದವಲ್ಲದ ಮತ್ತು ಹಾಲಿ ಶಾಸಕರು ಮತ್ತು ಪ್ರಭಾವಿಗಳಿರುವ 126 ಕ್ಷೇತ್ರಗಳಿಗೆ ತಲಾ ಒಂದು ಇಲ್ಲವೇ ಎರಡು ಹೆಸರುಗಳನ್ನು ಕೇಂದ್ರಕ್ಕೆ ಶಿಫಾರಸ್ಸು ಮಾಡಲಿದೆ. ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿ ಕೇಂದ್ರ ಚುನಾವಣಾ ಸಮಿತಿ ಸಭೆ ಸೇರಿ ಪರಿಶೀಲನಾ ಸಮಿತಿ ಸಲ್ಲಿಸುವ ಪಟ್ಟಿಯನ್ನು ಪರಿಶೀಲಿಸಿ ಅಂತಿಮ ನಿರ್ಧಾರ ಕೈಗೊಳ್ಳಲಿದೆ. ಕೇಂದ್ರ ಘಟಕ ನಡೆಸಿರುವ ರಾಜ್ಯ ಚುನಾವಣಾ ಪೂರ್ವ ಸಮೀಕ್ಷೆ ವರದಿಗಳನ್ನು ಮುಂದಿಟ್ಟುಕೊಂಡು ಸಮಿತಿಯ ಶಿಫಾರಸ್ಸನ್ನು ತುಲನೆ ಮಾಡಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ ಎಂದು ಉನ್ನತ ಮೂಲಗಳು ತಿಳಿಸಿವೆ. ಟಿಕೆಟ್ ನಿರಾಕರಿಸಲ್ಪಡುವ ಸದಸ್ಯರ ಕುಟುಂಬದವರಿಗೆ ಟಿಕೆಟ್ ನೀಡಲು ರಾಜ್ಯ ಘಟಕ ಕೇಂದ್ರಕ್ಕೆ ಶಿಫಾರಸ್ಸು ಮಾಡಿದೆ ಎನ್ನಲಾಗಿದೆ.

ಬಿಜೆಪಿ ಸರ್ಕಾರದ್ದು ಬರೀ ಸುಳ್ಳೇ ಸುಳ್ಳು...!



- ರಾಜ್ಯಪಾಲರಿಂದಲೂ ಬರೀ ಸುಳ್ಳು ಹೇಳಿಸಿದ್ದೀರಿ
- ವಿಪಕ್ಷ ನಾಯಕ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ವಾಗ್ದಾಳಿ
- ಬಿಜೆಪಿ ನೀಡಿದ್ದು 600 ಭರವಸೆ; ಈಡೇರಿಸಿದ್ದು ಬರೀ 50 ರಿಂದ 60 ಅಷ್ಟೇ
- ಇಲ್ಲಿಯವರೆಗೆ ಬಿಜೆಪಿ ಸರ್ಕಾರ ಮಾಡಿದ ಕೆಲಸ ತೌಡು ಕುಟ್ಟುವುದಷ್ಟೇ!

ಬೆಂಗಳೂರು, ಫೆ. 14(ಕೆಎಂಶಿ)–ಬಿಜೆಪಿ ನೇತೃತ್ವದ ಸರ್ಕಾರ ಸುಳ್ಳು ಹೇಳಿಕೊಂಡೇ ಕಾಲ ಕಳೆದಿದೆಯೇ ಹೊರತು ಅಭಿವೃದ್ಧಿ ಕಡೆಗೆ ಗಮನ ಹರಿಸಿಲ್ಲ. ಇಲ್ಲಿಯವರೆಗೂ ತೌಡು ಕುಟ್ಟುವ ಕೆಲಸ ಮಾಡಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ವಾಗ್ದಾಳಿ ನಡೆಸಿದರು.

ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಯಡಿಯೂರಪ್ಪ ಮತ್ತು ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರದಲ್ಲಿ ನೀಡಿದ ಯಾವುದೇ ಭರವಸೆಗಳನ್ನು ಈಡೇರಿಸಿಲ್ಲ ಎಂದು ದಾಖಲೆ ಸಹಿತ ಎಳೆಎಳೆಯಾಗಿ ಸದನದಲ್ಲಿ ಬಿಡಿಸಿಟ್ಟರು.

ದಿನನಿತ್ಯ ಭರವಸೆಗಳ ಮಹಾಪೂರವನ್ನೇ ಹರಿಸುವ ಮೂಲಕ ಜನರನ್ನು ವಂಚಿಸುತ್ತಿದ್ದಾರೆಯೇ ಹೊರತು ಅಭಿವೃದ್ಧಿ ಶೂನ್ಯ. ರಾಜ್ಯಪಾಲರ ಭಾಷಣವೆಂದರೆ ಸರ್ಕಾರದ ಕೈಗನ್ನಡಿಯಾಗಿರಬೇಕು. ಆದರೆ, ಇದು ಸುಳ್ಳಿನ ಕನ್ನಡಿಯಾಗಿದೆ. ಇಂತಹ ಭಾಷಣವನ್ನು ನಾನು ಎಂದೂ ನೋಡಿರಲಿಲ್ಲ. ನೀವು ಏನಾದರೂ ಸಾಧನೆ ಮಾಡಿದ್ದರಲ್ಲವೆ ಭಾಷಣದಲ್ಲಿ ಸೇರಿಸಲು ಸಾಧ್ಯ. ಈ ಪುಸ್ತಕವೇ ನಿಮ್ಮ ಸುಳ್ಳಿನ ಕಂತೆಯನ್ನು ಬಯಲು ಮಾಡುತ್ತದೆ ಎಂದು ಟೀಕಾಪ್ರಹಾರ ನಡೆಸಿದರು.

ಬಿಜೆಪಿ ಆಡಳಿತಕ್ಕೆ ಬಂದ ಮೇಲೆ ಸುಳ್ಳನ್ನೇ ಜಾಸ್ತಿ ಹೇಳುವುದು. ಆಗಾಗ ಸತ್ಯ ಹೇಳುತ್ತಾರೆ ಅಷ್ಟೇ. ವಸ್ತುಸ್ಥಿತಿ, ಅಭಿವೃದ್ಧಿ ಕಾರ್ಯಗಳ ಬಗ್ಗೆ ಮಾತನಾಡುವುದಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಹಿನ್ನೋಟ ಇರಬೇಕು. ಕಳೆದ 4 ವರ್ಷಗಳ ಸಾಧನೆಗಳನ್ನು, ರಾಜ್ಯದ ಸಾಮಾಜಿಕ, ಆರ್ಥಿಕ ಪರಿಸ್ಥಿತಿಯನ್ನು ರಾಜ್ಯಪಾಲರ ಭಾಷಣದಲ್ಲಿ ಹೇಳಿಸಬೇಕಿತ್ತು. ಇದರ ಜೊತೆಗೆ ಮುನ್ನೋಟವೂ ಇರಬೇಕಿತ್ತು. ರಾಜ್ಯಪಾಲರ ಭಾಷಣದಲ್ಲಿ ಹಿನ್ನೋಟ ಬರೀ ಸುಳ್ಳುಗಳಿಂದ ಕೂಡಿತ್ತು, ಮುನ್ನೋಟ ಇರಲೇ ಇಲ್ಲ. ಸರ್ಕಾರ ತೌಡು ಕುಟ್ಟುವ ಕೆಲಸ ಮಾಡಿದೆ, ಭತ್ತ ಕುಟ್ಟಿದರೆ ಅಕ್ಕಿ ಬರುತ್ತದೆ, ತೌಡು ಕುಟ್ಟಿದರೆ ▶ 8ನೇ ಪುಟಕ್ಕೆ

ಶುಕ್ರವಾರ ರಾಜ್ಯ ಬಜೆಟ್ ಮಂಡನೆ

ಫೆಬ್ರವರಿ 20 ರಂದು 15ನೇ ವಿಧಾನಸಭಾ ಸದಸ್ಯರ ಫೋಟೋ ಸೆಷನ್; ಇದಕ್ಕಾದರೂ ತಪ್ಪದೇ ಬನ್ನಿ: ಸ್ಪೀಕರ್ ಮನವಿ

ಬೆಂಗಳೂರು, ಫೆ. 14(ಕೆಎಂಶಿ)– 2023–24ನೇ ಆರ್ಥಿಕ ಸಾಲಿನ ಆಯವ್ಯಯವನ್ನು ಹಣಕಾಸು ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು, ಮುಂದಿನ ಶುಕ್ರವಾರ (ಫೆ.17) ಬೆಳಗ್ಗೆ 10.15ಕ್ಕೆ ಮಂಡನೆ ಮಾಡಲಿದ್ದಾರೆ ಎಂದು ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ, ವಿಧಾನಸಭೆಯಲ್ಲಿ ಘೋಷಿಸಿದರು

ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಧಾರವನ್ನು ಸದನದಲ್ಲಿ ಪ್ರಕಟಿಸಿದ ಅವರು, ಫೆ.20ರಂದು ಸಂಜೆ 4ಗಂಟೆಗೆ ವಿಧಾನಸೌಧದ ಮುಂಭಾಗ 15ನೇ ವಿಧಾನಸಭೆಯ ಸದಸ್ಯರ ಛಾಯಾಚಿತ್ರ ತೆಗೆಸಿಕೊಳ್ಳುವ ಕಾರ್ಯಕ್ರಮ ನಿಗದಿಯಾಗಿದ್ದು, ▶ 8ನೇ ಪುಟಕ್ಕೆ

ಚಿರತೆ ಹಾವಳಿಯಿಂದ ತತ್ತರಿಸಿದ್ದ ಮೈಸೂರು ವಿಭಾಗದ ಜನರಿಗೆ ಈಗ ಹುಲಿ ಉಪಟಳ

ತಾತ–ಮೊಮ್ಮಗನ ಬಲಿ ಪಡೆದ ಹುಲಿ ಸೆರೆ

ಸಾಕಾನೆ ಅಭಿಮನ್ಯು ನೇತೃತ್ವದ 4 ಆನೆಗಳು, 150ಕ್ಕೂ ಹೆಚ್ಚು ಅರಣ್ಯ ಸಿಬ್ಬಂದಿಯ ಯಶಸ್ವಿ ಕಾರ್ಯಾಚರಣೆ

ಅಭಿಮನ್ಯು@154

ಮತ್ತಿಗೋಡು ಸಾಕಾನೆ ಶಿಬಿರದ ಕ್ಯಾಪ್ಟನ್ ಅಭಿಮನ್ಯು, ಹುಲಿ ಸೆರೆ ಕಾರ್ಯಾಚರಣೆಯ ನೇತೃತ್ವ ವಹಿಸಿದ್ದ. ಇಂದಿನ ಹುಲಿ ಸೆರೆ ಕಾರ್ಯಾಚರಣೆ ಅಭಿಮನ್ಯುವಿನ 154ನೇ ಯಶಸ್ವಿ ಕಾರ್ಯಾಚರಣೆ. ಎಂತಹ ವ್ಯಾಘ್ರವಾದರೂ ಹಿಂದಡಿಯಿಡದೆ ಧೈರ್ಯವಾಗಿ ಮುನ್ನುಗ್ಗುವ ಅಭಿಮನ್ಯು ಎಲ್ಲರ ಮೆಚ್ಚುಗೆಗೆ ಪಾತ್ರನಾದ.

ಗೋಣಿಕೊಪ್ಪ/ಮಡಿಕೇರಿ,ಫೆ.14– ಮೊಮ್ಮಗ ಮತ್ತು ತಾತನನ್ನು ಬಲಿ ಪಡೆದಿದ್ದ ಹುಲಿಯನ್ನು ಸೆರೆ ಹಿಡಿಯುವಲ್ಲಿ ಅರಣ್ಯ ಇಲಾಖೆ ಕೊನೆಗೂ ಯಶಸ್ವಿಯಾಗಿದೆ. 48 ಗಂಟೆಯಲ್ಲಿ ಹುಲಿ ಸೆರೆ ಹಿಡಿಯುವುದಾಗಿ ಈಗಾಗಲೇ ಅರಣ್ಯ ಅಧಿಕಾರಿಗಳು ಭರವಸೆ ನೀಡಿದ್ದರು. ಅಷ್ಟರೊಳಗೆ ಹುಲಿಯ ಸೆರೆ ಹಿಡಿದು, ಜನರಲ್ಲಿ ಕೊಂಚ ನೆಮ್ಮದಿ ತಂದಿದ್ದಾರೆ.

ಚೂರಿಕಾಡು ಗ್ರಾಮದ ನೆಲ್ಲೀರ ಪೂಣಚ್ಚ ಎಂಬುವರ ತೋಟದಲ್ಲಿ ಕಳೆದ ಭಾನುವಾರ ಸಂಜೆ ಚೇತನ್(18) ಹಾಗೂ ಮರುದಿನ ಬೆಳಗ್ಗೆ ಆತನ ತಾತ ರಾಜು(60) ಹುಲಿ ದಾಳಿಗೆ ಬಲಿಯಾಗಿದ್ದರು. ಇದರಿಂದ ಆಘಾತಕ್ಕೊಳಗಾಗಿ ಚೇತನ್ ಅಜ್ಜಿ ಜಯಮ್ಮ (55) ಅವರೂ ಸಾವನ್ನಪ್ಪಿದರು. ಈ ದುರಂತದಿಂದ ಗ್ರಾಮಸ್ಥರ ಆಕ್ರೋಶದ ಕಟ್ಟೆ ಒಡೆದಿತ್ತು. ಪರಿಣಾಮ ಸರ್ಕಾರದ ಮಟ್ಟದಲ್ಲೂ ಗಂಭೀರ ಚರ್ಚೆಯಾಗಿ, 48 ಗಂಟೆಯಲ್ಲಿ ಹುಲಿ ಸೆರೆ ಹಿಡಿಯುವ ಭರವಸೆ ನೀಡಲಾಗಿತ್ತು.

ಈ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆ ತಂಡ ಕಾರ್ಯಾಚರಣೆಯನ್ನು ತೀವ್ರಗೊಳಿಸಿತ್ತು. ಮತ್ತಿಗೋಡು ಸಾಕಾನೆ ಶಿಬಿರದಿಂದ ದಸರಾ ಆನೆ ಅಭಿಮನ್ಯು ನೇತೃತ್ವದ ಚಿಕ್ಕಭೀಮ, ದೊಡ್ಡಭೀಮ, ಅಶ್ವತ್ಥಾಮ ಹಾಗೂ ಶ್ರೀಕಂಠ ಆನೆಗಳ ತಂಡದೊಂದಿಗೆ ಅಧಿಕಾರಿಗಳು ಹಾಗೂ ಸಿಬ್ಬಂದಿ ಸೇರಿ 150ಕ್ಕೂ ಹೆಚ್ಚು ಮಂದಿ ಇಂದು ಬೆಳಗ್ಗೆ 6 ಗಂಟೆಯಿಂದಲೇ ಕಾರ್ಯಾಚರಣೆಯಲ್ಲಿ ತೊಡಗಿದ್ದರು. ನಾಗರಹೊಳೆ ಅರಣ್ಯಕ್ಕೆ ಹೊಂದಿಕೊಂಡ ಪ್ರದೇಶಗಳಲ್ಲಿ ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಿದ್ದ ತಂಡ ಹೆಜ್ಜೆ ಜಾಡು ಹಿಡಿದು ನಾಣಚ್ಚಿ ಗೇಟ್ ಬಳಿ ಮಧ್ಯಾಹ್ನ 2.30ರ ವೇಳೆಗೆ ಹುಲಿಯನ್ನು ಪತ್ತೆ ಮಾಡಿತು. ಜೀವ ಬಲಿ ಪಡೆದ ಹುಲಿಯೇ ಎನ್ನುವುದನ್ನು ಖಾತರಿಪಡಿಸಿಕೊಂಡ ಬಳಿಕ ಅಧಿಕಾರಿಗಳ ಸೂಚನೆ ಮೇರೆಗೆ ಟೈಗರ್ ಸ್ಕ್ವಾಡ್‌ನ ವೈದ್ಯಾಧಿಕಾರಿ ಡಾ.ರಂಜನ್ ಆನೆ ಮೇಲಿಂದ ಅರವಳಿಕೆ ಚುಚ್ಚು ಮದ್ದನ್ನು ಹುಲಿಗೆ ಡಾಟ್ ಮಾಡಿದರು. ಬಳಿಕ ಸ್ವಲ್ಪ ದೂರ ಓಡಿದ ಹುಲಿ ನಿತ್ರಾಣವಾಯಿತು. ಸಂಪೂರ್ಣವಾಗಿ ಪ್ರಜ್ಞೆ ತಪ್ಪಿದ ಬಳಿಕ ಅದನ್ನು ಸೆರೆ ಹಿಡಿಯಲಾಯಿತು.



ಅಂತಿಮ ಕ್ರಮವಾಗಿ ಗುಂಡಿಕ್ಕಲು ಸೂಚನೆಯಿತ್ತು...

ಇಬ್ಬರ ಬಲಿ ಪಡೆದ ಹುಲಿಯನ್ನು ಗುರುತಿಸಿ ಸೆರೆ ಹಿಡಿಯುವಂತೆ ರಾಜ್ಯ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ ವಿಭಾಗ) ಹಾಗೂ ಪ್ರಧಾನ ವನ್ಯಜೀವಿ ಪರಿಪಾಲಕರು ಫೆ.13ರಂದು ಆದೇಶ ಹೊರಡಿಸಿದ್ದರು. ಅದರಲ್ಲಿ ಮಾನವ ಜೀವ ಬಲಿ ಪಡೆದ ಹುಲಿಯನ್ನು ಜೀವಂತವಾಗಿ ಸೆರೆ ಹಿಡಿಯಲು ಪ್ರಾಧಾನ್ಯತೆ ನೀಡಬೇಕು. ಕಾರ್ಯಾಚರಣೆ ಸಂದರ್ಭ ದಾಳಿಗೆ ಯತ್ನಿಸಿದರೆ, ಸೆರೆ ಹಿಡಿಯುವುದು ಅಸಾಧ್ಯ ಎನ್ನುವ ಸಂದರ್ಭ ಸೃಷ್ಟಿಯಾದರೆ, ಮತ್ತೊಂದು ಜೀವ ಬಲಿ ಪಡೆಯುವ ಸಾಧ್ಯತೆಗಳು ಕಂಡುಬಂದರೆ ಮಾತ್ರ ಅಂತಿಮ ಪ್ರಯತ್ನವಾಗಿ ಹುಲಿಗೆ ಗುಂಡಿಕ್ಕುವಂತೆ ಸೂಚಿಸಲಾಗಿತ್ತು.

ಡಿ.ಬಿ.ಕುಪ್ಪೆ ವ್ಯಾಪ್ತಿಯಲ್ಲಿ ಮತ್ತೊಂದು ಸೆರೆ

ಇಂದು ನಾಣಚ್ಚಿ ಭಾಗದಲ್ಲಿ ಸೆರೆಯಾದ ಹುಲಿಯ ದೇಹದಲ್ಲಿ ಗಂಭೀರ ಗಾಯದ ಗುರುತುಗಳಿವೆ. ಹೀಗೆ ಗಾಯಗೊಂಡ ಹುಲಿಗಳು ಬೇಟೆ ಸಾಧ್ಯವಾಗದೆ ಸಹಜವಾಗಿ ಮಾನವನ ಜೊತೆ ಸಂಘರ್ಷ ನಡೆಸುತ್ತವೆ. ನಾಣಚ್ಚಿ ಹಾಡಿ ಸಹಿತ ಡಿ.ಬಿ.ಕುಪ್ಪೆ ವ್ಯಾಪ್ತಿಯಲ್ಲಿ ಮಾನವ ಸಂಘರ್ಷಕ್ಕೆ ಇಳಿದಿದ್ದ ಹುಲಿಯೂ ಸೇರಿ ಒಟ್ಟು 2 ಹುಲಿಗಳನ್ನು ಸೆರೆಹಿಡಿಯಲಾಗಿದೆ. ಈ ಹುಲಿಗಳನ್ನು ಮೈಸೂರು ಕೂರ್ಗಳ್ಳಿ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. –ನಿರಂಜನ್ ಮೂರ್ತಿ, ಸಿಸಿಎಫ್ ಕೊಡಗು

ಮೈಸೂರಿಗೆ ಸ್ಥಳಾಂತರ: ಸೆರೆ ಸಿಕ್ಕ ಹೆಣ್ಣು ಹುಲಿ ಅಂದಾಜು 11 ರಿಂದ 12 ವರ್ಷ ವಯಸ್ಸಿನದು ಎಂದು ಅರಣ್ಯಾಧಿಕಾರಿಗಳು ತಿಳಿಸಿದ್ದಾರೆ. ಹುಲಿಯ ಕಾಲುಗಳಲ್ಲಿ ಆಳವಾದ ಗಾಯದ ಗುರುತುಗಳಿವೆ. ಆದ್ದರಿಂದ ಕಾಡುಪ್ರಾಣಿಗಳನ್ನು ಬೇಟೆಯಾಡಲು ಸಾಧ್ಯವಾಗದೇ, ಮಾನವನ ಮೇಲೆ ದಾಳಿ ನಡೆಸಿರಬಹುದು ಎಂದು ಶಂಕಿಸಲಾಗಿದೆ. ಸ್ಥಳದಲ್ಲೇ ಪ್ರಥಮ ಚಿಕಿತ್ಸೆ ನೀಡಲಾಗಿದ್ದು, ಹೆಚ್ಚಿನ ಚಿಕಿತ್ಸೆ ಅಗತ್ಯವಿರುವ ಕಾರಣದಿಂದ ಆ ಹುಲಿಯನ್ನು ಮೈಸೂರು ಕೂರ್ಗಳ್ಳಿಯಲ್ಲಿರುವ ▶ 8ನೇ ಪುಟಕ್ಕೆ

ಆದಿವಾಸಿ ಯುವಕನ ಬಲಿ ಪಡೆದಿದ್ದ ಹೆಣ್ಣು ಹುಲಿ ಯಶಸ್ವಿ ಸೆರೆ

ಕಾದಾಟದಲ್ಲಿ ಗಾಯಗೊಂಡು ಅರಣ್ಯದಂಚಿನಲ್ಲಿ ಆತಂಕ ಮೂಡಿಸಿತ್ತು



ಬಳ್ಳೆ ಹಾಡಿ,ಫೆ.14(ಎಂಟಿವೈ)– ಹೆಚ್.ಡಿ.ಕೋಟೆಯ ಬಳ್ಳೆ ಹಾಡಿ ಸಮೀಪ ಆದಿವಾಸಿ ಯುವಕನ ಬಲಿ ಪಡೆದಿದ್ದ ಹೆಣ್ಣು ಹುಲಿಯನ್ನು ಅರಣ್ಯ ಇಲಾಖೆಯ ಸಿಬ್ಬಂದಿ ಸುರಕ್ಷಿತವಾಗಿ ಸೆರೆ ಹಿಡಿದು, ಮೈಸೂರಿನ ಕೂರ್ಗಳ್ಳಿಯಲ್ಲಿರುವ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಿದ್ದಾರೆ. ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಡಿ.ಬಿ.ಕುಪ್ಪೆ ವಲಯದ ಬಳ್ಳೆ ಕೆರೆ ಸುತ್ತಮುತ್ತಲಿನ ಪ್ರದೇಶದಲ್ಲಿ ಕಳೆದ ಒಂದು ವಾರದಿಂದ ಗಾಯಗೊಂಡ ಹುಲಿ ಓಡಾಡುತ್ತಿರುವುದನ್ನು ಗಮನಿಸಿದ್ದ ಅರಣ್ಯ ಸಿಬ್ಬಂದಿ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿದ್ದರು. ಫೆ.13ರಂದು ಕೂಂಬಿಂಗ್ ಕಾರ್ಯಾಚರಣೆ ಮಾಡಲಾಗಿತ್ತು. ಆ ವೇಳೆ ಗಂಭೀರವಾಗಿ ಗಾಯಗೊಂಡ ಸ್ಥಿತಿಯಲ್ಲಿದ್ದ ▶ 8ನೇ ಪುಟಕ್ಕೆ

ಗುಬ್ಬಿ ಬಳಿ ಮೋರಿ ಪೈಪ್‌ನಲ್ಲಿ ಹುಲಿ ಕಳೇಬರ ಪತ್ತೆ

ಹುಲಿಯ ಸಂತತಿಯೇ ಇಲ್ಲದ ಪ್ರದೇಶದಲ್ಲಿ ಇದೆಲ್ಲಿಂದ ಬಂತು: ಜನತೆಯ ಅಚ್ಚರಿ ಪ್ರಶ್ನೆ



ಮೈಸೂರು,ಫೆ.14(ಎಂಟಿವೈ)– ತುಮಕೂರು ಜಿಲ್ಲೆ ಗುಬ್ಬಿ ತಾಲೂಕಿನ ಗ್ರಾಮವೊಂದರ ತೋಟದ ಬಳಿ ಮೋರಿಯ ಪೈಪ್‌ನಲ್ಲಿ ಗಂಡು ಹುಲಿ ಕಳೇಬರ ಪತ್ತೆಯಾಗಿದ್ದು, ಈ ಭಾಗದ ಜನರಲ್ಲಿ ಅಚ್ಚರಿ ಮೂಡಿಸಿದೆ. ಗುಬ್ಬಿ ತಾಲೂಕು ಕುಂಟರಾಮನ ಹಳ್ಳಿ ಗೇಟ್ ಹಾಗೂ ಚಿಕ್ಕಹೆಡಗೆಹಳ್ಳಿ ಗ್ರಾಮದ ನಡುವೆ ಮೋರಿಯ ಪೈಪ್‌ನಲ್ಲಿ ಹುಲಿ ದೇಹ ಕಂಡು ಬಂದಿದೆ. ಇದು 6–7 ವರ್ಷದ ಗಂಡು ಹುಲಿ. ಇದುವರೆಗೂ ಈ ಭಾಗದಲ್ಲಿ ಹುಲಿಗಳ ಸುಳಿವೇ ▶ 8ನೇ ಪುಟಕ್ಕೆ

ಉತ್ತಮ ನಾಗರಿಕರಾಗಿ; ಇಲ್ಲ ಖಾಯಂ ಜೈಲೇ ಗತಿ

- ಮೈಸೂರು ರೌಡಿಗಳಿಗೆ ಪೊಲೀಸ್ ಆಯುಕ್ತರ ಖಡಕ್ ವಾರ್ನಿಂಗ್
- ಸಮಾಜಘಾತುಕ ಕೃತ್ಯಗಳಲ್ಲಿ ತೊಡಗಿದರೆ 'ಗೂಂಡಾ ಕಾಯ್ದೆ' ಖಚಿತ



ಮೈಸೂರು, ಫೆ. 14(ಆರ್‌ಕೆ)– ಸಮಾಜಘಾತುಕ ಚಟುವಟಿಕೆಗಳಲ್ಲಿ ಮುಂದುವರೆದರೆ, ಸಮಾಜದಲ್ಲಿ ಶಾಂತಿ ಕದಡಿದರೆ ಖಾಯಂ ಆಗಿ ಜೈಲಿನಲ್ಲಿರಬೇಕಾಗುತ್ತದೆ ಎಂದು ರೌಡಿಗಳಿಗೆ ಮೈಸೂರು ನಗರ ಪೊಲೀಸ್ ಆಯುಕ್ತ ಡಾ. ಬಿ. ರಮೇಶ್ ಖಡಕ್ ಎಚ್ಚರಿಕೆ ನೀಡಿದ್ದಾರೆ.

ಚುನಾವಣೆ ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಮೈಸೂರು ನಗರದಾದ್ಯಂತ ಇಂದು ಮುಂಜಾನೆ ಎಲ್ಲಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಏಕಕಾಲಕ್ಕೆ ದಿಢೀರ್ ದಾಳಿ ನಡೆಸಿ, ಹೆಬ್ಬಾಳು ಠಾಣಾ ಆವರಣಕ್ಕೆ ರೌಡಿಗಳನ್ನು ಕರೆತಂದು ಪರೇಡ್ ನಡೆಸಲಾಯಿತು.

2022ರ ಡಿಸೆಂಬರ್ 13ರಂದು ಮೈಸೂರು ನಗರದ 48 ಮಂದಿ ರೌಡಿಗಳ ಮನೆ ಮೇಲೆ ದಾಳಿ ನಡೆಸಿ, ಕೆಲವರ ಮನೆಯಲ್ಲಿ ಮಾರಕಾಸ್ತ್ರ ವಶಪಡಿಸಿಕೊಂಡಿದ್ದರು. ಅವರನ್ನು ಇದೇ ಹೆಬ್ಬಾಳು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು, ವಾರ್ನಿಂಗ್ ನೀಡಿದ್ದರು. ಇಂದು ಎರಡನೇ ಬಾರಿ ಎಲ್ಲಾ 17 ಪೊಲೀಸ್ ಠಾಣೆ ವ್ಯಾಪ್ತಿಯ 76 ಮಂದಿ ರೌಡಿಗಳನ್ನು ಕರೆತಂದು ರೌಡಿ ಚಟುವಟಿಕೆಗಳನ್ನು ಮುಂದುವರಿಸದಂತೆ ತಾಕೀತು ಮಾಡಿದರು.

ಠಾಣಾಧಿಕಾರಿಗಳ ಗಮನಕ್ಕೆ ಬಾರದಂತೆ ನಗರದಿಂದ ಹೊರಗೆ ಹೋಗಬಾರದು, ಗುಂಪುಗಾರಿಕೆ ಜಗಳ, ಹಣಕಾಸು ವ್ಯವಹಾರ, ರಿಯಲ್ ಎಸ್ಟೇಟ್ ವಿಚಾರದಲ್ಲಿ ಗೊಂದಲ, ರಾಜಕೀಯ ವ್ಯಕ್ತಿಗಳೊಂದಿಗೆ ಗುರ್ತಿಸಿಕೊಂಡು ದಬ್ಬಾಳಿಕೆ ಮಾಡುವುದು, ಸುಲಿಗೆ, ಕೊಲೆ, ಹಲ್ಲೆಯಂತಹ ಅಪರಾಧ ಕೃತ್ಯಗಳಲ್ಲಿ ಭಾಗಿಯಾಗಿರುವುದು ಕಂಡುಬಂದರೆ ಗೂಂಡಾ ಕಾಯ್ದೆಯಡಿ ಪ್ರಕರಣ ದಾಖಲಿಸಿ ಖಾಯಂ ಆಗಿ ಜೈಲಿಗೆ ಕಳುಹಿಸುವುದಾಗಿ ರಮೇಶ್ ಅವರು ಎಚ್ಚರಿಕೆ ನೀಡಿದರು.

ಸಮಾಜ ವಿರೋಧಿ ಚಟುವಟಿಕೆ ಮೂಲಕ ನಾಗರಿಕರಿಗೆ ಭಯ ಉಂಟು ಮಾಡುವುದು, ಹೆದರಿಸುವುದು, ಬಾರ್ ಅಂಡ್ ರೆಸ್ಟೋರೆಂಟ್‌ಗಳಲ್ಲಿ ಕಂಠಪೂರ್ತಿ ಕುಡಿದು ಗಲಾಟೆ ಮಾಡುವುದು, ತಡರಾತ್ರಿ ಅಡ್ಡಾಡುವುದು ಕಂಡುಬಂದಲ್ಲಿ ಜಿಲ್ಲೆಯಿಂದ ಗಡೀಪಾರು ಮಾಡುತ್ತೇವೆ. ರೌಡಿಸಂ ಮಾಡದಿದ್ದರೂ, ರೌಡಿಯಂತೆ ವೇಷಭೂಷಣವಿದ್ದರೂ ನಾವು ಸಹಿಸುವುದಿಲ್ಲ ಎಂದರು.


ಹೇರ್ ಕಟ್ ಮಾಡಿಸಿ: ಉದ್ದುದ್ದ ಜುಟ್ಟು ಬಿಟ್ಟುಕೊಂಡು, ಹರಿದ ಫ್ಯಾಷನ್ ಜೀನ್ಸ್ ಪ್ಯಾಂಟ್ ತೊಟ್ಟು ಬೈಕ್‌ಗಳಲ್ಲಿ ಓಡಾಡಿ ಸಮಾಜದಲ್ಲಿ ಸಾಮಾನ್ಯ ಜನರಿಗೆ ಭಯ ಉಂಟುಮಾಡಿದರೆ ಅಂತಹವರ ವಿರುದ್ಧವೂ ಕ್ರಮ ಜರುಗಿಸಬೇಕಾಗುತ್ತದೆ. ಸರಿಯಾಗಿ ಹೇರ್ ಕಟ್, ಶೇವಿಂಗ್ ಮಾಡಿಸಿಕೊಂಡು ನಾಗರಿಕರಂತಿರಬೇಕು. ಸಾಮಾನ್ಯ ಜನರಂತೆ ಶರ್ಟ್–ಪ್ಯಾಂಟ್ ಧರಿಸಿ ಗೌರವಯುತವಾಗಿ ಜೀವನ ನಡೆಸಿದರೆ ಒಳ್ಳೆಯದು ಎಂದು ಪೊಲೀಸ್ ಆಯುಕ್ತ ರಮೇಶ್ ಎಚ್ಚರಿಕೆ ನೀಡಿದರು.

ಎಲೆಕ್ಷನ್‌ಗೆ ನಿಲ್ಲಬೇಕಾ ನೀನು?: "ನಾನು ರೌಡಿ, ನನಗೂ ಚುನಾವಣೆಯಲ್ಲಿ ನಿಲ್ಲಲು ಟಿಕೆಟ್ ನೀಡಿ" ಎಂದು ಕೋರ್ಟ್ ಮುಂಭಾಗದ ಗಾಂಧಿ ಪ್ರತಿಮೆ ಬಳಿ ಒಬ್ಬಂಟಿಯಾಗಿ ಪ್ರತಿಭಟನೆ ನಡೆಸಿದ್ದ ಕ್ಯಾತಮಾರನಹಳ್ಳಿಯ ಮಂಜು ಅಲಿಯಾಸ್ ಪಾನಿಪುರಿ ಮಂಜನಿಗೆ ಎಚ್ಚರಿಕೆ ನೀಡಿದ ಪೊಲೀಸ್ ಆಯುಕ್ತರು, "ಏನೋ, ಎಲೆಕ್ಷನ್‌ಗೆ ನಿಲ್ತೀಯಾ, ಟಿಕೆಟ್ ಕೊಡ್ಬೇಕಾ ನಿಂಗೆ" ಎಂದು ಪ್ರಶ್ನಿಸಿದರಲ್ಲದೆ, ಮೊದಲು ಎಲ್ಲರಂತೆ ಒಳ್ಳೆಯ ಜೀವನ ನಡೆಸು ಎಂದು ಎಚ್ಚರಿಕೆ ನೀಡಿದರು.

15 ಮಂದಿ ಗಡಿಪಾರು!: ರೌಡಿ ಚಟುವಟಿಕೆಯಲ್ಲಿ ಸಕ್ರಿಯವಾಗಿರುವ 15 ಮಂದಿಯನ್ನು ಈ ಬಾರಿ ಗಡಿಪಾರು ಮಾಡಲು ಪ್ರಕ್ರಿಯೆ ನಡೆಯುತ್ತಿದೆ. ನೀವು ಎಲ್ಲೆಲ್ಲಿ, ಯಾರ್‍ಯಾರ ಜೊತೆ ಯಾವಾಗ ಓಡಾಡುತ್ತಿದ್ದೀರಿ, ಏನ್ ಮಾಡ್ತಾ ಇದ್ದೀರಿ ಎಂಬ ಎಲ್ಲಾ ಮಾಹಿತಿಗಳೂ ನಮ್ಮ ಬಳಿ ಇವೆ. ನಿಮ್ಮ ಅಟ್ಟಹಾಸ ಹೀಗೆಯೇ ಮುಂದುವರೆದರೆ ಗೂಂಡಾ ಕಾಯ್ದೆ ಪ್ರಕರಣ ದಾಖಲಿಸಬೇಕಾಗುತ್ತದೆ ಎಂದು ಪೊಲೀಸ್ ಆಯುಕ್ತ ವಾರ್ನಿಂಗ್ ಮಾಡಿದರು. ಡಿಸಿಪಿಗಳಾದ ಎಂ. ಮುತ್ತುರಾಜ್, ಎಸ್.ಜಾಹ್ನವಿ, ಎಸಿಪಿಗಳಾದ ಶಾಂತ ಮಲ್ಲಪ್ಪ ಅಶ್ವಥನಾರಾಯಣ, ಗಜೇಂದ್ರಪ್ರಸಾದ್, ಎಸ್.ಇ. ಗಂಗಾಧರಸ್ವಾಮಿ, ಸಂದೇಶ್‌ಕುಮಾರ್, ಎಲ್ಲಾ ಠಾಣೆಗಳ ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್‌ಗಳು ಈ ಸಂದರ್ಭ ಹಾಜರಿದ್ದರು.

ಅರಮನೆ ಮುಜರಾಯಿ ದೇವಾಲಯಗಳಲ್ಲಿ ಮಹಾಶಿವರಾತ್ರಿ

ಮೈಸೂರು,ಫೆ.14– ಅರಮನೆ ಮುಜರಾಯಿ ದೇವಾಲಯಗಳಲ್ಲಿ ಒಂದಾದ ಶ್ರೀ



ತ್ರಿನೇಶ್ವರಸ್ವಾಮಿ ದೇವಾಲಯದಲ್ಲಿ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ಮೂಲ ದೇವರಿಗೆ ಚಿನ್ನದ ಕೊಳಗ(ಮುಖವಾಡ) ವನ್ನು ಧರಿಸಲಾಗುವುದು. ಫೆ.18 ರಂದು ಭಕ್ತಾದಿಗಳ ಅನುಕೂಲಕ್ಕಾಗಿ ಬೆಳಗ್ಗೆ 6 ಗಂಟೆಯಿಂದಲೇ ದೇವರ ದರ್ಶನಕ್ಕೆ ಅವಕಾಶವಿರುತ್ತದೆ. ದೇವಾಲಯದಲ್ಲಿ ವಿಶೇಷ ಪೂಜೆ, ಅಭಿಷೇಕ ಹಾಗೂ ಪ್ರಸಾದ ವಿತರಣೆಗೆ ಏರ್ಪಾಡು ಮಾಡಲಾಗಿದೆ. ಫೆ.19 ರಂದು ಮೂಲ ದೇವರಿಗೆ ಚಿನ್ನದ ಕೊಳಗವನ್ನು ಬೆಳಗ್ಗೆ 7 ರಿಂದ ಮಧ್ಯಾಹ್ನ 2 ಗಂಟೆಯವರೆಗೆ ಹಾಗೂ ಸಂಜೆ 5 ರಿಂದ ರಾತ್ರಿ 8 ಗಂಟೆಯವರೆಗೆ ಧರಿಸಲಾಗುವುದು. ರಾಮಾನುಜ ರಸ್ತೆಯಲ್ಲಿರುವ ಶ್ರೀ ಕಾಮೇಶ್ವರ ಕಾಮೇಶ್ವರಿ ದೇವಾಲಯದಲ್ಲಿಯೂ ಸಹ ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ದೇವರಿಗೆ ವಿಶೇಷ ಪೂಜೆ ಅಭಿಷೇಕ ಹಾಗೂ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಹಾಗೂ ಸಂಜೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದು ಅರಮನೆ ಮುಜರಾಯಿ ಸಂಸ್ಥೆಗಳ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ 6ನೇ ತರಗತಿ ಪ್ರವೇಶಕ್ಕೆ ನೇರ ದಾಖಲಾತಿ

ಮೈಸೂರು, ಫೆ.14– 2023–24ನೇ ಸಾಲಿನ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದಡಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಏಕಲವ್ಯ ಮಾದರಿ, ಅಟಲ್ ಬಿಹಾರಿ ವಾಜಪೇಯಿ, ಡಾ.ಬಿ.ಆರ್. ಅಂಬೇಡ್ಕರ್, ಇಂದಿರಾ ಗಾಂಧಿ ವಸತಿ ಶಾಲೆಗಳಿಗೆ 6ನೇ ತರಗತಿ ಪ್ರವೇಶಾತಿಯಲ್ಲಿ ಸಫಾಯಿ ಕರ್ಮಚಾರಿ, ಪೌರಕಾರ್ಮಿಕರ, ಮ್ಯಾನುಯಲ್ ಸ್ಕ್ಯಾವೆಂಜರ್, ಸ್ಮಶಾನ ಕಾರ್ಮಿಕರ ಮಕ್ಕಳಿಗೆ ವಿಶೇಷ ದಾಖಲಾತಿ ಮೂಲಕ ನೇರ ದಾಖಲಾತಿಗೆ ಅವಕಾಶ ಕಲ್ಪಿಸಲಾಗಿರುತ್ತದೆ. ಈ ವಿದ್ಯಾರ್ಥಿಗಳಿಗೆ 2023–24ನೇ ಸಾಲಿನ ಪ್ರವೇಶ ಪರೀಕ್ಷೆಯಿಂದ ವಿನಾಯಿತಿ ನೀಡಲಾಗಿದೆ. ಸಫಾಯಿ ಕರ್ಮಚಾರಿ ನೌಕರರ ಮಕ್ಕಳಿಗೆ ಶೇ.5 ರಷ್ಟು ಸ್ಥಾನಗಳು ಹಾಗೂ ಸ್ಮಶಾನ ಕಾರ್ಮಿಕ ನೌಕರರ ಮಕ್ಕಳಿಗೆ ಶೇ.2ರಷ್ಟು ಸ್ಥಾನಗಳಿದ್ದು, ಹತ್ತಿರದ ವಸತಿ ಶಾಲೆಯಲ್ಲಿ ಪ್ರವೇಶಾತಿ ಪಡೆಯಲು ಅರ್ಜಿ ಸಲ್ಲಿಸುವಾಗ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಸಲ್ಲಿಸಬೇಕು.

ಸಫಾಯಿ ಕರ್ಮಚಾರಿ, ಪೌರಕಾರ್ಮಿಕರ, ಮ್ಯಾನುಯಲ್ ಸ್ಕ್ಯಾವೆಂಜರ್, ಸ್ಮಶಾನ ಕಾರ್ಮಿಕರು ಸರ್ಕಾರ ನಿಗದಿ ಪಡಿಸಿರುವ ನಿಯಮಾನುಸಾರ ಸಂಬಂಧಪಟ್ಟ ಪಟ್ಟಣ ಪಂಚಾಯತಿ, ನಗರ ಸಭೆ, ಮಹಾನಗರ ಪಾಲಿಕೆಯ ಮುಖ್ಯ ಅಧಿಕಾರಿ, ಪೌರಾಯುಕ್ತರು, ಆಯುಕ್ತರಿಂದ ಮತ್ತು ಸಕ್ಷಮ ಪ್ರಾಧಿಕಾರಗಳಿಂದ ನಿಗದಿತ ನಮೂನೆಯಲ್ಲಿ ಪ್ರಮಾಣ ಪತ್ರ ಮತ್ತು ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಗುರುತಿನ ಚೀಟಿ ಹಾಜರುಪಡಿಸಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಮಟ್ಟದ, ತಾಲೂಕು ಮಟ್ಟದ ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಕಚೇರಿ ಹಾಗೂ ಹತ್ತಿರದ ವಸತಿ ಶಾಲೆ ಹಾಗೂ ಕಾಲೇಜನ್ನು ಸಂಪರ್ಕಿಸಬಹುದು ಎಂದು ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸರ್ವಜನಾಂಗದ ಶ್ರೇಯೋಭಿವೃದ್ಧಿಗೆ ಬಿಜೆಪಿ ಕಟಿಬದ್ಧ

ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಎನ್.ಅರುಣ್‌ಕುಮಾರ್‌ಗೌಡ



ಮೈಸೂರು, ಫೆ.14– ಸರ್ವ ಜನಾಂಗಗಳ ಶ್ರೇಯೋಭಿವೃದ್ಧಿಗೆ ಬಿಜೆಪಿ ಸಂಕಲ್ಪ ಮಾಡಿದ್ದು, ಎಲ್ಲಾ ಜನಾಂಗಗಳ ಉನ್ನತೀಕರಣಕ್ಕಾಗಿ ಶ್ರಮಿಸುವ ಏಕೈಕ ಪಕ್ಷ ಬಿಜೆಪಿ ಎಂದು ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ನಿಕಟಪೂರ್ವ ಅಧ್ಯಕ್ಷ ಹಾಗೂ ಮುಖಂಡರಾದ ಎನ್.ಅರುಣ್‌ಕುಮಾರ್ ಗೌಡ ಹೇಳಿದರು.

ತಳೂರು ಗ್ರಾಮದ ದಲಿತ ಯುವ ಮುಖಂಡ ಮಂಜು ಅವರ ನಿವಾಸಕ್ಕೆ ಭೇಟಿ ನೀಡಿದ್ದ ಎನ್.ಅರುಣ್ ಕುಮಾರ್‌ಗೌಡರು, ಗ್ರಾಮದ ಯುವ ಮುಖಂಡರು ಹಾಗೂ ಗ್ರಾಮಸ್ಥರನ್ನು ಕುರಿತು ಮಾತನಾಡಿ, ಭಾರತೀಯ ಜನತಾ ಪಾರ್ಟಿ ಇದುವರೆಗೂ ಪರಿಶಿಷ್ಟ ಜನಾಂಗ ಹಾಗೂ ಪರಿಶಿಷ್ಟ ವರ್ಗಗಳ ಏಳಿಗೆಗೆ ಶ್ರಮಿಸುತ್ತಿದ್ದು, ಎಲ್ಲಾ ಸಮುದಾಯಗಳ ಶ್ರೇಯೋಭಿವೃದ್ಧಿಗೆ ಪಣತೊಟ್ಟು ಶ್ರಮಿಸುತ್ತಿದೆ ಎಂದರು.

ಈ ಬಾರಿಯ ವಿಧಾನಸಭಾ ಚುನಾವಣೆಯಲ್ಲಿ ಸರ್ವಜನಾಂಗದ ಮತದಾರರು ಭಾರತೀಯ ಜನತಾ ಪಾರ್ಟಿಯನ್ನು ಬೆಂಬಲಿಸಲು ನಿಶ್ಚಯಿಸಿದ್ದು, ಬಾಬಾ ಸಾಹೇಬ್ ಅಂಬೇಡ್ಕರ್‌ರವರ ನಿಜವಾದ ಆಶಯಗಳನ್ನು ಸಾಕಾರಗೊಳಿಸಲು ಮುಂದಾಗಿರುವ ಭಾರತೀಯ ಜನತಾ ಪಾರ್ಟಿಗೆ, ಎಲ್ಲ ಸಮುದಾಯಗಳು ಜಾತ್ಯಾತೀತವಾಗಿ ಬೆಂಬಲ ನೀಡುವುದು ಅನಿವಾರ್ಯವಾಗಿದೆ ಎಂದರು. ಇದುವರೆಗೂ ಕಾಂಗ್ರೆಸ್ ಹಾಗೂ ಜೆಡಿಎಸ್ ಪಕ್ಷಗಳು ದಲಿತರ ಉದ್ಧಾರಕ್ಕಾಗಿ ಯಾವುದೇ ರೀತಿಯ ಯೋಜನೆ ಹಮ್ಮಿಕೊಂಡಿರಲಿಲ್ಲ. ನರೇಂದ್ರ ಮೋದಿ ಜಿ ನೇತೃತ್ವದ ಕೇಂದ್ರ ಸರ್ಕಾರ, ಯಡಿಯೂರಪ್ಪ ಮತ್ತು ಬಸವರಾಜ್ ಬೊಮ್ಮಾಯಿ ನೇತೃತ್ವದ ರಾಜ್ಯ ಸರ್ಕಾರ ದಲಿತಪರ ಯೋಜನೆಗಳನ್ನು ಜಾರಿಗೆ ತರುವಲ್ಲಿ ಯಶಸ್ವಿಯಾದರು ಎಂಬುದನ್ನು ಸಮುದಾಯದವರು ಅರ್ಥೈಸಿಕೊಂಡಿದ್ದಾರೆ ಎಂದರು. ಈ ಸಂದರ್ಭದಲ್ಲಿ ಚಾಮುಂಡೇಶ್ವರಿ ಕ್ಷೇತ್ರದ ಬಿಜೆಪಿ ಮುಖಂಡರುಗಳಾದ ಗೋಪಾಲ್ ಗೌಡ, ವಿಜಯ್ ಗೌಡ, ಎನ್.ಕೆ.ರವಿಕುಮಾರ್, ಮಂಜು, ಮೂಗನಹುಂಡಿ ಪ್ರಭು, ಕೋಟೆಹುಂಡಿ ಮಾಲೇಗೌಡ, ಹಾಗೂ ತಳೂರು ಗ್ರಾಮದ ಯುವ ಮುಖಂಡರುಗಳಾದ ಮಂಜು, ರಂಗಸ್ವಾಮಿ, ವಿನೋದ, ಮನು, ಅಪ್ಪು ಪ್ರಸನ್ನ, ದರ್ಶನ್, ಸಿದ್ದರಾಜು. ಟಿವಿ ಹರೀಶ್ ಸೇರಿದಂತೆ ಹಲವರು ಹಾಜರಿದ್ದರು.


ನಿಧನ




ಆರ್.ವಿ.ಬದ್ರಿಪ್ರಸಾದ್

ಮೈಸೂರು, ಫೆ. 14– ಮೈಸೂರಿನ ನಿವಾಸಿ ಬೆಂಗಳೂರಿನ ಎಸ್ಕಾರ್ಟ್ಸ್ ಕಂಪನಿ ಹಾಗೂ ಜೆಮಿನಿ ಸ್ಟಿಲ್ಸ್ ಟ್ಯೂಬ್ಸ್‌ನ ನಿವೃತ್ತ ಉದ್ಯೋಗಿ ಆರ್.ವಿ.ಬದ್ರಿಪ್ರಸಾದ್ (66) ಹೃದಯಾಘಾತದಿಂದ ಸ್ವಗೃಹ ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿ ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಇಬ್ಬರು ಪುತ್ರಿಯರಾದ ವರ್ಣ ಹಾಗೂ ವಿಂದ್ಯಾ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬೆಂಗಳೂರಿನ ಪಣತ್ತೂರು ಚಿತಾಗಾರದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚೆನ್ನಮ್ಮ




ನಂಜನಗೂಡು: ಪಟ್ಟಣದ ಒಕ್ಕಲಗೇರಿ ನಿವಾಸಿ ಚೆನ್ನಮ್ಮ (88) ಮಂಗಳವಾರ ನಿಧನರಾದರು. ಮೃತರು ಪುತ್ರ ಪತ್ರಕರ್ತ ಕೆಂಪೇಗೌಡ, ಓರ್ವ ಪುತ್ರಿ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಶ್ರೀಪತಿ ಜೋಯಿಸ್

ಮೈಸೂರು: ನಿವೃತ್ತ ಮುಖ್ಯೋಪಾಧ್ಯಾಯರು, ಜ್ಯೋತಿಷಿಗಳು ಹಾಗೂ ನಂಜನಗೂಡಿನ ಟೀಚರ್ಸ್ ಲೇಔಟ್ ನಿವಾಸಿ ಶ್ರೀಪತಿ ಜೋಯಿಸ್ (91) ಮಂಗಳವಾರ ನಿಧನರಾದರು. ಮೃತರು ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಪಟ್ಟಣದ ಕಪಿಲಾ ನದಿ ದಡದಲ್ಲಿರುವ ಹದಿನಾರುಕಾಲು ಮಂಟಪದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಂಜಮ್ಮ



ಹುಣಸೂರು: ತಾಲೂಕಿನ ಹೊಸೂರು ಕೊಡಗು ಕಾಲೋನಿ ನಿವಾಸಿ ಲೇ.ಸಂಜೀವಶೆಟ್ಟಿ ಪತ್ನಿ ಮಂಜಮ್ಮ (65) ಮಂಗಳವಾರ ನಿಧನರಾದರು. ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಶ್ರೀಮತಿ ತಿಮ್ಮಮ್ಮ

ಪಿರಿಯಾಪಟ್ಟಣ: ತಾಲೂಕಿನ ಕೊಬ್ಬಾಲಪುರ ಗ್ರಾಮದ ದಿವಂಗತ ಪುಟ್ಟೇಗೌಡರ ಧರ್ಮಪತ್ನಿ ಶ್ರೀಮತಿ ತಿಮ್ಮಮ್ಮ ಅವರು ಇಂದು ನಿಧನರಾದರು. ಇವರಿಗೆ 97 ವರ್ಷ ವಯಸ್ಸಾಗಿತ್ತು. ಮೃತರು ಮೂವರು ಪುತ್ರರು, ಮೂವರು ಪುತ್ರಿಯರು, ಮೊಮ್ಮಕ್ಕಳು, ಮರಿಮಕ್ಕಳು ಸೇರಿದಂತೆ ಅಪಾರ ಬಂಧುವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ (ಬುಧವಾರ) ಮಧ್ಯಾಹ್ನ 1.30ಕ್ಕೆ ಹುಣಸೂರು ತಾಲೂಕು ಗದ್ದಿಗೆಯಲ್ಲಿನ ಹಿರಿಯ ಮಗನ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಭವ್ಯ ಕರ್ನಾಟಕ ನಿರ್ಮಾಣಕ್ಕೆ ಆದಿಚುಂಚನಗಿರಿ ಮಠದ ಪಾತ್ರ ಹಿರಿದು

● ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸ ● ನಿರ್ಮಲಾನಂದನಾಥ ಸ್ವಾಮೀಜಿಯವರ ಪಟ್ಟಾಭಿಷೇಕದ ದಶಮಾನೋತ್ಸವ ● ಶ್ರೀಗಳ ದಶಕದ ಸಾಧನೆ ಅಭೂತಪೂರ್ವವಾದುದು ● ಅಂತರರಾಷ್ಟ್ರೀಯ ಗುಣಮಟ್ಟದ ಸಂಸ್ಥೆಗಳ ನಿರ್ಮಾಣದ ಹೆಗ್ಗಳಿಕೆ

ಬೆಂಗಳೂರು, ಫೆ. 14(ಕೆಎಂಶಿ)– ಆದಿಚುಂಚನಗಿರಿ ಮಠ ತನ್ನದೇ ಇತಿಹಾಸ ಹೊಂದಿದ್ದು, ಭವ್ಯ ಕರ್ನಾಟಕ ಕಟ್ಟಲು ದೊಡ್ಡ ಸಾಧನೆ ಮಠದಿಂದ ಆಗಲಿದೆ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ವಿಶ್ವಾಸ ವ್ಯಕ್ತಪಡಿಸಿದರು.

ಆದಿಚುಂಚನಗಿರಿ ಪೀಠಾಧ್ಯಕ್ಷ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿಗಳ ಪಟ್ಟಾಭಿಷೇಕದ ದಶಮಾನೋತ್ಸವ ಸಮಾರಂಭ, ಬಿಜಿಎಸ್ ನ್ಯಾಷನಲ್ ಪಬ್ಲಿಕ್ ಸ್ಕೂಲ್ ಜ್ಯೋತಿರ್ದಾನ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಿರ್ಮಲಾನಂದನಾಥ ಸ್ವಾಮೀಜಿಗಳ ಪಟ್ಟಾಭಿಷೇಕವಾಗಿ ಒಂದು ದಶಕ ಕಳೆದಿದ್ದು, ಇದು ಆತ್ಮಾವಲೋಕನ ಹಾಗೂ ಸಿಂಹಾವಲೋಕನ ಮಾಡಿಕೊಳ್ಳುವ ಘಟ್ಟ. ಹತ್ತು ವರ್ಷಗಳಲ್ಲಿ ನಿರ್ಮಲಾನಂದನಾಥ ಸ್ವಾಮೀಜಿಗಳು ಅಪಾರ ಸಾಧನೆ ಮಾಡಿದ್ದಾರೆ.

ಬಾಲಗಂಗಾಧರನಾಥ ಸ್ವಾಮಿಗಳು ಬಿತ್ತಿದ ಬೀಜ ಹೆಮ್ಮರವಾಗಿ ಬೆಳೆದಿದೆ. ನಿರ್ಮಲಾನಂದನಾಥ ಸ್ವಾಮೀಜಿಗಳ ಕಾಲದಲ್ಲಿ ಸಂಸ್ಥೆ ಬೆಳೆಯುತ್ತಿದೆ. ಪ್ರಕಾಶನಾಥ ಸ್ವಾಮೀಜಿ ಕೂಡ ಬೆಂಗಳೂರಿನ ಸಂಸ್ಥೆಗಳನ್ನು ಕಟ್ಟಿ ಬೆಳೆಸುವಲ್ಲಿ ಅತ್ಯಂತ ಮಹತ್ವದ ಪಾತ್ರ ವಹಿಸಿದ್ದಾರೆ. ಕಷ್ಟಪಟ್ಟು ನಿರ್ಮಾಣವಾಗಿರುವ ಸಂಸ್ಥೆಗಳನ್ನು ಅಂತರರಾಷ್ಟ್ರೀಯ ಗುಣಮಟ್ಟ ಕಾಯ್ದುಕೊಂಡು ಬೆಳೆಸಿರುವುದು ಸಂತಸದ ಸಂಗತಿ ಎಂದರು.

ನಿರ್ಮಲಾನಂದನಾಥ ಸ್ವಾಮೀಜಿ ಅವರು ಅಪರೂಪದ ಸ್ವಾಮೀಜಿಗಳು. ವಿಜ್ಞಾನ ಮತ್ತು ತತ್ವಜ್ಞಾನ ಒಂದೇ ನಾಣ್ಯದ ಎರಡು ಮುಖಗಳು. ಅವೆರಡನ್ನೂ ಆಳವಾಗಿ ಅಧ್ಯಯನ ಮಾಡಿ ಸಮಾಜಕ್ಕೆ ನೀಡುವ



ದೊಡ್ಡ ಸಾಧನೆ ಅವರದ್ದು. ವಿಚಾರಗಳನ್ನು ವೈಜ್ಞಾನಿಕವಾಗಿ ನೋಡಿ ತತ್ವಜ್ಞಾನವನ್ನು ಅಳವಡಿಸಿ ಅಂತಿಮ ನಿರ್ಧಾರ ತೆಗೆದುಕೊಳ್ಳುವ ವಿಧಿವಿಧಾನ ಸ್ವಾಮೀಜಿಗಳಲ್ಲಿದ್ದರೆ ಇಡೀ ಸಮಾಜಕ್ಕೆ ದಾರಿದೀಪವಾಗಬಹುದು ಎನ್ನಲು ಅವರು ಉದಾಹರಣೆಯಾಗಿದ್ದಾರೆ ಎಂದರು. ಒಂದು ಲಕ್ಷ ಐವತ್ತು ಸಾವಿರ ಮಕ್ಕಳು ಬಿಜಿಎಸ್ ಸಂಸ್ಥೆಗಳಲ್ಲಿ ಕಲಿಯುತ್ತಿದ್ದಾರೆ. ವೈದ್ಯಕೀಯ ಶಿಕ್ಷಣ, ಆಸ್ಪತ್ರೆಯಿಂದ ಪಬ್ಲಿಕ್ ಶಾಲೆಯವರೆಗೆ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ತಮ್ಮದೇ ಆದ ಬ್ರಾಂಡ್ ಸೃಷ್ಟಿಸಿರುವುದು ಕರ್ನಾಟಕದ ಹೆಮ್ಮೆ.

ಕರ್ನಾಟಕದಾದ್ಯಂತ ಸಂಸ್ಥೆಯ ಸೇವೆಗಳು ಲಭ್ಯವಾಗಬೇಕೆನ್ನುವುದು ಸ್ವಾಮೀಜಿಗಳ ಇಚ್ಛೆ. ಉತ್ತರ ಕರ್ನಾಟಕದಲ್ಲಿ ಈ ಸಂಸ್ಥೆಗಳನ್ನು ತೆರೆದು ಅಭಿವೃದ್ಧಿ ಮಾಡುತ್ತಿದ್ದಾರೆ. ಕಿಡ್ನಿ, ಲಿವರ್ ಕಸಿ ಮಾಡಿಸಿಕೊಳ್ಳಲು ಇತ್ತ ಕರ್ನಾಟಕದ ಜನ ಬಿಜಿಎಸ್ ಆಸ್ಪತ್ರೆಗೆ ನೇರವಾಗಿ ಬರುವಷ್ಟು ಸೌಲಭ್ಯಗಳು ದೊರೆಯುತ್ತಿವೆ ಎಂದರು.

ಬಿಜಿಎಸ್ ಸಂಸ್ಥೆಗಳು ಉತ್ತರ ಮತ್ತು ದಕ್ಷಿಣ ಬೆಸೆಯುವ ಕೇಂದ್ರವಾಗಿದೆ ಎಂದು ತಿಳಿಸಿದರು.

ಗ್ರಾಮೀಣ ಮಕ್ಕಳಿಗೆ ವೈಜ್ಞಾನಿಕ ಮನೋಭಾವ ಮೂಡಿಸುವಲ್ಲಿ ಮಠ ಪ್ರಮುಖ ಪಾತ್ರ ವಹಿಸಿದೆ. ಸರ್ಕಾರ ಮಾಡುವ ಕೆಲಸವನ್ನು ಕರ್ನಾಟಕದ ಅನೇಕ ಮಠಗಳು ಮಾಡಿಕೊಂಡು ಬಂದಿವೆ.

ಕರ್ನಾಟಕದಲ್ಲಿ ಶಿಕ್ಷಣ ಪ್ರಮಾಣ ಹೆಚ್ಚಳವಾಗಿದ್ದರೆ, ಸಾಧನೆಯಾಗಿದ್ದರೆ ಅದಕ್ಕೆ ಮಠಮಾನ್ಯಗಳು ಯಾವುದೇ ಬೆಂಬಲವಿಲ್ಲದೆ ಮಾಡಿರುವುದು ಕಾರಣ. ನಿರ್ಮಲಾನಂದನಾಥ ಸ್ವಾಮೀಜಿಗಳ ಒಂದು ದಶಕದ ಸಾಧನೆ ಅಭೂತಪೂರ್ವವಾಗಿದೆ. ಆತ್ಮಾವಲೋಕನ ಮಾಡಿಕೊಳ್ಳುವ ಸಂದರ್ಭದಲ್ಲಿ ಭವಿಷ್ಯದ ಚಿಂತನೆ ಮಾಡಬೇಕು. ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಶಿಕ್ಷಣ ನೀಡಿ ಅವನನ್ನು ಸ್ವಾವಲಂಬಿಯನ್ನಾಗಿಸಲು ನಿರ್ಮಲಾನಂದನಾಥ ಸ್ವಾಮೀಜಿ ಅವರ ಮಾರ್ಗದರ್ಶನ ಹಾಗೂ ಆಶೀರ್ವಾದ ಅಗತ್ಯ. ಗ್ರಾಮೀಣ ಭಾಗದ ರೈತರ ಮಕ್ಕಳಿಗೆ ಇದು ದೊರೆಯಲಿ ಎಂದರು. ಮಕ್ಕಳ ಪ್ರೌಢಶಾಲಾ ಜೀವನ ಅತ್ಯಂತ ಮಹತ್ವದ ಘಟ್ಟ, ಮಕ್ಕಳನ್ನು ನೋಡಿದಾಗ ನಾನು ನಮ್ಮ ರಾಜ್ಯ ಹಾಗೂ ದೇಶದ ಭವಿಷ್ಯದ ಬಗ್ಗೆ ಆಶಾದಾಯಕವಾಗಿ ಆಲೋಚಿಸುತ್ತೇನೆ. ಭವಿಷ್ಯ ನಿಮ್ಮಲ್ಲೇ ಅಡಗಿದ್ದು, ದೇಶವನ್ನು ಯುವಜನಾಂಗ ಕಟ್ಟಬೇಕು.

ಶೇ.40ರಷ್ಟು ಯುವ ಸಮೂಹವಿರುವ ಈ ದೇಶಕ್ಕೆ ಅತ್ಯಂತ ದೊಡ್ಡ ಭವಿಷ್ಯವಿದೆ. ನಿರಂತರ ಪ್ರಯತ್ನ ಮಾಡಬೇಕು. ಪರಿಶ್ರಮದಲ್ಲಿ ನಂಬಿಕೆಯಿಡಿ. ಸೋಲುಗಳಿಗೆ ಎದೆಗುಂದಬೇಡಿ. ಪರಮಹಂಸ ಪಕ್ಷಿಯಂತೆ ಎತ್ತರಕ್ಕೆ ಹಾರುವ ಕನಸು ಕಾಣಿರಿ ಎಂದು ಮುಖ್ಯಮಂತ್ರಿಗಳು ಕಿವಿಮಾತು ಹೇಳಿದರು.

ನಮ್ಮ ಅಧಿಕಾರಿಗಳು ಇನ್ನೂ ಬ್ರಿಟಿಷ್ ಆಡಳಿತ ವ್ಯವಸ್ಥೆಯ ಮನಸ್ಥಿತಿವುಳ್ಳವರು!

● ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅಸಮಾಧಾನ ● ಶ್ರೀರಂಗಪಟ್ಟಣದ ಗ್ರಾಮಗಳ ಕುಡಿಯುವ ನೀರು ಪೂರೈಕೆ ಕಾಮಗಾರಿ ವಿಳಂಬ ಸಂಬಂಧ ಶಾಸಕ ರವೀಂದ್ರ ಶ್ರೀಕಂಠಯ್ಯ ಪ್ರಸ್ತಾಪಕ್ಕೆ ಪ್ರತಿಕ್ರಿಯೆ

ಬೆಂಗಳೂರು, ಫೆ. 14(ಕೆಎಂಶಿ)– ರಾಜ್ಯದಲ್ಲಿ ಕುಡಿಯುವ ನೀರು ಯೋಜನೆಯ ವಿಚಾರದಲ್ಲಿ ನಿರ್ಲಕ್ಷ್ಯ ಮನೋಭಾವ ತಳೆದಿರುವ ಅಧಿಕಾರಿಗಳು ಇನ್ನೂ ಬ್ರಿಟಿಷ್ ಆಡಳಿತ ವ್ಯವಸ್ಥೆಯ ಮನಸ್ಥಿತಿಯಲ್ಲಿದ್ದಾರೆ ಎಂದು ವಿಧಾನಸಭಾಧ್ಯಕ್ಷರಾದ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ವಿಧಾನಸಭೆಯಲ್ಲಿಂದು ಅಸಮಾಧಾನ ವ್ಯಕ್ತಪಡಿಸಿದರು.



ಪ್ರಶ್ನೋತ್ತರ ಅವಧಿಯಲ್ಲಿ ಶಾಸಕ ರವೀಂದ್ರ ಶ್ರೀಕಂಠಯ್ಯ ಅವರು ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರದ ಗಾಮನಹಳ್ಳಿ ಸೇರಿದಂತೆ 16 ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ ಮಂಜೂರಾಗಿದ್ದರೂ ಯೋಜನೆ ಆಮೆಗತಿಯಲ್ಲಿ ಸಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಮಧ್ಯೆ ಪ್ರವೇಶಿಸಿದ ಸಭಾಧ್ಯಕ್ಷರು, ನಮ್ಮ ಅಧಿಕಾರಿಗಳು ಈಗಲೂ ಬ್ರಿಟಿಷ್ ಆಳ್ವಿಕೆಯ ಮನಸ್ಥಿತಿಯಿಂದ ಹೊರಬಂದಿಲ್ಲ. ನಾನು ಎಲ್ಲರನ್ನೂ ಕೆಟ್ಟವರು ಎಂದು ದೂಷಿಸುವುದಿಲ್ಲ. ಕೆಲವು ಅಧಿಕಾರಿಗಳು ಒಳ್ಳೆಯವರು ಇದ್ದಾರೆ. ಯಾವುದೇ ಯೋಜನೆಗೂ ಕಾನೂನು ಕಾರಣ ನೀಡಿ ವಿಳಂಬ ಮಾಡುವುದು ಅವರಿಗೆ ಕಾಯಕವಾಗಿದೆ. ಕಿವಿ ಹಿಂಡದಿದ್ದರೆ, ಯಾವುದೇ ಕೆಲಸವಾಗುವುದಿಲ್ಲ. ಮೊದಲು ಮನಸ್ಥಿತಿ ಬದಲಾಯಿಸಿಕೊಳ್ಳಬೇಕು ಎಂದು ಬೇಸರ ವ್ಯಕ್ತಪಡಿಸಿದರು. ಕಾನೂನು ಹೀಗೆ ಹೇಳುತ್ತದೆ. ನ್ಯಾಯಾಲಯದ ಆದೇಶವಿದೆ. ನಾಳೆ ನಮ್ಮ ಸೇವಾ ಅವಧಿಗೆ ಏನಾದರೂ ತೊಂದರೆ ಆಗಬಹುದು ಎಂಬ ನಾನಾ ಕಾರಣ ನೀಡಿ ವಿಳಂಬ ಮಾಡುತ್ತಾರೆ. ಇದು ಕುಡಿಯುವ ನೀರಿನ ಯೋಜನೆ. ಟ್ಯಾಂಕ್ ನಿರ್ಮಿಸಿ ಪೈಪ್‌ಲೈನ್ ಮಾಡಿಕೊಡಲು ಇರುವ ಸಮಸ್ಯೆಯಾದರೂ ಏನು, ನೀವು ಅಧಿಕಾರಿಗಳ ಕಿವಿ ಹಿಂಡದಿದ್ದರೆ, ಎಲ್ಲಾ ಯೋಜನೆಗಳು ಇದೇ ರೀತಿ ಆಗುತ್ತವೆ ಎಂದು ಸಚಿವರನ್ನುದ್ದೇಶಿಸಿ ಹೇಳಿದರು. ಕಾಂಗ್ರೆಸ್ ಶಾಸಕ ಆರ್.ವಿ. ದೇಶಪಾಂಡೆ ಮಾತನಾಡಿ, ಕುಡಿಯುವ ನೀರಿನ ಯೋಜನೆಗೆ ಅರಣ್ಯ, ಕಂದಾಯ ಸೇರಿದಂತೆ ಯಾವುದೇ ಇಲಾಖೆಗಳು ವಿಳಂಬ ಮಾಡದಂತೆ ಆದೇಶ ನೀಡಲಾಗಿದೆ. ನ್ಯಾಯಾಲಯದ ಆದೇಶವಿದ್ದರೂ ಅಧಿಕಾರಿಗಳು ಮಾತ್ರ ಬದಲಾಗುವುದಿಲ್ಲ. ಮಾನವೀಯತೆ ದೃಷ್ಟಿಯಿಂದ ಇಂತಹ ಯೋಜನೆಗಳನ್ನು ಮಾಡಬೇಕು ಎಂದು ಸಲಹೆ ಮಾಡಿದರು. ಆಗ ಕಾನೂನು ಸಚಿವ ಮಾಧುಸ್ವಾಮಿ ಅವರು, ಶ್ರೀರಂಗಪಟ್ಟಣ ವಿಧಾನಸಭಾ ಕ್ಷೇತ್ರವ್ಯಾಪ್ತಿ ಗಾಮನಹಳ್ಳಿ ಹಾಗೂ ಇತರೆ 16 ಗ್ರಾಮಗಳಿಗೆ ಅರಣ್ಯ ಇಲಾಖೆ ಅನುಮೋದನೆ ನೀಡಿದ್ದು, ಆದಷ್ಟು ಶೀಘ್ರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು. ಈಗ ಅರಣ್ಯ ಇಲಾಖೆಯೇ ಅನುಮೋದಿಸಿರುವುದರಿಂದ ವಿಳಂಬವಾಗುವುದಿಲ್ಲ ಎಂದು ಭರವಸೆ ನೀಡಿದರು.

ಕುಣಬಿ, ಹಾಲಕ್ಕಿ ಜನಾಂಗ ಎಸ್‌ಸಿ, ಎಸ್‌ಟಿಗೆ ಸೇರ್ಪಡೆಗೆ ಆಗ್ರಹ

ಈ ಸಂಬಂಧ ಶೀಘ್ರ ಕುಲಶಾಸ್ತ್ರೀಯ ಅಧ್ಯಯನ ವರದಿ ಕೇಂದ್ರಕ್ಕೆ ಸಲ್ಲಿಸಲು ದೇಶಪಾಂಡೆ, ರೂಪಾಲಿ ನಾಯ್ಕ್ ಪ್ರಸ್ತಾಪ

ಬೆಂಗಳೂರು, ಫೆ. 14(ಕೆಎಂಶಿ)–ಕರಾವಳಿ ಹಾಗೂ ಮಲೆನಾಡು ಭಾಗದಲ್ಲಿರುವ





ಕುಣಬಿ ಮತ್ತು ಹಾಲಕ್ಕಿ ಜನಾಂಗವನ್ನು ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಸೇರಿಸಲು ರಾಜ್ಯ ಸರ್ಕಾರ ಶೀಘ್ರ ಕುಲಶಾಸ್ತ್ರೀಯ ಅಧ್ಯಯನ ವರದಿಯನ್ನು ಕೇಂದ್ರಕ್ಕೆ ಸಲ್ಲಿಸಬೇಕು ಎಂದು ಕಾಂಗ್ರೆಸ್ ಶಾಸಕ ಆರ್.ವಿ.ದೇಶಪಾಂಡೆ ಮತ್ತು ಬಿಜೆಪಿಯ ರೂಪಾಲಿ ನಾಯ್ಕ್ ವಿಧಾನಸಭೆಯಲ್ಲಿಂದು ಆಗ್ರಹಿಸಿದರು.

ಶೂನ್ಯವೇಳೆಯಲ್ಲಿ ಈ ಇಬ್ಬರು ಶಾಸಕರ ಮಾತಿಗೆ ಧ್ವನಿಗೂಡಿಸಿದ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು, ಕುಲಶಾಸ್ತ್ರೀಯ ಅಧ್ಯಯನ ಈಗಾಗಲೇ ಮುಗಿದಿದೆ. ಆದರೆ ಕೆಲವು ತಾಂತ್ರಿಕ ಅಂಶಗಳೊಂದಿಗೆ ಈ ವರದಿಯನ್ನು ಕೇಂದ್ರ ಸರ್ಕಾರವು ರಾಜ್ಯಕ್ಕೆ ವಾಪಸು ಕಳಿಸಿದೆ. ಆದ್ದರಿಂದ ಅದನ್ನು ಸರಿಪಡಿಸಿ, ಮತ್ತೊಮ್ಮೆ ಕೇಂದ್ರಕ್ಕೆ ಕಳಿಸಿ ಎಂದು ಸಲಹೆ ಮಾಡಿದರು. ಇದಕ್ಕೆ ಉತ್ತರಿಸಿದ ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ಈಗಾಗಲೇ ವರದಿಯಲ್ಲಿನ ತಾಂತ್ರಿಕ ಅಂಶಗಳನ್ನು ಸರಿಪಡಿಸಿ, ಕುಣಬಿ ಜನಾಂಗದವರನ್ನು ಪರಿಶಿಷ್ಟರ ಪಟ್ಟಿಗೆ ಸೇರಿಸುವಂತೆ ಕೋರಿ ಕೇಂದ್ರಕ್ಕೆ ವರದಿಯನ್ನು ಸಲ್ಲಿಸಲಾಗಿದೆ ಎಂದರು. ಹಾಲಕ್ಕಿ ಒಕ್ಕಲಿಗರನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಬೇಕು ಎಂಬುದರಲ್ಲಿ ಎರಡು ಮಾತಿಲ್ಲ. ಆದ್ದರಿಂದ ಈ ಕುರಿತಾದ ಕುಲಶಾಸ್ತ್ರೀಯ ಅಧ್ಯಯನವನ್ನು ಸಹ ಕೇಂದ್ರ ಸರ್ಕಾರಕ್ಕೆ ಕಳಿಸಿದ್ದು, ನಿರಂತರವಾಗಿ ರಾಜ್ಯ ಈ ಬಗ್ಗೆ ಪ್ರಯತ್ನ ಮಾಡುತ್ತಿದೆ ಎಂದು ಅವರು ಹೇಳಿದರು.

ಶಿವರಾತ್ರಿ ಹಬ್ಬದ ಪ್ರಯುಕ್ತ ಫೆ.18ಕ್ಕೆ ಮಾಂಸ ಮಾರಾಟ ನಿಷೇಧ

ಮೈಸೂರು,ಫೆ.14– ಮೈಸೂರು ಮಹಾನಗರ ಪಾಲಿಕೆಗೆ ಸೇರಿದ ಕುರಿ, ಮೇಕೆಗಳ ಕಸಾಯಿಖಾನೆ ಮತ್ತು ಇತರೆ ಎಲ್ಲಾ ಮಾಂಸದ ಅಂಗಡಿಗಳನ್ನು ಮೈಸೂರು ನಗರದಲ್ಲಿ ಫೆ.18ರಂದು ಮಹಾಶಿವರಾತ್ರಿ ದಿನದ ಪ್ರಯುಕ್ತ ಮುಚ್ಚಲು ಆದೇಶ ನೀಡಲಾಗಿರುತ್ತದೆ.

ಈ ದಿನ ಕುರಿ, ಮೇಕೆ, ದನ, ಎಮ್ಮೆ, ಕೋಳಿ, ಹಂದಿ ಮತ್ತು ಮೀನು ಮಾಂಸ ವ್ಯಾಪಾರವನ್ನು ಮೈಸೂರು ನಗರದಲ್ಲಿ ಕಡ್ಡಾಯವಾಗಿ ನಿಷೇಧಿಸಲಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆಯ ಪಾಲಿಕೆ ಆರೋಗ್ಯಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಲೆನೋವು, ಬೆನ್ನುಮೂಳೆ ಉಚಿತ ತಪಾಸಣೆ ಶಿಬಿರ

ಮೈಸೂರು, ಫೆ. 14– ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಫೆ.14 ರಿಂದ 18 ರವರೆಗೆ ತಲೆನೋವು, ಬೆನ್ನುಮೂಳೆ ಹಾಗೂ ನರ ಶಸ್ತ್ರಚಿಕಿತ್ಸಾ ಉಚಿತ ಶಿಬಿರವನ್ನು ಆಯೋಜಿಸಲಾಗಿದೆ. ಬೆನ್ನುಮೂಳೆ ಮತ್ತು ನರ ಶಸ್ತ್ರಚಿಕಿತ್ಸಾ ತಜ್ಞ ವೈದ್ಯರಾದ ಡಾ.ಆರ್. ರಾಜೇಶ್ ನೇತೃತ್ವದಲ್ಲಿ ಈ ಶಿಬಿರ ನಡೆಯಲಿದೆ. ಈ ಶಿಬಿರದಲ್ಲಿ ಬೆನ್ನು ನೋವು, ಕುತ್ತಿಗೆ ನೋವು, ಕಾಲು ಮತ್ತು ಕೈಗಳಲ್ಲಿ ಮರಗಟ್ಟುವಿಕೆ, ನಡೆಯುವಾಗ ಬಾಗಿದ ಭಂಗಿ, ಹೆಚ್ಚು ದೂರ ನಡೆಯಲು ಸಾಧ್ಯವಾಗದಿರುವುದು ಈ ಸಮಸ್ಯೆಗಳಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ವೈದ್ಯರು ಎಂಆರ್‌ಐ ಪರೀಕ್ಷೆಗೆ ಸೂಚಿಸಿದಲ್ಲಿ 50% ರಿಯಾಯಿತಿ ನೀಡಲಾಗುವುದು. ಹೆಚ್ಚಿನ ಮಾಹಿತಿಗಾಗಿ 0821–2533600, 9986399862 ಸಂಪರ್ಕಿಸಬಹುದು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

15.2.2023 ಬುಧವಾರ, ಮಳೆ ನಕ್ಷತ್ರ: ಧನಿಷ್ಠ, 6.02.2023ರಿಂದ 18.02.2023 ಶ್ರೀ ಶುಭಕೃತ್ ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ, ತಿಥಿ: ದಶಮಿ, ನಕ್ಷತ್ರ: ಜ್ಯೇಷ್ಠ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜೆ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ– ಯೋಗಶಿಕ್ಷಕ ಡಿ. ಶ್ರೀಹರಿ, 6.40 ಅರಿವಿನ ಶಿಖರ, ಗಾಯನ– ಜಯಂತಿ ವಿ. ಭಟ್, ವ್ಯಾಖ್ಯಾನ– ಡಾ.ಬಿ.ವಿ.ವಸಂತ ಕುಮಾರ್, 9.00 ವೃತ್ತಿ ಮಾರ್ಗದರ್ಶನ–ಸಾಫ್ಟ್‌ವೇರ್ ಪ್ರಾಡಕ್ಟ್ ಡೆವಲಪ್‌ಮೆಂಟ್ ಮತ್ತು ಇಂಡಸ್ಟ್ರಿ ರೆಡಿ ಪ್ರಾಡಕ್ಟ್ಸ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಪ್ರೊ.ಆರ್. ಸುದರ್ಶನ್ ಅವರೊಂದಿಗೆ ಮಾತುಕತೆ, 10.00 ಹಿಂದೂಸ್ಥಾನಿ ಸಂಗೀತ–ಸಿದ್ದೇಶ್ವರಿ ದೇವಿ – ಗಾಯನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ

ಮಧ್ಯಾಹ್ನ: 12.30 ದೇವರನಾಮ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ "ಕಪನಿಪತಿಯ ಸೀರಿಯಲ್ ಕಾಂಡ", ರಚನೆ– ಇ.ಆರ್. ರಾಮಚಂದ್ರನ್, ನಿರ್ಮಾಣ– ಪ್ರಭುಸ್ವಾಮಿ ಮಳಿಮಠ್, 1.20ಭಾವಗೀತೆ –ವೃಂದಗಾನ, 3.00 ಲಯ ಸಂಭ್ರಮ –ಸಾಂಪ್ರದಾಯಕ ಮೃದಂಗ ತಯಾರಿಕೆಗೆ ಪರ್ಯಾಯವಾಗಿ ನವೀನ ಆವಿಷ್ಕಾರಗಳು ಕುರಿತು ತಿಳಿಸಿಕೊಡುತ್ತಾರೆ ಪ್ರಸಿದ್ಧ ಸಂಗೀತಗಾರರು ಹಾಗೂ ಸಂಶೋಧಕರಾದ ಡಾ. ಕೆ. ವರದರಂಗನ್, ಪ್ರಸ್ತುತಿ– ಹೆಚ್.ಎಲ್. ಶಿವಶಂಕರ ಸ್ವಾಮಿ, 4.00 ಮಹಿಳಾರಂಗ–ಸ್ತ್ರೀ ಚೇತನ, ಭಾಗವಹಿಸುವವರು– ಮೈಸೂರು ಹಾಗೂ ತಂಜಾವೂರು ಚಿತ್ರಕಲಾ ಕಲಾವಿದೆ ಟಿ.ಎ.ವಸಂತಕುಮಾರಿ, 6.50 ಕೃಷಿರಂಗ–ಕಿಸಾನ್ ವಾಣಿ, 9.30 ಉಸ್ತಾದ್ ವಿಲಯತ್ ಹುಸೇನ್ ಖಾನ್–ಗಾಯನ, 10.00 ಜನಪದ ಸಂಗೀತ– ರಾಜಮ್ಮ ಮತ್ತು ತಂಡ

■ **ಪ್ರೀತಿ ಕ್ಯಾನ್ಸರ್ ಸೆಂಟರ್ :** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.

■ **ಕರ್ನಾಟಕ 24 ಮನೆ ತೆಲುಗುಶೆಟ್ಟರ ಸಂಘ :** ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ, ನೂತನ ಸಭಾ ಭವನ ಉದ್ಘಾಟನೆ, ಉದ್ಘಾಟನೆ : ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಜಯಪ್ರಕಾಶ್ ಹೆಗ್ಡೆ, ನೂತನ ಸಭಾ ಭವನ ಉದ್ಘಾಟನೆ : ವಸತಿ ಸಚಿವ ವಿ. ಸೋಮಣ್ಣ, ರಾಜ್ಯಸಭಾ ಸದಸ್ಯ ಬಿ.ಸಿ. ಚಂದ್ರಶೇಖರ್, ಅಧ್ಯಕ್ಷತೆ : ಸಂಘದ ಅಧ್ಯಕ್ಷ ವಿ. ಮಂಜುನಾಥ್, ಉಪಸ್ಥಿತರು : ಸಂಸದರಾದ ಪ್ರತಾಪ್ ಸಿಂಹ, ವಿ. ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಮಾಜಿ ಸಂಸದ ಆರ್. ಧ್ರುವನಾರಾಯಣ್, ಸ್ಥಳ: ಸಂಘದ ಆವರಣ, ಸರಸ್ವತಿಪುರಂ, ಬೆಳಗ್ಗೆ 10.30 ರಿಂದ.

■ **ಮೈಸೂರು ವಿವಿ ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳ ವೇದಿಕೆ :** ಹಿಂದುಳಿದ ವರ್ಗಗಳ ಸಂಶೋಧನಾ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣಾ ಕಾರ್ಯಕ್ರಮ, ಉದ್ಘಾಟನೆ : ಸಂಸದ ಪ್ರತಾಪ್ ಸಿಂಹ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ. ಹೆಚ್. ರಾಜಶೇಖರ್, ಮುಖ್ಯ ಅತಿಥಿಗಳು : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ.ಕೆ.ಎಸ್. ರಂಗಪ್ಪ, ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ವಿ.ಆರ್. ಶೈಲಜಾ, ಸಿಂಡಿಕೇಟ್ ಸದಸ್ಯರಾದ ಡಾ. ಚೈತ್ರಾ ನಾರಾಯಣ್, ಸ್ಥಳ: ಸೆಮಿನಾರ್ ಹಾಲ್, ವಿಜ್ಞಾನ ಭವನ, ಮಾನಸಗಂಗೋತ್ರಿ, ಬೆಳಗ್ಗೆ 11ಕ್ಕೆ.

■ **ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ಸ್ :** ಫೌಂಡೇಷನ್ ವಿಭಾಗದ ವಿದ್ಯಾರ್ಥಿಗಳಿಂದ ವುಡ್ ಪ್ರಿಂಟ್ ಚಿತ್ರಕಲಾ ಪ್ರದರ್ಶನ, ಸ್ಥಳ: ಶ್ರೀ ಕಲಾನಿಕೇತನ ಆರ್ಟ್ ಗ್ಯಾಲರಿ, ವಿಜಯನಗರ 2ನೇ ಹಂತ, ಬೆಳಗ್ಗೆ 11.30 ರಿಂದ.

■ **ಶ್ರೀ ನಟರಾಜ ಮಹಿಳಾ ವಸತಿ ಪ್ರಥಮ ದರ್ಜೆ ಕಾಲೇಜು :** ಪದವಿಪೂರ್ವ ವಿದ್ಯಾರ್ಥಿನಿಯರಿಗೆ ಅಂತರ ಕಾಲೇಜು ರಸಪ್ರಶ್ನೆ ಸ್ಪರ್ಧೆ, ಸಾನ್ನಿಧ್ಯ : ಶ್ರೀ ಚಿದಾನಂದ ಸ್ವಾಮೀಜಿ, ಬಹುಮಾನ ವಿತರಣೆ : ಕಾಂಗ್ರೆಸ್ ಯುವ ಮುಖಂಡ ಎಂ. ಪ್ರದೀಪ್ ಕುಮಾರ್, ಅಧ್ಯಕ್ಷತೆ : ಶ್ರೀ ನಟರಾಜ ಪ್ರತಿಷ್ಠಾನ ವಿಶೇಷಾಧಿಕಾರಿ ಪ್ರೊ. ಎಸ್. ಶಿವರಾಜಪ್ಪ, ಉಪಸ್ಥಿತರು : ಪ್ರಾಂಶುಪಾಲರಾದ ಡಾ. ಎಂ. ಶಾರದ, ಉಪ ಪ್ರಾಂಶುಪಾಲ ಡಾ. ಜಿ. ಪ್ರಸಾದಮೂರ್ತಿ, ಸ್ಥಳ: ಸೆಮಿನಾರ್ ಹಾಲ್, ಮಧ್ಯಾಹ್ನ 12ಕ್ಕೆ.

■ **ಮೈಸೂರು ಜಿಲ್ಲಾ ಪತ್ರಕರ್ತರ ಸಂಘ :** ಮಾಜಿ ಮುಖ್ಯಮಂತ್ರಿ ಡಾ. ಎಂ. ವೀರಪ್ಪ ಮೊಯ್ಲಿ ಅವರೊಂದಿಗೆ ಸಂವಾದ, ಸ್ಥಳ: ಜಿಲ್ಲಾ ಪತ್ರಕರ್ತರ ಸಂಘ, ಮಧ್ಯಾಹ್ನ 12.30ಕ್ಕೆ.

■ **ಮೈಸೂರು ವಿಶ್ವವಿದ್ಯಾನಿಲಯ, ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಶ್ರೀ ವ್ಯಾಸತೀರ್ಥ ಸಂಶೋಧನಾ ಪ್ರತಿಷ್ಠಾನ, ಕೃಷ್ಣಮೂರ್ತಿಪುರಂ :** ಕಾಳಿದಾಸ ಕೃತಿ ಸಮೀಕ್ಷಾ ಕುರಿತು ವಿಚಾರ ಸಂಕಿರಣದ ಸಮಾರೋಪ ಸಮಾರಂಭ, ಸಮಾರೋಪ ಭಾಷಣ : ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ್, ಅಧ್ಯಕ್ಷತೆ : ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಜಿ. ಹೇಮಂತ ಕುಮಾರ್, ಉಪಸ್ಥಿತರು : ಎಸ್‌ವಿಎಸ್‌ಪಿ ನಿರ್ದೇಶಕ ಪ್ರೊ. ಸಿ.ಹೆಚ್. ಶ್ರೀನಿವಾಸಮೂರ್ತಿ, ಸ್ಥಳ: ವಿಜ್ಞಾನ ಭವನ ಸಭಾಂಗಣ, ಮಾನಸಗಂಗೋತ್ರಿ, ಸಂಜೆ 4 ರಿಂದ.

■ **ಶ್ರೀ ರಾಘವೇಂದ್ರಸ್ವಾಮಿಗಳ ಮಠ :** ಪಂಡಿತ್ ಶ್ರೀ ಪ್ರವೀಣಾಚಾರ್ ಹುನುಗುಂದ ಅವರಿಂದ ಭಗವದ್ಗೀತೆಯ 4 ಮತ್ತು 5ನೇ ಅಧ್ಯಾಯದ ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5ರಿಂದ.

■ **ಕರ್ನಾಟಕ ಸಂಘ, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಸಂವಹನ ಪ್ರಕಾಶನ, ಡಾ. ರಾಗೌ ಶಿಷ್ಯರು–ಅಭಿಮಾನಿಗಳ ಬಳಗ :** ಡಾ. ರಾಗೌ–80 ನುಡಿಗೌರವ ಅಭಿನಂದನಾ ಗ್ರಂಥ ಹಾಗೂ ಡಾ. ರಾಗೌ ಅವರ ಕನ್ನಡ ಕಾವ್ಯಗಳಲ್ಲಿ ಐತಿಹಾಸಿಕ ವಿಚಾರಗಳು ಕೃತಿಗಳ ಲೋಕಾರ್ಪಣೆ ಸಮಾರಂಭ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಡಾ. ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಕೃತಿ ಲೋಕಾರ್ಪಣೆ : ಮಾಜಿ ಮುಖ್ಯಮಂತ್ರಿ ಎಂ. ವೀರಪ್ಪ ಮೊಯಿಲಿ, ಪ್ರಾಸ್ತಾವಿಕ ನುಡಿ : ಮಂಡ್ಯ ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ. ಜಯಪ್ರಕಾಶ್‌ಗೌಡ, ಅಧ್ಯಕ್ಷತೆ : ಹಿರಿಯ ಸಾಹಿತಿ ಪ್ರೊ. ಸಿ.ಪಿ. ಕೃಷ್ಣಕುಮಾರ್, ರಾಗೌ 80 ನುಡಿ ಗೌರವ : ಮಾಜಿ ವಿಧಾನಪರಿಷತ್ ಸದಸ್ಯ ಕೆ.ಟಿ. ಶ್ರೀಕಂಠೇಗೌಡ, ಕೃತಿ ಕುರಿತು : ಪ್ರೊ. ಸಿ. ನಾಗಣ್ಣ, ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾನಿಲಯ ವಿಶ್ರಾಂತ ಕುಲಪತಿ ಪ್ರೊ. ಪದ್ಮಾಶೇಖರ್, ಅತಿಥಿಗಳು : ಮಾಜಿ ಶಾಸಕ ವಾಸು, ಶಾಸಕ ಎಂ. ಶ್ರೀನಿವಾಸ್, ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಸ್ಥಳ: ರಾಣಿ ಬಹದ್ದೂರ್ ಸಭಾಂಗಣ, ಹುಣಸೂರು ರಸ್ತೆ, ಸಂಜೆ 5ಕ್ಕೆ.

■ **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ :** ಮಹಾಶಿವರಾತ್ರಿಯ ಪ್ರಯುಕ್ತ ಹಿಮಾಚ್ಛಾದಿತ ಕೈಲಾಸ ಪರ್ವತದ ಮೇಲೆ 21 ಅಡಿ ಎತ್ತರದ ಅತ್ಯಾಕರ್ಷಕ ರುದ್ರಾಕ್ಷಿ ಶಿವಲಿಂಗ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ ; ರಾಜಯೋಗಿನಿ ಬಿ.ಕೆ. ಲಕ್ಷ್ಮೀಜಿ, ಆಶೀರ್ವಚನ : ಶ್ರೀ ಶಿವಸುಜ್ಞಾನತೀರ್ಥ ಮಹಾಸ್ವಾಮಿಗಳು, ಉದ್ಘಾಟನೆ : ರಾಜಮಾತೆ ಶ್ರೀಮತಿ ಪ್ರಮೋದಾದೇವಿ ಒಡೆಯರ್, ಮುಖ್ಯ ಅತಿಥಿಗಳು : ಶಾಸಕ ಎಸ್.ಎ.ರಾಮದಾಸ್, ಅತಿಥಿಗಳು : ಜೆ.ಕೆ. ಟೈರ್ಸ್ ಉಪಾಧ್ಯಕ್ಷ ವಿ. ಈಶ್ವರರಾವ್, ವಿಕ್ರಾಂತ್ ಯೂನಿಯನ್ ಪ್ರಧಾನ ಕಾರ್ಯದರ್ಶಿ ಎಸ್. ಲೋಕೇಶ್, ಪಾಲಿಕೆ ಸದಸ್ಯೆ ರೂಪಾ ಯೋಗೇಶ್, ಸ್ಥಳ: ಲಲಿತ ಮಹಲ್ ಅರಮನೆ ಮೈದಾನ, ಆಲನಹಳ್ಳಿ, ಸಂಜೆ 6.30ಕ್ಕೆ.

■ **ಕೆಂಗಲ್ ಹನುಮಂತಯ್ಯ ರೈಲ್ವೆ ಒಕ್ಕಲಿಗ ನೌಕರರ ಕ್ಷೇಮಾಭಿವೃದ್ಧಿ ಸಂಘ :** ಕೆಂಗಲ್ ಹನುಮಂತಯ್ಯನವರ ಜಯಂತ್ಯೋತ್ಸವ, ಸಾನ್ನಿಧ್ಯ : ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ.ಬಿ. ಮಂಚೇ ಗೌಡ, ಮುಖ್ಯ ಅತಿಥಿಗಳು : ಮುಡಾ ಅಧ್ಯಕ್ಷ ಯಶಸ್ವಿ ಎಸ್. ಸೋಮಶೇಖರ್, ವಕೀಲ ಅಪ್ಪಾಜಿಗೌಡ, ಪ್ರೊ. ಆರ್. ರಂಗಯ್ಯ, ಗೀತಾಪ್ರಸನ್ನ, ದೇಶಿಲಿಂಗೇಗೌಡ, ಮರಿಸ್ವಾಮಿ, ಎಂ. ಶಿವಕುಮಾರ್, ಸ್ಥಳ: ನೇಗಿಲಯೋಗಿ ಮರುಳೇಶ್ವರ ಸೇವಾ ಭವನ, ಜಯನಗರ, ಸಂಜೆ 6.30ಕ್ಕೆ.

ಜಯಲಕ್ಷ್ಮಿ ವಿಲಾಸ ಅರಮನೆಯಲ್ಲಿ 'ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ' ಸ್ಥಾಪನೆ ವಿಚಾರ

ಮೈಸೂರು ವಿವಿ ವಿಳಂಬ ಧೋರಣೆಗೆ ಸಂಸದ ಪ್ರತಾಪ್ ಸಿಂಹ ಅಸಮಾಧಾನ

● ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೊಂದಿಗಿನ ಎಂಒಯುಗೆ ಒಪ್ಪಿಗೆ ನೀಡದಿರುವುದಕ್ಕೆ ಬೇಸರ ● ಕುಲಸಚಿವರ ವಿವರಣೆಗೆ ಸಂಸದರ ಅಸಮ್ಮತಿ

ಮೈಸೂರು, ಫೆ.14(ಎಂಕೆ)– ಮೈಸೂರು ವಿವಿ ಮಾನಸಗಂಗೋತ್ರಿ ಕ್ಯಾಂಪಸ್‌ನಲ್ಲಿರುವ ಜಯಲಕ್ಷ್ಮಿ ವಿಲಾಸ ಅರಮನೆಯಲ್ಲಿ 'ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ' ಸ್ಥಾಪನೆ ಕುರಿತು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯೊಂದಿಗಿನ ಒಡಂಬಡಿಕೆಗೆ(ಎಂಒಯು) ಮೈಸೂರು ವಿವಿ ಒಪ್ಪಿಗೆ ನೀಡದಿರುವುದಕ್ಕೆ ಸಂಸದ ಪ್ರತಾಪ್ ಸಿಂಹ ಅಸಮಾಧಾನ ವ್ಯಕ್ತಪಡಿಸಿದರು.



ಮೈಸೂರು ವಿವಿ ಕ್ರಾಫರ್ಡ್ ಭವನದ ಶಿಕ್ಷಣ ಮಂಡಳಿ ಸಭಾಂಗಣದಲ್ಲಿ ಮಂಗಳವಾರ ಮೈಸೂರು ವಿವಿ ಪ್ರಭಾರ ಕುಲಪತಿ ಪ್ರೊ.ಹೆಚ್.ರಾಜಶೇಖರ್, ಕುಲಸಚಿವೆ(ಆಡಳಿತ) ವಿ.ಆರ್.ಶೈಲಜಾ ಹಾಗೂ ಸಿಂಡಿಕೇಟ್ ಸದಸ್ಯರೊಂದಿಗೆ ಸಭೆ ನಡೆಸಿದ ಅವರು, ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡದಲ್ಲಿ 'ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ' ಸ್ಥಾಪನೆ ಸಂಬಂಧ ಒಂದು ನಿರ್ದಿಷ್ಟ ಅವಧಿಗೆ ಒಡಂಬಡಿಕೆ ಮಾಡಿಕೊಳ್ಳಲು ಈಗಾಗಲೇ ಸಿಂಡಿಕೇಟ್ ಸಭೆಯಲ್ಲಿ ಒಪ್ಪಿಗೆ ಪಡೆದು ಉನ್ನತ ಶಿಕ್ಷಣ ಇಲಾಖೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಅನುಮೋದನೆ ಪಡೆದ ಬಳಿಕ ಮತ್ತೊಮ್ಮೆ ಹೊಸದಾಗಿ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ಎಂಒಯು ಸಿದ್ಧಪಡಿಸಿ, ಅನುಮೋದನೆ ಪಡೆಯುವಂತೆ ಕಳುಹಿಸುವುದು ಎಷ್ಟು ಸರಿ? ಮತ್ತೆ ಮತ್ತೆ ಅಧಿಕಾರಿಗಳ ಬಳಿ ಅಲೆದಾಡಿ ಒಪ್ಪಿಗೆ ಪಡೆಯುವುದು ಎಷ್ಟು ಕಷ್ಟವೆಂದು ಅಲೆದಾಡಿದವರಿಗೆ ಗೊತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕನ್ನಡ ಭಾಷೆಗೆ ಶಾಸ್ತ್ರೀಯ ಸ್ಥಾನಮಾನ ದೊರೆತು ಎಂಟು ವರ್ಷಗಳಾದರೂ ಇಂದಿಗೂ ಸ್ವಂತ ಕಟ್ಟಡ ಇಲ್ಲ. ಹಿಂದೆ ಇದ್ದ ಕಾಂಗ್ರೆಸ್ ಸರ್ಕಾರ ಸಂಸ್ಥೆಯನ್ನು ಬೆಂಗಳೂರಿಗೆ ತೆಗೆದುಕೊಂಡು ಹೋಗುವ ನಿರ್ಧಾರ ಮಾಡಿತ್ತು. ಬಳಿಕ 2019ರಲ್ಲಿ ಸಿ.ಟಿ.ರವಿ ಅವರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರಾಗಿದ್ದಾಗ ಮೈಸೂರಿನಲ್ಲೇ ಸಂಸ್ಥೆ ಉಳಿಯುವಂತೆ ಹಾಗೂ ಒಂದು ಸ್ವಂತ ಕಟ್ಟಡಕ್ಕೆ ಅನುದಾನ ನೀಡುವ ಬಗ್ಗೆ ನಿರ್ಣಯಿಸಿದ್ದರು. ಇದಾದ ನಂತರ ಮಾನಸಗಂಗೋತ್ರಿಯಲ್ಲಿ 4 ಎಕರೆ ಜಾಗ ನೀಡುವ ಬಗ್ಗೆ ಮಾತುಕತೆಯೂ ಆಗಿತ್ತು. ಹೊಸದಾಗಿ ಕಟ್ಟಡ ನಿರ್ಮಾಣಕ್ಕೆ ಹೆಚ್ಚು ಸಮಯ ವ್ಯರ್ಥವಾಗುವುದರಿಂದ ಮಾನಸಗಂಗೋತ್ರಿಯಲ್ಲಿ ಸಂಪೂರ್ಣವಾಗಿ ಶಿಥಿಲವಾಗಿರುವ ಜಯಲಕ್ಷ್ಮೀ ವಿಲಾಸ ಅರಮನೆಯನ್ನು ದುರಸ್ತಿ ಮಾಡಿಕೊಂಡು ಕಟ್ಟಡ ಬಳಕೆ ಮಾಡಿಕೊಳ್ಳಲು ನಿರ್ಧರಿಸಿ, ಪರಸ್ಪರ ಒಪ್ಪಂದ ಮಾಡಿಕೊಂಡು ಅದಕ್ಕೆ ಸಿಂಡಿಕೇಟ್‌ನಲ್ಲೂ ಒಪ್ಪಿಗೆ ಪಡೆಯಲಾಗಿದೆ. ಹೀಗಿದ್ದರೂ ಮೈಸೂರು ವಿಶ್ವವಿದ್ಯಾಲಯ ಕಟ್ಟಡ ಬಳಕೆಗೆ ಒಪ್ಪಿಗೆ ನೀಡುತ್ತಿಲ್ಲವೇಕೆ ಎಂದು ಪ್ರಶ್ನಿಸಿದರು.

ಒಡಂಬಡಿಕೆ ಪ್ರಕಾರ ವಿಶ್ವವಿದ್ಯಾಲಯದ ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವ್ಯಾಪ್ತಿಗೆ ಬರುವ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರದ ಬಳಕೆ ಮಾಡಿಕೊಳ್ಳುವುದರ ಜೊತೆಗೆ ಇಡೀ ಕಟ್ಟಡವನ್ನು ದುರಸ್ತಿ ಮಾಡಲಾಗುವುದು. ಅದಕ್ಕಾಗಿ 27.5 ಕೋಟಿ ರೂ. ಅನುದಾನಕ್ಕೆ ಸಿದ್ಧಪಡಿಸಿದ್ದ ಡಿಪಿಆರ್‌ಗೂ ಮುಖ್ಯಮಂತ್ರಿಗಳು ಒಪ್ಪಿಗೆ ಸೂಚಿಸಿದ್ದರು. ಕಟ್ಟಡ ದುರಸ್ತಿಯಾದ ಬಳಿಕ ಒಂದು ಭಾಗದಲ್ಲಿ ಸಂಸ್ಥೆ ಕಾರ್ಯ ನಿರ್ವಹಿಸಿದರೆ ಉಳಿದ ಭಾಗಗಳನ್ನು ವಿಶ್ವವಿದ್ಯಾಲಯವೇ ಬಳಸಿಕೊಳ್ಳಬಹುದು. ಅಲ್ಲದೆ ಒಡಂಬಡಿಕೆ ಪ್ರಕಾರ ಕಾರ್ಯಚಟುವಟಿಕೆಗಳು ನಡೆಯದಿದ್ದರೆ ರದ್ದು ಮಾಡಿಕೊಳ್ಳಬಹುದು ಎಂದು ಅರ್ಥ ಮಾಡಿಸುವ ಪ್ರಯತ್ನ ಮಾಡಿದರು. ಬಳಿಕ ಮಾತನಾಡಿದ ವಿಶ್ವವಿದ್ಯಾಲಯ ಕುಲಸಚಿವೆ ಶೈಲಜಾ, ಎಂಒಯುಗೆ ಸಿಂಡಿಕೇಟ್‌ನಲ್ಲಿ ಅನುಮೋದನೆ ಪಡೆಯುವಾಗ ಕಾನೂನು ಅಭಿಪ್ರಾಯ ಪಡೆದಿರುವುದಿಲ್ಲ. ಹಾಗಾಗಿ ಮತ್ತೊಂದು ಎಂಒಯು ಸಿದ್ಧಪಡಿಸಲಾಗಿದ್ದು, ಅದನ್ನು ಸಿಂಡಿಕೇಟ್‌ನಲ್ಲಿಟ್ಟು ಒಪ್ಪಿಗೆ ಪಡೆಯಲಾಗುವುದು ಎಂದರಲ್ಲದೆ ಕಟ್ಟಡದಲ್ಲಿ ಜಾನಪದ ವಸ್ತು ಸಂಗ್ರಹಾಲಯ ಇರುವುದರಿಂದ ಡೆಕ್ಕನ್ ಹೆರಿಟೇಜ್‌ನಿಂದ ಜಾನಪದ ವಸ್ತುಗಳ ಸಂರಕ್ಷಣೆಗೆ ಅನುದಾನ ಪಡೆಯಲು ಎಂಒಯು ಮಾಡಿಕೊಳ್ಳಲಾಗಿದೆ. ಇದರಿಂದ ಕಟ್ಟಡ ಬೇರೆ ಉದ್ದೇಶಗಳಿಗೆ ನೀಡಲು ಅವಕಾಶವಿಲ್ಲ ಎಂದು ತಿಳಿಸಿದರು. ಇದಕ್ಕೆ ಸಿಡಿಮಿಡಿಗೊಂಡ ಸಂಸದರು, ಕಟ್ಟಡದ ಒಳಗಿರುವ ವಸ್ತುಗಳ ಸಂರಕ್ಷಣೆಗಾಗಿ ಕಟ್ಟಡವನ್ನೇ ಅವನತಿಗೆ ದೂಡುವುದು ಎಷ್ಟು ಸರಿ. ನಮಗೆ ಅಗತ್ಯವಿರುವುದು ನಾಲ್ಕು ಕೊಠಡಿಗಳು ಮಾತ್ರ. ಉಳಿದವನ್ನು ನೀವೇ ಬಳಸಿಕೊಳ್ಳಿ. ಕನ್ನಡ ಭಾಷೆ ಉಳಿಸುವ ಕಾರ್ಯಮಾಡಿ. ಈಗಾಗಲೇ ಸಿನಿಮಾ ಶೂಟಿಂಗ್‌ಗಳಿಂದ ಜಯಲಕ್ಷ್ಮಿ ವಿಲಾಸ ಅರಮನೆ ಕಟ್ಟಡ ಬಹುತೇಕ ಹಾಳಾಗಿದೆ. 'ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ' ಸ್ಥಾಪನೆಯ ಮೂಲಕವಾದರೂ ಮೈಸೂರು ಮಹಾರಾಜರು ನೀಡಿದ ಕೊಡುಗೆಯನ್ನು ಉಳಿಸುವ ಪ್ರಯತ್ನ ಇದಾಗಿದೆ. ಪದೇ ಪದೇ ಎಂಒಯು ಸಿದ್ಧಪಡಿಸಿ ಒಪ್ಪಿಗೆ ಪಡೆಯಬೇಕೆಂದರೆ ಕಷ್ಟ, ಐಎಎಸ್ ಅಧಿಕಾರಿಗಳು ಎಷ್ಟು ಬಾರಿ ಒಪ್ಪಿಗೆ ಸೂಚಿಸುವುದು ಎನ್ನುತ್ತಾರೆ. ನಾನೂ ಒಬ್ಬ ಕನ್ನಡ ಬರಹಗಾರ ಆಗಿರುವುದರಿಂದ ಕನ್ನಡ ಭಾಷೆಯ ಬೆಳವಣಿಗೆಗೆ ಸಣ್ಣ ಪ್ರಯತ್ನ ಮಾಡುತ್ತಿರುವೆ ಹೊರತು ಇದರಿಂದ ನನಗ್ಯಾವ ಮತಗಳು ಬರುವುದಿಲ್ಲ ಎಂದು ಸಿಟ್ಟಾದರು.


ಇನ್ನೆರಡು ದಿನದಲ್ಲಿ ನಿರ್ಧಾರ: ಪ್ರಭಾರ ಕುಲಪತಿ ಪ್ರೊ.ಹೆಚ್.ರಾಜಶೇಖರ್ ಮಾತನಾಡಿ, ಮೈಸೂರು ವಿವಿ ಮಾನಸಗಂಗೋತ್ರಿಯಲ್ಲಿಯೇ ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ ಕಾರ್ಯನಿರ್ವಹಿಸಿದರೆ ವಿವಿಗೂ ಘನತೆ ಹೆಚ್ಚಲಿದೆ. ಜೊತೆಗೆ ನಮ್ಮ ವಿದ್ಯಾರ್ಥಿಗಳಿಗೂ ಅನುಕೂಲವಾಗಲಿದೆ. ಹಾಗೆಯೇ ಕನ್ನಡ ಭಾಷೆ ಬೆಳವಣಿಗೆ ಸಂಶೋಧನೆಗೆ ನೆರವಾಗಲಿದೆ. ಎರಡು ದಿನಗಳಲ್ಲಿ ನಿರ್ಧಾರ ಕೈಗೊಳ್ಳಲಾಗುವುದು ಎಂದರು. ಸಭೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಉಪ ನಿರ್ದೇಶಕ ಸುದರ್ಶನ್ ಹಾಗೂ ಸಿಂಡಿಕೇಟ್ ಸದಸ್ಯರು ಉಪಸ್ಥಿತರಿದ್ದರು.

ಕುಲಸಚಿವರು ತರಲೇ ಮಾಡುತ್ತಿದ್ದಾರೆ...

ಶಾಸ್ತ್ರೀಯ ಕನ್ನಡ ಸ್ವಾಯತ್ತ ಕೇಂದ್ರ ಸ್ಥಾಪನೆಗೆ ಜಯಲಕ್ಷ್ಮೀ ವಿಲಾಸ ಅರಮನೆ ಹಸ್ತಾಂತರಕ್ಕೂ ಮುನ್ನ ಕಾನೂನು ಅಭಿಪ್ರಾಯ ಪಡೆಯಬೇಕೆನ್ನುತ್ತಿರುವ ಮೈಸೂರು ವಿವಿ ಕುಲಸಚಿವೆ ವಿ.ಆರ್.ಶೈಲಜಾ ಇಲ್ಲದ ತರಲೇ ಮಾಡುತ್ತಿದ್ದಾರೆ ಎಂದು ಸಂಸದ ಪ್ರತಾಪ್ ಸಿಂಹ ಹರಿಹಾಯ್ದರು.

ಸಭೆ ಬಳಿಕ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಅವರು, ಸಿಂಡಿಕೇಟ್ ಸಭೆಯಲ್ಲಿಯೇ ತೀರ್ಮಾನವಾಗಿದೆ ಎಂದ ಮೇಲೆ ಸುಮ್ಮನೇ ಕಾಲಹರಣ ಮಾಡುತ್ತಿದ್ದಾರೆ. ಆದರೆ ಸಿಂಡಿಕೇಟ್ ಸಭೆಗೇನೂ ಬೆಲೆ ಇಲ್ಲವಾ? ಇನ್ನೇನು ಚುನಾವಣೆ ಬರುತ್ತೆ. ಯಾರು ದುಡ್ಡು ಕೊಡುತ್ತಾರೆ. ಕನ್ನಡಕ್ಕೆ ಸ್ಥಾನಮಾನ ಕೊಟ್ಟಿದ್ದರೂ ಅದಕ್ಕೆ ಸಂಬಂಧಿಸಿದ ಸಂಶೋಧನಾ ಕಾರ್ಯಚಟುವಟಿಕೆಗಳು ನಡೆದರೆ ತಾನೇ ಅನುದಾನ ಬರುವುದು. ಐಎಎಸ್ ಅಧಿಕಾರಿಗಳ ಬಳಿ ಸಹಿ ಮಾಡಿಸಿ ಅನುಮೋದನೆ ಪಡೆದುಕೊಂಡು ಬಂದರೆ ಇಲ್ಲಿರುವ ಕೆಎಎಸ್ ಗ್ರೇಡ್ ರಿಜಿಸ್ಟ್ರಾರ್ ತರ್ಲೆ ಕೆಲಸ ಮಾಡಿದರೆ ನಾವೇನೂ ಮಾಡಬೇಕು. ಇದೇನು ನನ್ನ ವೈಯಕ್ತಿಕ ಕೆಲಸವಲ್ಲ. ಕನ್ನಡದ ಕೆಲಸ. ಶಾಸ್ತ್ರೀಯ ಕನ್ನಡ ಸ್ವಾಯತ್ತ ಕೇಂದ್ರಕ್ಕೆ ಮೈಸೂರು ವಿವಿ ಜಾಗಕೊಟ್ಟಿದೆ ಎಂದರೆ ವಿವಿಯ ಹಿರಿಮೆ ಮತ್ತಷ್ಟು ಹೆಚ್ಚಾಗುತ್ತದೆ. ಅಲ್ಲದೆ ಜಯಲಕ್ಷ್ಮಿ ವಿಲಾಸ ಅರಮನೆಯೂ ಉಳಿಯುತ್ತದೆ ಎಂದು ಹೇಳಿದ ಅವರು, ಜಯಲಕ್ಷ್ಮಿ ವಿಲಾಸ ಅರಮನೆ ಫೋಟೊಗಳನ್ನು ತೆಗೆದು ದುರಸ್ತಿ ಆಗಬೇಕಾ, ಬೇಡವಾ ಎಂದು ಜನರ ಅಭಿಪ್ರಾಯವನ್ನೇ ಕೇಳಿ ಎಂದರು.

ಕನ್ನಡ ಕೇವಲ ಭಾಷೆಯಲ್ಲ. ತನ್ನದೆಯಾದ ಸಂಸ್ಕೃತಿ ಇದೆ. ಜಾನಪದ ಸೊಗಡಿದ್ದು, ಕನ್ನಡ ಭಾಷೆಯ ಅಧ್ಯಯನ ಕುರಿತ ಎಲ್ಲಾ ಅಂಶಗಳು 'ಶಾಸ್ತ್ರೀಯ ಕನ್ನಡ ಅತ್ಯುನ್ನತ ಅಧ್ಯಯನ ಕೇಂದ್ರ'ದಲ್ಲಿರಲಿದ್ದು, ಮಾದರಿ ಕೇಂದ್ರವಾಗಲಿದೆ. ಇದಕ್ಕೆ ಮೈಸೂರು ವಿಶ್ವವಿದ್ಯಾನಿಲಯ ಸಹಕಾರ ನೀಡಬೇಕು ಎಂದು ಹೇಳಿದರಲ್ಲದೆ ಕನ್ನಡ ಭಾಷೆಯನ್ನು ಬೆಳೆಸಲು ವಿವಿಗೆ ಆಸಕ್ತಿ ಇಲ್ಲ ಎಂದರೆ ನಿಮ್ಮ ಹಣೆಬರಹ ಎಂದು ಬಿಟ್ಟುಬಿಡುತ್ತೇನೆ. ಇದರಿಂದ ನನಗೆ ನಾಲ್ಕು ವೋಟು ಬರುವುದಿಲ್ಲ. ಅಲ್ಲದೆ ಕಟ್ಟಡ ಬಿದ್ದುಹೋದ ಪಾಪವೂ ಇವರಿಗೆ ಅಂಟಿಕೊಳ್ಳುತ್ತದೆ ಎಂದು ಬೇಸರ ಹೊರಹಾಕಿದರು.





ಸ್ಯಾಂಡಲ್‌ವುಡ್ ನಿರ್ದೇಶಕರು, ನಿರ್ಮಾಪಕರಿಂದ ಸಿಎಂ ಬೊಮ್ಮಾಯಿ ಭೇಟಿ; ಚಿತ್ರನಗರಿ ನಿರ್ಮಾಣಕ್ಕೆ ಮನವಿ

ಬೆಂಗಳೂರು: ರಾಜ್ಯದಲ್ಲಿ ಚಿತ್ರನಗರಿ ನಿರ್ಮಾಣ ಮಾಡುವಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಟಿ.ಎಸ್.ನಾಗಾಭರಣ ಅವರ ನೇತೃತ್ವದಲ್ಲಿ ಚಿತ್ರರಂಗದ ಗಣ್ಯರು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರನ್ನು ಇಂದು ಭೇಟಿ ಮಾಡಿ ಮನವಿ ಸಲ್ಲಿಸಿದರು. ನಿರ್ದೇಶಕರಾದ ರಾಜೇಂದ್ರ ಸಿಂಗ್ ಬಾಬು, ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್, ಹಿರಿಯ ಕಲಾವಿದರಾದ ಸುಂದರ್‌ರಾಜ್ ಮತ್ತಿತರರು ಈ ನಿಯೋಗದಲ್ಲಿದ್ದರು. ಕಂದಾಯ ಸಚಿವ ಆರ್. ಅಶೋಕ್, ಕಾನೂನು ಸಚಿವ ಜೆ.ಸಿ.ಮಾಧುಸ್ವಾಮಿ, ಶಾಸಕ ಸತೀಶ್ ರೆಡ್ಡಿ ಮತ್ತಿತರರು ಈ ಸಂದರ್ಭದಲ್ಲಿ ಹಾಜರಿದ್ದರು.

ಫೆ.21ಕ್ಕೆ ಬೃಹತ್ ಉದ್ಯೋಗ ಮೇಳ

ಮೈಸೂರು,ಫೆ.14– ಸಹಾಯಕ ನಿರ್ದೇಶಕರು, ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಮಾದರಿ ವೃತ್ತಿ ಕೇಂದ್ರ ಮೈಸೂರು ಹಾಗೂ ಜಿಲ್ಲಾ ಕೌಶಲ್ಯಾಭಿವೃದ್ಧಿ ಕಚೇರಿಯವರ ಸಹಯೋಗದೊಂದಿಗೆ ಫೆ.21 ರಂದು ಬೆಳಗ್ಗೆ 9 ಗಂಟೆಗೆ ಮೈಸೂರಿನ ವಸ್ತುಪ್ರದರ್ಶನ ಪ್ರಾಧಿಕಾರ ದೊಡ್ಡಕೆರೆ ಮೈದಾನದಲ್ಲಿ ಬೃಹತ್ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿದೆ. ಉದ್ಯೋಗ ಮೇಳದಲ್ಲಿ 100 ರಿಂದ 150 ಪ್ರತಿಷ್ಠಿತ ಕಂಪನಿಗಳು ಭಾಗವಹಿಸಲಿದ್ದು, ಎಸ್‌ಎಸ್‌ಎಲ್‌ಸಿ ಉತ್ತೀರ್ಣ ಅಥವಾ ಅನುತ್ತೀರ್ಣ, ಪಿಯುಸಿ, ಜೆಓಸಿ, ಐಟಿಐ, ಡಿಪ್ಲೊಮಾ, ಬಿಇ ಯಾವುದೇ ಪದವಿಗಳಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಸ್ಥಳದಲ್ಲಿಯೇ ನೇಮಕಾತಿ ಆಯ್ಕೆ ಪ್ರಕ್ರಿಯೆ ನಡೆಯಲಿದೆ.

ಅರ್ಹ ನಿರುದ್ಯೋಗ ಪುರುಷ, ಮಹಿಳಾ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ತಮ್ಮ ಸ್ವಂತ ಖರ್ಚಿನಲ್ಲಿ ಉದ್ಯೋಗ ಮೇಳದಲ್ಲಿ ಭಾಗವಹಿಸಿ ಸದುಪಯೋಗಪಡಿಸಿಕೊಳ್ಳಬೇಕೆಂದು ಹಾಗೂ ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಜಿಲ್ಲಾ ಉದ್ಯೋಗ ವಿನಿಮಯ ಕಛೇರಿ, ಮೈಸೂರು–07 ಇವರನ್ನು ಕಚೇರಿ ವೇಳೆಯಲ್ಲಿ ಅಥವಾ ದೂರವಾಣಿ ಸಂಖ್ಯೆ:0821–2489972 ಅನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಸಹಾಯಕ ನಿರ್ದೇಶಕರಾದ ಡಿ.ಎಂ.ರಾಣಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ ವಿಶೇಷ ವಿಭಾಗ ಹುಣಸೂರು

ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ (ಇ–ಪ್ರೊಕ್ಯೂರ್‌ಮೆಂಟ್ ಮೂಲಕ)

ಐ.ಎಫ್.ಟಿ ಸಂಖ್ಯೆ 19/2022–23 ದಿನಾಂಕ: 06.02.2023

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿರುವವರು ಹುಣಸೂರು ವಿಭಾಗ ವ್ಯಾಪ್ತಿಯಲ್ಲಿ ರಸ್ತೆ ಸಂಚಾರ ಗಣತಿ ಸಮೀಕ್ಷೆಗಾಗಿ ಆಟೋಮೇಟೆಡ್ (ಸ್ವಯಂಚಾಲಿತ) ಸಿ.ಸಿ. ಕ್ಯಾಮರಾಗಳನ್ನು ಅಳವಡಿಸುವ ಕಾಮಗಾರಿಗೆ ಲೋಕೋಪಯೋಗಿ ಇಲಾಖೆಯಲ್ಲಿನ "ಇ–ಪ್ರೊಕ್ಯೂರ್‌ಮೆಂಟ್" ಮೂಲಕ ನೊಂದಾಯಿತ ಸಮುಚಿತ ಗುತ್ತಿಗೆದಾರರಿಂದ ಐಟಂವಾರು ಟೆಂಡರನ್ನು "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್" ನಲ್ಲಿನ ಷರತ್ತುಗಳಿಗನುಗುಣವಾಗಿ ಕರೆಯಲಾಗಿದ್ದು, ಕಾಮಗಾರಿಗಳ ಪೈಕಿ ಟೆಂಡರಿಗಿಟ್ಟ ಮೊತ್ತ ರೂ.7.32 ಲಕ್ಷ ಗರಿಷ್ಠ ಹಾಗೂ ರೂ.5.44 ಲಕ್ಷ ಕನಿಷ್ಠ. ಇ.ಎಂ.ಡಿ. ರೂ.18300/–ಗಳು ಗರಿಷ್ಠ ಹಾಗೂ ರೂ.13600/–ಗಳು, ಕನಿಷ್ಠ. ಭರ್ತಿ ಮಾಡಿದ ಟೆಂಡರ್ ದಾಖಲಾತಿಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸಲು ಕಡೆಯ ದಿ: 16.02.2023, 16.00 ಗಂಟೆಯವರೆಗೆ. ಕಾಮಗಾರಿಯನ್ನು ಪೂರ್ಣಗೊಳಿಸಲು ಕಾಲಾವಧಿ 2 ದಿನಗಳು (ಮಳೆಗಾಲ ಸೇರಿದಂತೆ). ಟೆಂಡರ್ ದಾಖಲಾತಿಗಳನ್ನು ವೆಬ್‌ಸೈಟ್ https://eproc.karnataka.gov.inರಲ್ಲಿ ದಿ: 09.02.2023 ರಂದು ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಯನ್ನು ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಹುಣಸೂರು

DIPR/DDMYS/KSMCA/1010/2022-23

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತುಗಳನ್ನು ನನ್ನ ಕಕ್ಷಿದಾರರು ಆದರೆ ಮಾಲೀಕರಾದ, ಕೆ. ಆರ್. ರಸ್ತೆ, ರಾಣಿಪೇಟ್, ಹೊಸಪೇಟೆ'ರ ನಿವಾಸಿಯಾದ ಶ್ರೀ. ಬಿ. ಪಿ. ಆನಂದ ಕುಮಾರ್ ಬಿನ್ ಶ್ರೀ ಪೃಥ್ವಿರಾಜ್ ಸಿಂಗ್ ರವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ಪರಭಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಐದು (05) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು, ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್ : ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಕಸಬಾ ಹೋಬಳಿ, ಗೊರೂರು ಗ್ರಾಮದ ಈ ಕೆಳಕಂಡ ಸರ್ವೆ ನಂಬರ್‌ಗಳ ಕೃಷಿ ಜಮೀನು

Sy No	Extent: Acre	Gunta	Kharab A	Kharab B	BOUNDARIES: East	West	North	South
56/1	04	35	00	00	ಸರ್ವೇ ನಂ: 55	ಸರ್ವೇ ನಂ: 57 ಮತ್ತು 58	ವರುಣಾ ನಾಲೆ	ಸರ್ವೇ ನಂ: 56/2
56/2	00	05	00	00	ಸರ್ವೇ ನಂ: 55	ಸರ್ವೇ ನಂ: 57 ಮತ್ತು 58	ಸರ್ವೇ ನಂ: 56/1	ಸರ್ವೇ ನಂ: 43
57/1	01	00	00	00	ಸರ್ವೇ ನಂ: 56/1, 2 ಮತ್ತು 43	ಖಾಸಗಿ ಸ್ವತ್ತು	ಸರ್ವೇ ನಂ: 58	ರಸ್ತೆ
57/1	01	07	00	00	ಸರ್ವೇ ನಂ: 56/1, 2 ಮತ್ತು 43	ಖಾಸಗಿ ಸ್ವತ್ತು	ಸರ್ವೇ ನಂ: 58	ರಸ್ತೆ
57/2	00	06	00	00	ಸರ್ವೇ ನಂ: 56 ಮತ್ತು 43	ಖಾಸಗಿ ಸ್ವತ್ತು	ಸರ್ವೇ ನಂ: 58	ಖಾಸಗಿ ರಸ್ತೆ
58	04	06	00	00	ಸರ್ವೇ ನಂ: 56/1, 2	ಸರ್ವೇ ನಂ: 63	ಸರ್ವೇ ನಂ: 15 and 59	ಸರ್ವೇ ನಂ: 57
Total	11	19	00	00				

ಮೈಸೂರು : 14–02–2023

Sd/- M.N. Prakash Kalappa, Advocate & Legal Consultant, KAR-1996-2000
#2-3, First Floor, PRI Complex, 67/7A, New Sayyaji Rao Road, Fort Mohalla, Mysuru-570 004. Cell: 93431 12535. Email: mnprakashkalappa@gmail.com

---

ಕೆನರಾ ಬ್ಯಾಂಕ್

ಪ್ರಾದೇಶಿಕ ಕಚೇರಿ, #26/1, ಗೆಸ್ಟ್ ಹೌಸ್ ರಸ್ತೆ, ನಜರಬಾದ್, ಮೈಸೂರು–570010.

ವಾಹನ ಹರಾಜು ಮಾರಾಟ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಸಾಲಗಾರರಿಗೆ/ಜಾಮೀನುದಾರರಿಗೆ ತಿಳಿಸುವುದೇನೆಂದರೆ ಕೆಳಗೆ ವಿವರಿಸಿದ ಚರ ಆಸ್ತಿಗಳನ್ನು ಈ ಕೆಳಗೆ ತಿಳಿಸಿರುವ ಬ್ಯಾಂಕಿನ ಶಾಖೆಗಳಲ್ಲಿ ಅಡಮಾನ ಮಾಡಿರುವ ಕರಾರು ಪತ್ರದ (ಹೈಪೋಥಿಕೇಟ್ ಅಗ್ರಿಮೆಂಟ್) ಅನ್ವಯ ವಾಹನಗಳನ್ನು ಬ್ಯಾಂಕ್ ಭೌತಿಕವಾಗಿ ಸ್ವಾಧೀನ ಪಡಿಸಿಕೊಂಡು ಕೆನರಾ ಬ್ಯಾಂಕ್ ಕೆಳಗೆ ತಿಳಿಸಿರುವ ಶಾಖೆಗಳಲ್ಲಿ ಮೈಸೂರು ದಿನಾಂಕ 22.02.2023 ರಂದು "ಎಲ್ಲಿ, ಹೇಗಿದೆಯೋ, ಏನಿದೆಯೋ ಹಾಗೇ ಯಥಾಸ್ಥಿತಿಯಲ್ಲಿ" ಆಧಾರದ ಮೇಲೆ ಮಾರಾಟ ಮಾಡಲಾಗುವುದು.

ಕ್ರ ಸಂ.	ಶಾಖೆಯ ಹೆಸರು ಮತ್ತು ಶಾಖೆಯ ಫೋನ್ ನಂಬರ್ ಮತ್ತು ಸಾಲಗಾರರ ಹೆಸರು	ಬಾಕಿ ಇರುವ ಮೊತ್ತ	ವಾಹನ ಮಾದರಿ	ನೋಂದಣಿ ತಿಂಗಳು ಮತ್ತು ವರ್ಷ	ನೋಂದಣಿ ನಂಬರ್	ಮೀಸಲು ಮೊತ್ತ ಹಾಗೂ ಇಎಂಡಿ ಮೊತ್ತ
1	ಇಂಡಸ್ಟ್ರೀಯಲ್ ಸಬರ್ಬ್ ಶಾಖೆ, ಮೈಸೂರು ಫೋನ್ ನಂ. 0821–2528277, 88618 83370 ಸಾಲಗಾರರು : ಶ್ರೀ ಗಂಗಾಧರ್	ರೂ.3,31,855.95 (ಜೊತೆಗೆ ಬಡ್ಡಿ ಮತ್ತು ಖರ್ಚುಗಳು)	TATA BOLT XM Q Jet75 PS BS4	ಫೆಬ್ರವರಿ / 2019	KA 09 D 3698	ಮೀಸಲು ಮೊತ್ತ ರೂ.2,70,000/– ಇಎಂಡಿ ಮೊತ್ತ ರೂ.27,000/–
2	ಜೆ.ಪಿ.ನಗರ ಶಾಖೆ, ಮೈಸೂರು ಫೋನ್ ನಂ. 9742653477, 7717763824 ಸಾಲಗಾರರು : ಶ್ರೀ ಹರೀಶ ಯು ಎಸ್	ರೂ.11,41,914.67/– (ಜೊತೆಗೆ ಬಡ್ಡಿ ಮತ್ತು ಖರ್ಚುಗಳು)	Mahindra TUV300 T10 Mhawk100 Diesel Variant	ಜೂನ್ / 2019	KA 09 MF 0564	ಮೀಸಲು ಮೊತ್ತ ರೂ.4,90,000/– ಇಎಂಡಿ ಮೊತ್ತ ರೂ.49,000/–
3	ಮರ್ಟಿಕ್ಯಾತನಹಳ್ಳಿ ಶಾಖೆ, ಮೈಸೂರು ಫೋನ್ ನಂ. 9945307576 ಸಾಲಗಾರರು : ಶ್ರೀ ಚಂದ್ರಕಾಂತ್ ಎನ್	ರೂ.4,66,175.74/– (ಜೊತೆಗೆ ಬಡ್ಡಿ ಮತ್ತು ಖರ್ಚುಗಳು)	Volkswagen Polo 1.0 L Petrol	ಮಾರ್ಚ್ / 2019	KA 09 ME 3722	ಮೀಸಲು ಮೊತ್ತ ರೂ.3,65,676/– ಇಎಂಡಿ ಮೊತ್ತ ರೂ.36,568/–
4	ಇಲವಾಲ ಶಾಖೆ, ಮೈಸೂರು ಫೋನ್ ನಂ. 0821 2402226, 9483541555 ಸಾಲಗಾರರು : ಶ್ರೀ ರಾಜಕುಮಾರ್ ಶರ್ಮಾ	ರೂ.10,76,155.53/– (ಜೊತೆಗೆ ಬಡ್ಡಿ ಮತ್ತು ಖರ್ಚುಗಳು)	FORD Ecosport 1.5 (D) Titanium MT	ಫೆಬ್ರವರಿ / 2019	KA 09 ME 3065	ಮೀಸಲು ಮೊತ್ತ ರೂ.4,70,000/– ಇಎಂಡಿ ಮೊತ್ತ ರೂ.47,000/–

ವಾಹನ ವೀಕ್ಷಿಸಲು ಸಂಪರ್ಕಿಸಿ : ಕೆನರಾ ಬ್ಯಾಂಕ್, ಪ್ರಾದೇಶಿಕ ಕಚೇರಿ, #26/1, ಗೆಸ್ಟ್ ಹೌಸ್ ರಸ್ತೆ, ನಜರಬಾದ್, ಮೈಸೂರು–570010.

1.ಮೇಲೆ ತಿಳಿಸಲಾದ ಮುಂಗಡ ಭದ್ರತಾ ಠೇವಣಿ ಮೊತ್ತವನ್ನು 21.02.2023 ರಂದು ಅಥವಾ ಅದಕ್ಕೂ ಮೊದಲು ಸಂಜೆ 5.00 ಗಂಟೆಯ ಒಳಗೆ ಠೇವಣಿ ಮಾಡಬೇಕು. ಇಎಂಡಿ ಮೊತ್ತವನ್ನು ಆನ್‌ಲೈನ್ ಮೂಲಕ ಪಾವತಿಸಬೇಕು. (RTGS/NEFT/IMPS) ಕೆನರಾ ಬ್ಯಾಂಕ್, ನಜರಬಾದ್, ಮೈಸೂರು–10 ರ ಖಾತೆ ಸಂಖ್ಯೆ : 1512201000739 (IFSC - CNRB0000565)

2.ವಾಹನದ ಹರಾಜು ದಿನಾಂಕ : 22.02.2023 ರಂದು ಬೆಳಿಗ್ಗೆ 10.00 ಗಂಟೆಯ ನಡುವೆ ಮೇಲೆ ತಿಳಿಸಿರುವ ಶಾಖೆಗಳಲ್ಲಿ ನಡೆಯಲಿದೆ. ಹೆಚ್ಚಳ ಮಾಡುವ ಮೊತ್ತ ರೂ. 5,000/– ಆತಿರುತ್ತದೆ.

3.ಆಸಕ್ತ ಬಿಡ್ಡುದಾರರು ಬಿಡ್ ಸಲ್ಲಿಸುವ ಮೊದಲು ವಾಹನಗಳನ್ನು ಪರಿಶೀಲಿಸುವುದು ಮತ್ತು ತೃಪ್ತಿಪಡಿಸುವುದು ಅವರ ಜವಾಬ್ದಾರಿಯಾಗಿರುತ್ತದೆ.

4.ಉದ್ದೇಶಿತ ಬಿಡ್‌ದಾರರು ಬಿಡ್ ಅರ್ಜಿಯೊಂದಿಗೆ ಕೆವೈಸಿ ದಾಖಲೆಗಳನ್ನು ಸಲ್ಲಿಸಬೇಕು.

5.ಯಶಸ್ವಿ ಬಿಡ್‌ದಾರರು ಹರಾಜಿನ ದಿನಾಂಕದಿಂದ 3 ದಿನಗಳಲ್ಲಿ ಬಾಕಿ ಇರುವ ಮೊತ್ತವನ್ನು ಪಾವತಿಸಬೇಕು. ಇಎಂಡಿ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಯಾವುದೇ ಸಂದರ್ಭದಲ್ಲೂ ಮರುಪಾವತಿಸಲಾಗುವುದಿಲ್ಲ. ಸಾಗಣೆ, ವರ್ಗಾವಣೆ, ನೋಂದಣಿ ಶುಲ್ಕಗಳು ಇತ್ಯಾದಿಗಳಿಗೆ ಅನ್ವಯವಾಗುವಂತೆ ಎಲ್ಲಾ ಶುಲ್ಕಗಳನ್ನು ಭರಿಸುವುದು ಯಶಸ್ವಿ ಬಿಡ್‌ದಾರನ ಜವಾಬ್ದಾರಿಯಾಗಿದೆ.

6.ಯಾವುದೇ ಕಾರಣವನ್ನು ನೀಡದೆ ಇ–ಹರಾಜಿನ ನಿಯಮಗಳು ಮತ್ತು ಷರತ್ತುಗಳನ್ನು ಮುಂದೂಡುವ/ರದ್ದು ಮಾಡುವ ಅಥವಾ ಬದಲಾಯಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿರುತ್ತದೆ.

7.ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಶಾಖೆಯ ಉಸ್ತುವಾರಿ, ಕೆನರಾ ಬ್ಯಾಂಕ್, ಮೇಲೆ ತಿಳಿಸಿರುವ ಶಾಖೆಗಳನ್ನು, ಮೈಸೂರು ಇವರನ್ನು ಯಾವುದೇ ಕೆಲಸದ ದಿನದಂದು ಕಚೇರಿ ಸಮಯದಲ್ಲಿ ಸಂಪರ್ಕಿಸಿರಿ.

ದಿನಾಂಕ: 15.02.2023
ಸ್ಥಳ: ಮೈಸೂರು

ಸಹಿ/–ವ್ಯವಸ್ಥಾಪಕರು
ಕೆನರಾ ಬ್ಯಾಂಕ್



ನಕ್ಕರೆ ಅದೇ ಸ್ವರ್ಗ

ಅವರು : "ಈ ಓಟದ ಅಭ್ಯಾಸ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವುದಕ್ಕೇನು?"
ಇವರು : "ಅದಕ್ಕಲ್ಲಾ ಈ ಅಭ್ಯಾಸ, ದಿನಾ ಸಿಟಿ ಬಸ್ ಹಿಡೀಬೇಕಲ್ಲಾ...!"

ಮೈಸೂರು ಮಿತ್ರ

ಬುಧವಾರ, 15 ಫೆಬ್ರವರಿ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ.........

ಪ್ರಪಂಚದಲ್ಲಿ ಬಲಶಾಲಿಗಳಾಗಿರುವುದು ಮಹತ್ವದ ವಿಷಯವಲ್ಲ. ಆ ಬಲವನ್ನು ಸದುಪಯೋಗವಾಗಿ ಬಳಸುವುದು ಮಹತ್ವ –ಬೀಚರ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಬಾಳೋರ್‌ಗೆ ಒಂದು ಮಾತು, ಬಾಳೆಗೊಂದೇ ಗೊನೆ

ನಿಮ್ಮ ಪತ್ರಗಳು

ಹುಣಸೂರು ಮುಖ್ಯ ರಸ್ತೆಗೆ ಶ್ರೀ ಸಿದ್ದೇಶ್ವರ ಸ್ವಾಮೀಜಿ ಹೆಸರು ನಾಮಕರಣ ಮಾಡಲಿ

ಮಾನ್ಯರೆ,

ವಿಜಯಪುರ ಜಿಲ್ಲೆಯ ಜ್ಞಾನ ಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿಗೂ ಮೈಸೂರಿಗೂ ಅವಿನಾಭಾವ ಸಂಬಂಧವಿದೆ. ಆದ್ದರಿಂದಲೇ ಮೈಸೂರಿನಲ್ಲಿ ಈಗಲೂ ಸಹ ಅನೇಕ ಬಡಾವಣೆಗಳು, ಶಾಲಾ–ಕಾಲೇಜು ಮತ್ತು ಅನೇಕ ಸಂಘ ಸಂಸ್ಥೆಗಳು ಸ್ವಾಮೀಜಿಯವರ ನುಡಿ–ನಮನ ಕಾರ್ಯಕ್ರಮಗಳನ್ನು ನಡೆಸುತ್ತಲೇ ಇವೆ.

ದೇಶದ ಅತ್ಯುತ್ತಮ ಆಧ್ಯಾತ್ಮಿಕ ಚಿಂತಕರು, ಜ್ಞಾನ ಯೋಗಿಗಳು, ಸಮಾಜದ ಉನ್ನತಿ ಮತ್ತು ಅಭಿವೃದ್ಧಿಗೆ ಶ್ರಮಿಸಿದ ಮಹಾನ್ ಮಾನವತಾವಾದಿ, ಸಂತರಲ್ಲೇ ಮಹಾ ಸಂತರಾಗಿದ್ದರು. ಪರರ ಸ್ವತ್ತು ನಮಗೇಕೆ ಎಂದು ತನ್ನ ಜೀವನದಲ್ಲಿ ಕಿಸೆಯೇ ಇಲ್ಲದೇ ಬದುಕಿದವರು. ಇವರ ಪ್ರವಚನಗಳಿಂದ ಪ್ರಭಾವಿತರಾಗಿ ತಮ್ಮ ಜೀವನವನ್ನೇ ಬದಲಾಯಿಸಿ ಬದುಕು ಕಟ್ಟಿಕೊಂಡವರಿದ್ದಾರೆ.

ಶ್ರೀಗಳನ್ನು ಮೈಸೂರಿನ ಜನರು ಸದಾ ಸ್ಮರಿಸುವಂತಾಗಲು ಇವರ ಹೆಸರನ್ನು ಮೈಸೂರಿನ ಅಖಿಲ ಭಾರತ ವಾಕ್ ಶ್ರವಣ ಸಂಸ್ಥೆಯ ಮುಖ್ಯ ರಸ್ತೆಯ, ಆರ್.ಸಿ. ಇಂಜಿನಿಯರಿಂಗ್ ಕಾಲೇಜು, ಎಸ್‌ಜೆಸಿ ಇಂಜಿನಿಯರಿಂಗ್ ಕಾಲೇಜು, ವಿಜಯ ಶ್ರೀಪುರ, ಹುಣಸೂರು ಮುಖ್ಯ ರಸ್ತೆಯ ಪ್ರೀಮಿಯರ್ ಸ್ಟುಡಿಯೋವರೆಗಿನ ಮುಖ್ಯ ರಸ್ತೆಗೆ 'ಶ್ರೀ ಸಿದ್ದೇಶ್ವರ ಸ್ವಾಮೀಜಿ' ಮುಖ್ಯ ರಸ್ತೆ ಎಂದು ನಾಮಕರಣ ಮಾಡಲಿ, ಅಥವಾ ಅವರು ಪ್ರಕೃತಿ ಪ್ರೇಮಿಯಾದ್ದರಿಂದ ನಗರದ ಪ್ರಮುಖ ಪಾರ್ಕ್‌ಗೆ ಶ್ರೀಗಳ ಹೆಸರನ್ನು ನಾಮಕರಣ ಮಾಡುವ ಮೂಲಕ ಮೈಸೂರಿನ ನಗರ ಪಾಲಿಕೆ ಶ್ರೀ ಗಳ ಹೆಸರನ್ನು ಮೈಸೂರಿನ ಜನರಿಗೆ ಜೀವಂತವಾಗಿ ಇಡಲು ಕೋರುತ್ತೇನೆ.

–ಬೂಕನಕೆರೆ ವಿಜೇಂದ್ರ, ಕುವೆಂಪು ನಗರ, ಮೈಸೂರು.

ತರಕಾರಿ ಮಾರುಕಟ್ಟೆ ಸ್ವಚ್ಛಗೊಳಿಸಿ, ಸಾರ್ವಜನಿಕರ ಉಪಯೋಗಕ್ಕೆ ಮುಕ್ತಗೊಳಿಸಿ



ಮಾನ್ಯರೆ,

ಮೈಸೂರಿನ ಮಹಾನಗರ ಪಾಲಿಕೆಗೆ ಒಳಪಡುವ ಕಲ್ಯಾಣಗಿರಿ ನಗರ ಹಾಗೂ ಶಕ್ತಿ ನಗರಕ್ಕೆ (ವಾರ್ಡ್ ನಂ.35) ಹೊಂದಿಕೊಂಡಂತೆ ತ್ರಿವೇಣಿ ವೃತ್ತದ ಬಳಿ ಇರುವ ತರಕಾರಿ ಮಾರುಕಟ್ಟೆ ನಿರ್ಮಾಣವಾಗಿ ಬಹಳ ವರ್ಷಗಳೇ ಕಳೆದಿದೆ. ಒಂದು ದಿನವು ಉಪಯೊಗಕ್ಕೆ ಬಾರದ ಕೆಲಸಕ್ಕೆ ಪಾಲಿಕೆಯ ಹಣ ವ್ಯರ್ಥ ವಾಗಿದೆ. ಈ ಜಾಗವು ಪಾಳು ಬಿದ್ದು ಅಕ್ರಮ, ಅನೈತಿಕ ಕಾರ್ಯಗಳಿಗೆ ಉಪಯೋಗ ವಾಗುತ್ತಿರುವುದು ಶೋಚನೀಯ. ದಯವಿಟ್ಟು ಈ ಜಾಗವನ್ನು ಸ್ವಚ್ಛಗೊಳಿಸಿ ಸಾರ್ವಜನಿಕ ಮಾರುಕಟ್ಟೆಗೆ ಅವಶ್ಯಕವಾಗಿರುವ ಪರಿಸರ ನಿರ್ಮಾಣ ಮಾಡಿ, ಈ ಭಾಗದ ಜನರ ಹಾಗೂ ಬೀದಿ ಬದಿ ವ್ಯಾಪಾರಿಗಳಿಗೆ ಸ್ಥಳಾವಕಾಶ ನೀಡಬೇಕಾಗಿ ವಿನಂತಿ. ಜೊತೆಗೆ ಇದರ ಮುಂದಿರುವ ಶೌಚಾಲಯವೂ ಸಾರ್ವಜನಿಕ ಉಪಯೋಗಕ್ಕೆ ಮುಕ್ತಗೊಳಿಸಿದಲ್ಲಿ ಇದು ಜನಸಂದಣಿಯ ಪ್ರದೇಶವಾಗಿರುವುದರಿಂದ ಸಾರ್ವಜನಿಕರಿಗೆ ಬಹಳ ಉಪಯೋಗವಾಗುತ್ತದೆ.

–ರಾಜು. ಜೆ., ರಾಘವೇಂದ್ರ ನಗರ, ಮೈಸೂರು.

ಹಾವು, ಮುಂಗುಸಿ, ಇಲಿಗಳ ಕಾಟ ತಪ್ಪಿಸಿ

ಮಾನ್ಯರೆ,

ಮೈಸೂರಿನ ದಟ್ಟಗಳ್ಳಿಯ 'ಬಿ' ಬ್ಲಾಕ್‌ನಲ್ಲಿರುವ ಬಿಎಸ್‌ಎನ್‌ಎಲ್‌ನವರ ಖಾಲಿ ಜಾಗದಿಂದ ತೊಂದರೆಯಾಗುತ್ತಿದೆ. ಈ ಖಾಲಿ ಜಾಗದಲ್ಲಿ ಭಾರೀ ಪ್ರಮಾಣದಲ್ಲಿ ಹುಲ್ಲು, ಕಳೆ ಬೆಳೆದು ಹಾವು, ಮುಂಗುಸಿ, ಇಲಿ ಮುಂತಾದವುಗಳ ವಾಸಸ್ಥಾನ ವಾಗಿದೆ. ಇದರಿಂದ ಎದುರಿಗೆ ಮನೆಮಾಡಿಕೊಂಡಿರುವ ನಾಗರಿಕರಿಗೆ ಅನೇಕ ತೊಂದರೆಗಳಾಗುತ್ತಿವೆ.

ಮನೆಯ ಸುತ್ತ ಮುತ್ತಲಿನ ಜಾಗದಲ್ಲಿ, ರಸ್ತೆಗಳಲ್ಲಿ ಹಾವುಗಳು, ಇಲಿಗಳು ಹಾಗಾಗ ಓಡಾಡುತ್ತಿರುತ್ತವೆ. ಇದರಿಂದ ಮಕ್ಕಳು ಆಟವಾಡಲು, ಓಡಾಡಲು ಭಯಪಡುವಂತಾಗಿದೆ. ದಯವಿಟ್ಟು ಸಂಬಂಧಪಟ್ಟ ಬಿಎಸ್‌ಎನ್‌ಎಲ್ ಅಧಿಕಾರಿಗಳು ಇದರ ಬಗ್ಗೆ ಗಮನಹರಿಸಿ, ಈ ಜಾಗವನ್ನು ಸಂಪೂರ್ಣ ಸ್ವಚ್ಛ ಮಾಡಿಸಬೇಕಾಗಿ ವಿನಂತಿಸುತ್ತೇನೆ.

– ರಾಘವೇಂದ್ರ ಜೋಯಿಸ್, ದಟ್ಟಗಳ್ಳಿ ಮೂರನೇ ಹಂತ 'ಬಿ' ಬ್ಲಾಕ್, ಮೈಸೂರು.

ಅಪಾಯಕಾರಿ ಕಬ್ಬಿಣದ ಸೂಚನಾ ಫಲಕ!


ಮಾನ್ಯರೆ,



ನಗರದ ಹೃದಯ ಭಾಗವಾದ ಸಿದ್ದಪ್ಪ ವೃತ್ತದ ಬಳಿ ಇರುವ ಬಸ್ ನಿಲ್ದಾಣದಲ್ಲಿ ಕಬ್ಬಿಣದ ಸೂಚನಾ ಫಲಕ ತುಂಬಾ ಕೆಳಮಟ್ಟದಲ್ಲಿದ್ದು, ತುಂಬಾ ಅಪಾಯಕಾರಿಯಾಗಿದೆ. ಒಂದೊಮ್ಮೆ ಯಾರಾದರೂ ಮೊಬೈಲ್ ನೋಡಿಕೊಂಡು ಅಥವಾ ಮೈಮರೆತು ನಡೆದುಕೊಂಡು ಬಂದು ಅದೇನಾದರೂ ತಲೆಗೆ ಬಡಿದರೆ ಕಲಾಸ್ !! ಇಂತಹ ಸಾಕಷ್ಟು ಕೆಳಮಟ್ಟದಲ್ಲಿರುವ ಸೂಚನಾ ಫಲಕಗಳು ನಗರಾದ್ಯಂತ ಕಾಣಸಿಗುತ್ತದೆ. ನಗರಪಾಲಿಕೆ ಆಯಾಯ ವ್ಯಾಪ್ತಿಯ ಅಧಿಕಾರಿಗಳು ಏಕೆ ಈ ವಿಷಯದಲ್ಲಿ ಮುತುವರ್ಜಿ ತೋರಿಸುತ್ತಿಲ್ಲ. ಟಿ.ಕೆ.ಲೇಔಟ್ ಮಾರುತಿ ಟೆಂಟ್ ಬಳಿ ಇರುವ ತೆರಳಬಾಳು ಶಾಲೆ ಬಳಿಯಲ್ಲಿಯೂ ಇಂತಹುದೇ ಸೂಚನಾ ಫಲಕ ಇದೆ. ಶಾಲಾ ವಿದ್ಯಾರ್ಥಿಗಳು ಈ ಸ್ಥಳದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ನಿತ್ಯವೂ ಓಡಾಡುತ್ತಿರುತ್ತಾರೆ. ಆದುದರಿಂದ ಎಲ್ಲೆಲ್ಲಿ ಕೆಳಮಟ್ಟದಲ್ಲಿರುವ ಸೂಚನಾ ಫಲಕಗಳು ಇವೆಯೋ ಅವನ್ನು ಸ್ವಲ್ಪ ಎತ್ತರಕ್ಕೆ, 7 ಅಡಿಗೆ ಎತ್ತರಿಸಬೇಕು. ಈ ಕಾರ್ಯವನ್ನು ನಗರಪಾಲಿಕೆ ಅಧಿಕಾರಿಗಳು ಜರೂರು ಮಾಡಲು ಸಾಧ್ಯವೇ.

– ಜಿ.ಪಿ.ಹರೀಶ್, ವಿ.ವಿ.ಮೊಹಲ್ಲಾ, ಮೈಸೂರು.

ಸಂಸ್ಕೃತಿ ಚಿಂತನಾ



ಡಾ. ಹೆಚ್.ವಿ. ನಾಗರಾಜರಾವ್
ಮೈಸೂರು

ವಿಷ್ಣುಸಹಸ್ರನಾಮ

ವಿಷ್ಣು ಸಹಸ್ರನಾಮ ಸ್ತೋತ್ರವು ಮಹಾಭಾರತದ ಅನುಶಾಸನ ಪರ್ವದಲ್ಲಿದೆ. ಭೀಷ್ಮ ಪರ್ವದಲ್ಲಿರುವ ಭಗವದ್ಗೀತೆ, ಅನುಶಾಸನ ಪರ್ವದಲ್ಲಿರುವ ವಿಷ್ಣುಸಹಸ್ರ ನಾಮ ಸ್ತೋತ್ರ –ಇವೆರಡು ಮಹಾಭಾರತದ ಎರಡು ಕಣ್ಣುಗಳಂತೆ ಇವೆ. ಮಹಾಭಾರತದ ಯುದ್ಧ ಮುಗಿದ ಮೇಲೆ ಪಾಂಡವರಿಗೆ ರಾಜ್ಯ ದೊರಕಿತು. ಧರ್ಮರಾಯನ ಪಟ್ಟಾಭಿಷೇಕವಾಯಿತು. ಇಚ್ಛಾಮರಣಿ ಭೀಷ್ಮನು ಉತ್ತರಾಯಣ ಬರಲಿ ಎಂದು ಶರಶಯ್ಯೆಯಲ್ಲಿ ಮಲಗಿದ್ದನು. ಆಗ ಧರ್ಮರಾಯನು ಪಿತಾಮಹ ಭೀಷ್ಮನ ಬಳಿಗೆ ಹೋಗಿ ರಾಜಧರ್ಮಗಳನ್ನು ತಿಳಿದುಕೊಂಡು ಆಮೇಲೆ ಮಾನವ ಧರ್ಮ ಸಾರ್ಥಕವಾಗಲು, ಅಂತಿಮ ಗುರಿ ಆಗಿರುವ ಮೋಕ್ಷವನ್ನು ಪಡೆಯಲು ಯಾವ ಮಾರ್ಗವನ್ನು ಅನುಸರಿಸಬೇಕು, ಯಾವ ದೇವರನ್ನು ಧ್ಯಾನಿಸಬೇಕು ಎಂದು ಕೇಳುತ್ತಾನೆ.

ಕಿಮೇಕಂ ದೈವತಂ ಲೋಕೇ
ಕಿಂ ವಾಪ್ಯೇಕಂ ಪರಾಯಣಮ್।
ಸ್ತುವಂತಃ ಕಂ ಕಮರ್ಚಂತಃ
ಪ್ರಾಪ್ನುಯುರ್ಮಾನವಾಃ ಶುಭಮ್॥
ಕೋ ಧರ್ಮಃ ಸರ್ವಧರ್ಮಾಣಾಂ
ಭವತಃ ಪರಮೋ ಮತಃ।
ಕಿಂ ಜಪನ್ ಮುಚ್ಯತೇ ಜಂತುಃ
ಜನ್ಮ ಸಂಸಾರ ಬಂಧನಾತ್॥

ಎಂಬುದು ಅವನ ಪ್ರಶ್ನೆ. ಈ ಪ್ರಪಂಚದಲ್ಲಿ ಮುಖ್ಯ ದೇವರು ಯಾರು? ಎಲ್ಲರಿಗೆ ಆಶ್ರಯವಾಗುವ ಅವಲಂಬನೆ ಯಾವುದು? ಯಾರನ್ನು ಸ್ತುತಿಸಿ, ಯಾರನ್ನು ಪೂಜಿಸಿ ಮಾನವರೆಲ್ಲರೂ ಶುಭವನ್ನು ಪಡೆದುಕೊಳ್ಳಬಹುದು? ಎಲ್ಲ ಧರ್ಮಗಳಿಗೆ ಮೇಲಿರುವ ಧರ್ಮ ಯಾವುದು? ಯಾವ ಸ್ತೋತ್ರವನ್ನು ಜಪಿಸಿದವರು ಜನ್ಮ ಮರಣಗಳ ಬಂಧನದಿಂದ ಮುಕ್ತರಾಗುತ್ತಾರೆ? ಎಂಬುದು ಯುಧಿಷ್ಠಿರನ ಪ್ರಶ್ನೆಯ ಸಾರ. ಇದಕ್ಕೆ ಉತ್ತರವಾಗಿ ಪರಮಜ್ಞಾನಿಯೂ ಪರಮಭಗವದ್ಭಕ್ತನೂ ಆಗಿದ್ದ ಭೀಷ್ಮನು "ಸಮಸ್ತ ಜಗತ್ತಿನ ಪ್ರಭು ಪುರುಷೋತ್ತಮ ನಾದ ಮಹಾವಿಷ್ಣು. ಆ ಭಗವಂತನನ್ನು ಸಹಸ್ರನಾಮಗಳಿಂದ ಸ್ತುತಿಸಿ, ಅರ್ಚಿಸಿ, ಧ್ಯಾನಿಸಿ ಮನುಷ್ಯನು ಎಲ್ಲ ದುಃಖಗಳನ್ನು ದಾಟಿ ಸಂಸಾರಬಂಧನದಿಂದ ಮುಕ್ತನಾಗುತ್ತಾನೆ" ಎಂದು ಹೇಳಿ–

ಯಾನಿ ನಾಮಾನಿ ಗೌಣಾನಿ
ವಿಖ್ಯಾತಾನಿ ಮಹಾತ್ಮನಃ।
ಋಷಿಭಿಃ ಪರಿಗೀತಾನಿ ತಾನಿ
ವಕ್ಷ್ಯಾಮಿ ಭೂತಯೇ॥

ಎಂದು ಹಿಂದೆ ಋಷಿಗಳು ಹೇಳಿದ್ದ ಸಾವಿರ ದಿವ್ಯ ನಾಮಗಳನ್ನು ಹೇಳುತ್ತಾನೆ ಅದೇ ವಿಷ್ಣು ಸಹಸ್ರನಾಮ ಸ್ತೋತ್ರ

ನೂರೆಂಟು ಶ್ಲೋಕಗಳಲ್ಲಿ ಒಂದು ಸಾವಿರ ಹರಿನಾಮಗಳಿವೆ. ಇವುಗಳನ್ನು ಸುಮ್ಮನೆ ಜಪಿಸಿದರೂ ಪುಣ್ಯವಿದೆ. ಆದರೆ ಸಂಪ್ರದಾಯಾನುಸಾರವಾಗಿ ಸಂಕಲ್ಪಾದಿಗಳನ್ನೂ ಅಂಗನ್ಯಾಸವನ್ನೂ ಮಾಡಿ ಭಗವದ್ ಧ್ಯಾನಪೂರ್ವಕ ಜಪ ಮಾಡಿದರೆ ಹೆಚ್ಚು ಫಲ. ಅವುಗಳ ಕ್ರಮವನ್ನೂ ಪುಸ್ತಕಗಳಲ್ಲಿ ಕೊಟ್ಟಿದ್ದಾರೆ. ಜಪವು ವಾಚಿಕ, ಉಪಾಂಶು, ಮಾನಸ ಎಂದು ಮೂರು ವಿಧವಾಗಿದೆ. ವಾಚಿಕವು ಆರಂಭದ ದೆಸೆಯಲ್ಲಿ ಸೂಕ್ತ. ಎಲ್ಲರಿಗೂ ಕೇಳಿಸುವಂತೆ ಹೇಳುವುದು ವಾಚಿಕ. ಸಾಮೂಹಿಕ ಜಪದಲ್ಲಿ ಇದನ್ನು ಕಾಣುತ್ತೇವೆ. ಅನಂತರದ ದೆಸೆಯಲ್ಲಿ ಉಪಾಂಶುಜಪ. ಇದು ಎಲ್ಲರಿಗೂ ಕೇಳಿಸುವಂತೆ ಮಾಡುವುದಲ್ಲ. ಜಪಿಸುವವನಿಗೆ ಮಾತ್ರ ಕೇಳಿಸುವಂತೆ ನಾಮಗಳನ್ನು ಉಚ್ಚರಿಸಬೇಕು. ಒಂದೊಂದು ನಾಮವನ್ನು ಉಚ್ಚರಿಸುವಾಗಲೂ ಅದರ ಅರ್ಥದ ಅನುಸಂಧಾನವನ್ನು ಮಾಡಿಕೊಳ್ಳಬೇಕು. ಮೂರನೆಯದು ಮನಸಜಪ. ಇದು ಶ್ರೇಷ್ಠಭಕ್ತರಿಗೆ ಮಾತ್ರ ಸಾಧ್ಯ. ಈ ಜಪದಲ್ಲಿ ಮನಸ್ಸು ಒಂದೊಂದು ನಾಮವನ್ನು ಉಚ್ಚರಿಸಿದಾಗ ಅದರ ಅರ್ಥಾನುಸಂಧಾನಕ್ಕೆ ಅನುಗುಣವಾಗಿ ಭಗವಂತನ ಆ ದಿವ್ಯ ಸ್ವರೂಪವು ಮನಸ್ಸಿನಲ್ಲಿ ಗೋಚರಿಸುತ್ತದೆ.

ವಿಷ್ಣು ಸಹಸ್ರನಾಮ ಸ್ತೋತ್ರದ ಜಪಕ್ಕೆ ಭಕ್ತರಿಗೆ ಅನುಕೂಲ ಆಗಲಿ ಎಂದು ಪೂಜ್ಯರಾದ ಆಚಾರ್ಯರು ಭಾಷ್ಯಗಳನ್ನು ಬರೆದಿದ್ದಾರೆ. ಅವರು ಪಾಂಡಿತ್ಯಪೂರ್ಣವಾಗಿ ಸಂಸ್ಕೃತದಲ್ಲಿ ಬರೆದಿರುವ ಭಾಷ್ಯಗಳನ್ನು ಅನುಸರಿಸಿ ಅನೇಕರು ಕನ್ನಡ, ಇಂಗ್ಲೀಷ್ ಮುಂತಾದ ಭಾಷೆಗಳಲ್ಲಿ ವಿವರಣೆಗಳನ್ನೂ, ವ್ಯಾಖ್ಯಾನಗಳನ್ನೂ ಬರೆದಿದ್ದಾರೆ. ಆದ್ದರಿಂದ ಯಾವ ಜಾತಿ, ವರ್ಣ, ಕುಲ, ದೇಶ ಎಂಬ ಭೇದಗಳನ್ನು ಗಣಿಸದೆ ಎಲ್ಲರೂ ಪಠಿಸಿ ಧನ್ಯರಾಗಬಹುದು ಎನ್ನುವ ಸ್ತೋತ್ರವೇ ವಿಷ್ಣು ಸಹಸ್ರನಾಮ.



ಈ ಸ್ತೋತ್ರಕ್ಕೆ ನಮಗೆ ಲಭ್ಯವಾಗಿರುವ ಭಾಷ್ಯಗಳಲ್ಲಿ ಅತ್ಯಂತ ಪ್ರಾಚೀನವಾದುದು ಶ್ರೀ ಶಂಕರಾಚಾರ್ಯರು ಬರೆದಿರುವ ಭಾಷ್ಯ. ಈ ಭಾಷ್ಯದಲ್ಲಿ ವಿಷ್ಣು ಸಹಸ್ರನಾಮ ಸ್ತೋತ್ರದ ಆರಂಭದಲ್ಲಿ ಆಚಾರ್ಯರು ಬರೆದಿರುವ ಪೀಠಿಕೆಯನ್ನು ಅಚಲವಾದ ಹರಿಭಕ್ತಿ ವ್ಯಕ್ತವಾಗುತ್ತದೆ. ಸಾವಿರ ನಾಮಗಳಲ್ಲಿ ಮೊದಲನೆಯದು ವಿಶ್ವಂ.

ವಿಶ್ವಂ ವಿಷ್ಣುರ್ವಷಟ್ಕಾರೋ
ಭೂತಭವ್ಯಭವತ್‌ಪ್ರಭುಃ।
ಭೂತಕೃದ್ ಭೂತಭೃದ್
ಭಾವೋ ಭೂತಾತ್ಮಾ
ಭೂತಭಾವನಃ॥

ಎಂಬುದೇ ಮೊದಲನೆಯ ಶ್ಲೋಕ. ವಿಶ್ವಂ ಎಂಬುದರಿಂದ ಭಗವಂತನು ಸಮಸ್ತ ಜಗತ್ತನ್ನೂ ಒಳಗೊಂಡಿದ್ದಾನೆ. ಎಲ್ಲಾ ಚರಾಚರ ವಸ್ತುಗಳಲ್ಲಿ ಪ್ರವೇಶಿಸಿದ್ದಾನೆ. ಈ ವಿಶ್ವವು ಸತತವಾಗಿ ಬೆಳೆಯುತ್ತಿರುವ, ಎಲ್ಲೆಡೆ ವಿಸ್ತರಿಸುತ್ತಿರುವುದು, ಭಗವಂತನ ಅಭಿವ್ಯಕ್ತಿಯೇ ವಿಶ್ವ ಮುಂತಾದ ಅರ್ಥಗಳನ್ನು ವೇದಗಳ, ಪುರಾಣಗಳ ಮತ್ತು ಇತರ ಗ್ರಂಥಗಳ ಆಧಾರದಿಂದ ಶಂಕರಾಚಾರ್ಯರು ಪ್ರತಿಪಾದಿಸಿದ್ದಾರೆ. ಎರಡನೆಯ ನಾಮ ವಿಷ್ಣು. ವೇವೇಷ್ಟಿ ಸರ್ವಮಿತಿ ವಿಷ್ಣುಃ, ಎಲ್ಲವನ್ನೂ ವ್ಯಾಪಿಸಿ ಧರಿಸಿ ನಿಂತಿರುವವನು ವಿಷ್ಣು. "ಅಂತರ್ಬಹಿಶ್ಚ ತತ್ಸರ್ವಂ ವ್ಯಾಪ್ಯ ನಾರಾಯಣಃ ಸ್ಥಿತಃ" ಎಂಬ ಉಪ ನಿಷದ್ವಾಕ್ಯವೂ ಇದನ್ನು ಸಮರ್ಥಿಸುತ್ತದೆ. ವಷಟಕಾರಃ ಎಂಬುದು ಯಾಗದಲ್ಲಿ ದೇವ ತೋದ್ದೇಶದಿಂದ ಮಾಡುವ ಅರ್ಪಣೆಯನ್ನು ಸೂಚಿಸುವ ಪದ. ಎಲ್ಲ ಯಜ್ಞಗಳ ಅರ್ಪಣೆಯನ್ನು ಸ್ವೀಕರಿಸುವವನು ವಿಷ್ಣುವೇ. "ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ" ಎಂಬ ಭಗವದ್ಗೀತಾ ವಾಕ್ಯವನ್ನಿಲ್ಲಿ ಸ್ಮರಿಸಬೇಕು. ಭೂತಭವ್ಯ ಭವತ್ ಪ್ರಭುಃ ಎಂಬ ನಾಮವು ಪರಮಾತ್ಮನ ಕಾಲಾತೀತ ಮಹಿಮೆಯನ್ನು ತಿಳಿಸುತ್ತದೆ. ಭೂತ ಎಂದರೆ ಆಗಿಹೋದದ್ದು, ಭವ್ಯ ಎಂದರೆ ಮುಂದೆ ಆಗುವುದು, ಭವತ್ ಎಂದರೆ ಈಗ ಆಗುತ್ತಿರುವುದು– ಇವೆಲ್ಲಕ್ಕೂ ವಿಷ್ಣುವೇ ಪ್ರಭು, ನಿಯಾಮಕ. ಹೀಗೆ ಒಂದೊಂದು ನಾಮದ ಅರ್ಥಗಳನ್ನು ಭಾಷ್ಯಕಾರರು ವಿವರಿಸಿದ್ದಾರೆ. ಈಶ್ವರ, ಮಾಧವ, ಅಮೋಘ ಮುಂತಾದ ಪದಗಳು ಒಂದಕ್ಕಿಂತ ಹೆಚ್ಚು ಸಲ ಉಕ್ತವಾಗಿವೆ. ಅಂತಹ ಸಂದರ್ಭಗಳಲ್ಲಿ ಬೇರೆ ಬೇರೆ ಅರ್ಥ ಇರುವುದರಿಂದ ಪುನರುಕ್ತಿದೋಷ ಇಲ್ಲವೆಂದು ಭಾಷ್ಯಕಾರರು ವಿಶೇಷವಾಗಿ ನಿರೂಪಿಸಿದ್ದಾರೆ.

ವಿಷ್ಣು ಸಹಸ್ರನಾಮದ ಪಠನದಿಂದ ಅದ್ಭುತ ಪ್ರಯೋಜನ ಉಂಟಾಗುವುದೆಂದು ಫಲಶ್ರುತಿಯಲ್ಲಿ ಹೇಳಲಾಗಿದೆ. ನಂಬಿಕೆಯಿಟ್ಟು ಜಪ ಮಾಡಿದವರಿಗೆ ಫಲ ದೊರಕುತ್ತದೆ.

ಯ ಇದಂ ಶೃಣುಯಾನ್ನಿತ್ಯಂ
ಯಶ್ಚಾಪಿ ಪರಿಕೀರ್ತಯೇತ್।
ನಾಶುಭಂ ಪ್ರಾಪ್ನುಯಾತ್
ಕಿಂಚಿತ ಸೋಽಮುತ್ರೇಹ ಚ
ಮಾನವಃ॥

ಈ ವಿಷ್ಣು ಸಹಸ್ರನಾಮ ಸ್ತೋತ್ರವನ್ನು ಯಾವನು ಕೇಳುತ್ತಾನೋ ಮತ್ತು ಯಾವನು ಹೇಳುತ್ತಾನೋ, ಅಂತಹವನು ಈ ಲೋಕದಲ್ಲಾಗಲಿ ಪರಲೋಕದಲ್ಲಾಗಲಿ ಯಾವ ಅಶುಭವನ್ನೂ ಕಾಣುವುದಿಲ್ಲ ಎಂದು ಎಲ್ಲರನ್ನೂ ಉದ್ದೇಶಿಸಿ ಹೇಳಲಾಗಿದೆ.

ಅನೇಕರು ಯಾಂತ್ರಿಕವಾಗಿ ಸಹಸ್ರನಾಮವನ್ನು ಪಠಿಸುತ್ತಾರೆ. ಅಷ್ಟೂ ನನಗೆ ಬಾಯಿಗೆ ಬರುತ್ತದೆ ಎಂದು ಜಂಬದಿಂದ ಹೇಳಿ ಕೊಂಡು ಪಟಪಟನೆ ಅರಳು ಹುರಿದಂತೆ ಹೇಳುತ್ತಾರೆ. ಅರ್ಥಾನುಸಂಧಾನವಾಗಲಿ, ಭಕ್ತಿರಸದ ಅನುಭವದಿಂದ ಹೃದಯದ ಆರ್ದ್ರತೆಯಾಗಲಿ ಅವರಲ್ಲಿ ಕಾಣಿಸುವುದಿಲ್ಲ. ಅಂತಹ ಪಠನವನ್ನು ಯಂತ್ರವೂ ಮಾಡುತ್ತದೆ. ಯಂತ್ರಕ್ಕೆ ಮುಕ್ತಿ ಉಂಟಾಗುವುದೆ? ನಿಜವಾಗಿ ಭಕ್ತಿಯಿಂದ ವಿಷ್ಣು ಸಹಸ್ರ ನಾಮಜಪ ಮಾಡಿದವರ ಲಕ್ಷಣವೇನು ಎಂಬುದನ್ನು ಅಲ್ಲೇ ಹೇಳಿದ್ದಾರೆ.

ನ ಕ್ರೋಧೋ ನ ಚ
ಮಾತ್ಸರ್ಯಂ
ನ ಲೋಭೋ ನಾಶುಭಾ ಮತಿಃ।
ಭವಂತಿ ಕೃತಪುಣ್ಯಾನಾಂ
ಭಕ್ತಾನಾಂ ಪುರುಷೋತ್ತಮೇ॥

"ಪುರುಷೋತ್ತಮ ವಿಷ್ಣುವಿನ ಭಕ್ತರು ಈ ಪುಣ್ಯ ಕಾರ್ಯವನ್ನು ಮಾಡಿದರೆ ಅವರಲ್ಲಿ ಕೋಪ, ಮಾತ್ಸರ್ಯ, ಲೋಭ ಪರರಿಗೆ ಕೇಡನ್ನು ಬಯಸುವ ಬುದ್ಧಿ ಇರುವುದಿಲ್ಲ" ಎಂದು ಈ ಪದ್ಯದ ತಾತ್ಪರ್ಯ. ಸಹಸ್ರನಾಮವನ್ನು ಓದಿದವರು ಕ್ರೋಧವನ್ನು ತ್ಯಜಿಸಿ ಶಾಂತವಾದ ಮನಸ್ಸನ್ನು ಹೊಂದಿದವರಾಗಬೇಕು. ಬೇರೆಯವರಿಗೆ ಒಳ್ಳೆಯದು ಆದಾಗ ಹೊಟ್ಟೆ ಕಿಚ್ಚು ಹುಟ್ಟಿ ಮತ್ಸರಿ ಗಳಾಗಲೇಬಾರದು. ಯಾವುದನ್ನೂ ಖರ್ಚು ಮಾಡದೆ ಕೂಡಿಟ್ಟು ತನಗೂ ತನ್ನನ್ನು ಅವಲಂಭಿಸಿದವರಿಗೂ ಯಾವ ಸುಖಕ್ಕೂ ಅವಕಾಶವನ್ನು ಕೊಡದ ಲೋಭಿಯಾಗಬಾರದು – ಎಂದರೆ ಜಿಪುಣತನ ಮಾಡಬಾರದು. ಅಶುಭಾ ಮತಿಃ ಎಂದರೆ ಪರರ ಮನೆಯನ್ನು ಹಾಳು ಮಾಡುವ ಬುದ್ಧಿ. ಭಗವಂತನ ಭಕ್ತರಲ್ಲಿ ಅಂತಹ ಕೆಟ್ಟ ಬುದ್ಧಿ ಸುಳಿದಾಡಬಾರದು.

ಸಹಸ್ರನಾಮವನ್ನೂ ಹೇಳಲಾರದವರು ರಾಮನಾಮವನ್ನೇ ಹೇಳಿದರೆ ಅಷ್ಟೇ ಫಲ ದೊರಕುತ್ತದೆ ಎಂದೂ ಸ್ತೋತ್ರದ ಕೊನೆಯಲ್ಲಿ ಹೇಳಿದೆ.

ರಮರಾಮೇತಿ ರಾಮೇತಿ
ರಮೇ ರಾಮೇ ಮನೋರಮೇ।
ಸಹಸ್ರನಾಮ ತತ್ತುಲ್ಯಂ
ರಾಮನಾಮ ವರಾನನೇ॥

ಎಂಬ ಶ್ಲೋಕದಲ್ಲಿ ರಾಮನಾಮವು ಸಹಸ್ರನಾಮಗಳಿಗೆ ಸಮಾನ. ಅದನ್ನೇ ನಾನು ಸದಾ ಜಪಿಸುತ್ತೇನೆ ಎಂಬ ಭಾವನೆ ಇದೆ. ಕಾಶೀ ಕ್ಷೇತ್ರದಲ್ಲಿ ಸಾಕ್ಷಾತ್ ಶಿವನು ಆಸನ್ನ ಮರಣರಾದವರಿಗೆ ರಾಮನಾಮವನ್ನು ಕಿವಿಯಲ್ಲಿ ಹೇಳುತ್ತಾನೆ ಎಂಬ ನಂಬಿಕೆಯಿದೆ. ಅದು ರಾಮನಾಮ ಮಹಿಮೆಗಾಗಿ ಹೇಳಿದ ಮಾತಿರಬಹುದು. ಏನೇ ಆದರೂ ವಿಷ್ಣು ಸಹಸ್ರನಾಮವನ್ನು ನಿರ್ಮಲವಾದ ಮನಸ್ಸಿನಿಂದ ಪಠಿಸಿದರೆ, ಅರ್ಥಾನುಸಂಧಾನವನ್ನೂ ಮಾಡಿಕೊಂಡು ಭಕ್ತಿಯಿಂದ ಭಗವಂತನನ್ನು ಆರಾಧಿಸಿದರೆ ಸಕಲ ಶ್ರೇಯಸ್ಸು ಲಭಿಸುವುದರಲ್ಲಿ ಸಂಶಯವಿಲ್ಲ. ನಮಃ ಕೃಷ್ಣಾಯ.

ಪ್ರಸ್ತುತ ಸಿವಿಲ್ ಇಂಜಿನಿಯರಿಂಗ್ ವಿದ್ಯಾರ್ಥಿಗಳು ಪಾರಂಪರಿಕ ಕಟ್ಟಡಗಳ ನಿರ್ಮಾಣದ ಕೌಶಲದ ಬಗ್ಗೆ ಅರಿಯಬೇಕು

ಪುರಾತತ್ವ ಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಸ್.ರಂಗರಾಜು ಕಿವಿಮಾತು

ಮೈಸೂರು, ಫೆ.14(ಎಸ್‌ಪಿಎನ್)– ಪ್ರಸ್ತುತ ಸಿವಿಲ್ ಇಂಜಿನಿಯರಿಂಗ್ ಪಠ್ಯದಲ್ಲಿ 'ಪುರಾತತ್ವ ಮತ್ತು ಪಾರಂಪರಿಕ ಕಟ್ಟಡಗಳಲ್ಲಿ'ರುವ ತಾಂತ್ರಿಕ ಅಂಶಗಳನ್ನು ಅಳವಡಿಸಿಲ್ಲ ಎಂದು ಮೈಸೂರು ವಿವಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ. ಎನ್.ಎಸ್.ರಂಗರಾಜು ಅಭಿಪ್ರಾಯಪಟ್ಟರು.

ಮೈಸೂರು ಜೆಎಲ್‌ಬಿ ರಸ್ತೆಯ ಎಂಜಿನಿಯರ್‌ಗಳ ಸಂಸ್ಥೆ ಸಭಾಂಗಣದಲ್ಲಿ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನೀಯರ್ಸ್ (ಇಂಡಿಯಾ) ಮೈಸೂರು ಘಟಕದ ವತಿಯಿಂದ ಆಯೋಜಿಸಿದ್ದ 'ಮೈಸೂರು ಪರಂಪರೆ ರಚನೆ, ಅದರ ಸಂರಕ್ಷಣೆ ಮತ್ತು ನಿರ್ಮಾಣಕ್ಕೆ ಬಳಸಲಾಗುವ ವಸ್ತು' ಕುರಿತು ಮಾತನಾಡಿದ ಅವರು, ಪ್ರಸ್ತುತ ಸಿವಿಲ್ ಇಂಜಿನಿಯರಿಂಗ್ ಓದುವ ವಿದ್ಯಾರ್ಥಿಗಳಿಗೆ ಪುರಾತತ್ವ ಕಟ್ಟಡಗಳ ಸಿವಿಲ್ ಕೆಲಸಗಳಿಗೆ ಉಪಯೋಗಿಸಿರುವ ತಾಂತ್ರಿಕ ಅಂಶಗಳ ಬಗ್ಗೆ ತಿಳಿದುಕೊಳ್ಳಲು ಪಠ್ಯದ ಅವಶ್ಯಕತೆ ಇದೆ ಎಂದರು.

ಮೈಸೂರಿನಲ್ಲಿ ಸುಮಾರು 600 ಕ್ಕೂ ಅಧಿಕ ಪಾರಂಪರಿಕ ಕಟ್ಟಡಗಳನ್ನು ಮೊದಲಿಗೆ ಗುರುತಿಸಲಾಗಿದ್ದು, ಇವುಗಳಲ್ಲಿ ರಾಜ್ಯ ಸರ್ಕಾರ 131 ಕಟ್ಟಡಗಳನ್ನು ಪಾರಂಪರಿಕ ಕಟ್ಟಡಗಳು ಎಂದು ಗುರುತಿಸಿದೆ. ಅಲ್ಲದೆ, ಮೈಸೂರು ವಿವಿ ವ್ಯಾಪ್ತಿಯಲ್ಲಿ 25 ಪುರಾತತ್ವ ಕಟ್ಟಡಗಳಿವೆ. ಯಾದವಗಿರಿಯಲ್ಲಿನ ಖ್ಯಾತ ಸಾಹಿತಿ ಆರ್.ಕೆ.ನಾರಾಯಣ್ ಅವರ ಮನೆಯನ್ನು ಗುತ್ತಿಗೆದಾರರಿಂದ ಮತ್ತೆ ಖರೀಧಿಸಿ ಪಡೆದು ಅಧಿಕಾರಿಗಳ ಸಹಾಯದಿಂದ ಸಂರಕ್ಷಣೆ ಮಾಡಲಾಗಿದೆ ಎಂದು ತಿಳಿಸಿದರು.

2004ರಲ್ಲಿ ಎಸ್.ಎಂ.ಕೃಷ್ಣ ಮುಖ್ಯಮಂತ್ರಿಗಳಾಗಿದ್ದಾಗ ಅಂದಿನ ಹಿರಿಯ ಐಎಎಸ್ ಅಧಿಕಾರಿ ವಿಜಯ್ ಭಾಸ್ಕರ್ ಅವರ ಸಲಹೆ ಮೇರೆಗೆ ಪುರಾತತ್ವ ಮತ್ತು ಪ್ರಾಚ್ಯ ವಸ್ತು ಸಂಶೋಧಾಲಯದ ಹೆಸರಿನಲ್ಲಿ ಪ್ರತ್ಯೇಕ ಕಚೇರಿಯನ್ನೇ ಸ್ಥಾಪಿಸಲಾಯಿತು. ಈ ಇಲಾಖೆಯಲ್ಲಿ ಐಎಎಸ್ ಅಥವಾ ಹಿರಿಯ ಶ್ರೇಣಿ ಕೆಎಎಸ್ ಅಧಿಕಾರಿಗಳ ನೇತೃತ್ವದಲ್ಲಿ ಕಾರ್ಯ ನಿರ್ವಹಣೆಯಾಗುತ್ತಿದೆ. ಪ್ರಸ್ತುತ ದೇವರಾಜ್ ಎಂಬುವರು ಆಯುಕ್ತರಾಗಿ ಕೆಲಸ ಮಾಡುತ್ತಿದ್ದಾರೆ. ಈ ಕಚೇರಿ ಘೋಷಣೆ ಮಾಡುವ ಮೊದಲು ಮೈಸೂರು ಮತ್ತು ಶ್ರೀರಂಗಪಟ್ಟಣವನ್ನು ಅಂದಿನ ಮುಖ್ಯ ಮಂತ್ರಿ ಎಸ್.ಎಂ.ಕೃಷ್ಣ ಅವರು ಪಾರಂಪರಿಕ ನಗರಗಳೆಂದು ಘೋಷಿಸಿದರು. ನಂತರ ಮೈಸೂರಿನಲ್ಲಿ 'ಹೆರಿಟೇಜ್ ವಾಕ್' ಆರಂಭಿಸಿ ಜನರಲ್ಲಿ ಪಾರಂಪರಿಕ ಕಟ್ಟಡಗಳ ಬಗ್ಗೆ ಜಾಗೃತಿ ಮೂಡಿಸಿದ ವಿವರಗಳನ್ನು ಎಳೆಎಳೆಯಾಗಿ ಬಿಡಿಸಿದರು.



ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನೀಯರ್ಸ್ (ಇಂಡಿಯಾ) ಮೈಸೂರು ಘಟಕದ ವತಿಯಿಂದ ಆಯೋಜಿಸಿದ್ದ 'ಮೈಸೂರು ಪರಂಪರೆ ರಚನೆ, ಅದರ ಸಂರಕ್ಷಣೆ ಮತ್ತು ನಿರ್ಮಾಣಕ್ಕೆ ಬಳಸಲಾಗುವ ವಸ್ತು' ಕುರಿತು ಮೈಸೂರು ವಿವಿ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಶಾಸ್ತ್ರ ವಿಭಾಗದ ನಿವೃತ್ತ ಪ್ರಾಧ್ಯಾಪಕ ಡಾ.ಎನ್.ಎಸ್.ರಂಗರಾಜು ಮಾತನಾಡಿದರು.

ಮೈಸೂರಿನಲ್ಲಿ ಆಯೋಜಿಸಿದ್ದ ಮೊದಲ ಹೆರಿಟೇಜ್ ವಾಕ್‌ಗೆ ಅಂದಾಜು 80 ಜನ ಭಾಗವಹಿಸಿದ್ದರು. ಈಗಲೂ ಈ ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗುತ್ತಿದೆ.

ಅಲ್ಲದೆ, ಮೈಸೂರಿನಲ್ಲಿ 14 ಅರಮನೆಗಳಿದ್ದವು. ಅದರಲ್ಲೊಂದು ಅರಮನೆ ಈಗಾಗಲೇ ಕೆಡವಲಾಗಿದೆ. ಮೈಸೂರು ವಿವಿ ಕ್ಯಾಂಪಸ್ ವಿಸ್ತರಣೆಗೆ ಕುವೆಂಪು ಅವರು ಕುಲಪತಿಗಳಾಗಿದ್ದಾಗ 10 ಲಕ್ಷ ರೂ.ಗಳಿಗೆ ಜಯ ಚಾಮರಾಜ ಒಡೆಯರ್ ಅವರೊಂದಿಗೆ ಮಾತುಕತೆ ನಡೆಸಿ ಈಗಿನ ಮಾನಸ ಗಂಗೋತ್ರಿ ಆವರಣವನ್ನು ಖರೀದಿ ಮಾಡಿದರು. ನಂತರ ಕೇಂದ್ರದಲ್ಲಿ ನೆಹರು ಪ್ರಧಾನ ಮಂತ್ರಿಗಳಾಗಿದ್ದಾಗ ಮೈಸೂರಿನಲ್ಲಿ ಸಿಎಫ್‌ಟಿಆರ್‌ಐ ಸ್ಥಾಪಿಸಲು ಈಗಿನ ಚೆಲುವಾಂಬ ಅರಮನೆ ಜಾಗವನ್ನು ಕೇವಲ ಒಂದು ರೂಪಾಯಿಗೆ ನೋಂದಣಿ ಮಾಡಿಕೊಟ್ಟ ಜಯಚಾಮರಾಜ ಒಡೆಯರ್ ಅವರ ಉದಾರತೆಯನ್ನು ಕೊಂಡಾಡಿದರು.

1799ರಲ್ಲಿ ಟಿಪ್ಪು ನಿಧನ ನಂತರ ಮೈಸೂರು ಅರಸರು ಶ್ರೀರಂಗಪಟ್ಟಣದಿಂದ ಮೈಸೂರಿಗೆ ಸ್ಥಳಾಂತರಗೊಳ್ಳಲು ನಿರ್ಧರಿಸುತ್ತಾರೆ. ಆಗಿನ್ನೂ 6 ವರ್ಷದ ಬಾಲಕನಾಗಿದ್ದ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಗೆ ಅವಸರವಾಗಿ ಪಟ್ಟಾಭಿಷೇಕ ನಡೆಯುತ್ತದೆ. 1897ರಲ್ಲಿ ರಾಜಕುಮಾರಿ ಜಯಲಕ್ಷಮ್ಮಣ್ಣಿ ಅವರ ಮದುವೆಯ ಸಂದರ್ಭದಲ್ಲಿ ಬೆಂಕಿ ಬಿದ್ದು ಮರದ ಅರಮನೆ ಅಗ್ನಿಗೆ ಆಹುತಿಯಾಗುತ್ತದೆ. ಆಗ ಮೈಸೂರು ಮಹಾರಾಣಿಯವರಾಗಿದ್ದ ಕೆಂಪ ನಂಜಮ್ಮಣ್ಣಿ ವಾಣಿವಿಲಾಸ ಸನ್ನಿದಾನ ಇನ್ನೊಂದು ಅರಮನೆಯನ್ನು ಕಟ್ಟಲು ಬ್ರಿಟಿಷ್ ಇಂಜಿನಿಯರ್ ಹೆನ್ರಿ ಇರ್ವಿನ್ ಅವರಲ್ಲಿ ಮನವಿ ಮಾಡುತ್ತಾರೆ. ಈ ಕಾರ್ಯ ಕೈಗೊಂಡ ಇರ್ವಿನ್ ಅವರು ವಿವಿಧ ರೀತಿಯ ವಾಸ್ತುಕಲೆಗಳನ್ನು ಅಳವಡಿಸಿ ಈಗಿನ ಅಂಬಾವಿಲಾಸ ಅರಮನೆಯನ್ನು 1912ರಲ್ಲಿ ಪೂರ್ಣಗೊಳಿಸಿದ ವಿವರವನ್ನು ತಿಳಿಸಿದರು. ಮೈಸೂರು ಒಡೆಯರ್ ಕಾಲದಲ್ಲಿ ನಿರ್ಮಿಸಿದ ಪಾರಂಪರಿಕ ಕಟ್ಟಡಗಳಿಗೆ ಕಡಕೊಳ ಮತ್ತು ಬನ್ನೂರು ಪ್ಯೂಯರ್ ವೈಟ್ ಸುಣ್ಣ, ಕಟ್ಟಸಾಲೆ ಬೆಲ್ಲದ ಪಾಕ, ಕೋಳಿಮೊಟ್ಟೆ, ನದಿ ಮರಳು, ನದಿ ಶಂಖ, ಮರವಜ್ರ, ಅಂಟುವಾಳ ಮತ್ತು ಅರಳೆಕಾಯಿ ಸಾಮಾಗ್ರಿಗಳನ್ನು ಒಂಟಿ ಎತ್ತಿನ ಗಾಣದಲ್ಲಿ ಹಾಕಿ ಗಾರೆಯನ್ನು ತಯಾರಿಸಲಾಗಿದೆ. ಈ ಗಾರೆ ದೋಸೆ ಹಿಟ್ಟಿಗಿಂತ ನೈಸ್ ಆಗಿರಬೇಕು. ಇದಕ್ಕೆ ಬುಗುರಿಕಾಯಿ ಬೆರೆಸಿದರೆ ರೆಡ್ಡಿಸ್ ಕಲರ್ ಬರುತ್ತದೆ. ಈ ಗಾರೆಯನ್ನು ಒಂದು ವಾರ ಕಾಲ ದೊಡ್ಡ ಡಬ್ಬಗಳಲ್ಲಿ ಮುಚ್ಚಿಟ್ಟು, ಗಾರೆಗೆ ಬಳಸಿದ್ದ ಸಾಮಾಗ್ರಿಗಳು ಚೆನ್ನಾಗಿ ಕೊಳೆತು ಹದಕ್ಕೆ ಬಂದ ನಂತರ ಬಳಕೆ ಮಾಡಲಾಗುತ್ತದೆ. ಈಗಲೂ ಪಾರಂಪರಿಕ ಕಟ್ಟಡಗಳಿಗೆ ಗಾರೆ ಮೆತ್ತಲು ಈ ಮಾದರಿಯನ್ನೆ ಅನುಸರಿಸುತ್ತೇವೆ ಎಂದು ತಿಳಿಸಿದರು.

ಇತ್ತೀಚೆಗೆ ಕೇಂದ್ರ ಪುರಾತತ್ವ ಇಲಾಖೆ ಅಜಂತಾ ಮತ್ತು ಎಲ್ಲೋರ ಪಾರಂಪರಿಕ ಕಟ್ಟಡಗಳ ಗಾರೆಯಲ್ಲಿ ಗೆಜ್ಜಲು ಬರುತ್ತಿಲ್ಲ ಏಕೆ ಎಂದು ತಜ್ಞರು ಸಂಶೋಧನೆ ನಡೆಸಿದಾಗ ತಿಳಿದು ಅಂಶವೆಂದರೆ, ಗಾರೆಯಲ್ಲಿ ಗಾಂಜಾ ಗಿಡ ಹಾಕಿದ್ದರಿಂದ ಗೆಜ್ಜಲು ಬರದಿರುವ ಅಂಶ ಬೆಳಕಿಗೆ ಬಂದಿದೆ. ಅಲ್ಲದೆ, ಮೈಸೂರಿನ ಪಾರಂಪರಿಕ ಕಟ್ಟಡಗಳಲ್ಲಿ ಮೂರು ರೀತಿಯ ಥಾರಸಿಗಳಿಗೆ ಮದ್ರಾಸ್ ಥಾರಸಿ, ಕಲ್ಕತ್ತ ಥಾರಸಿ, ಜಾಕ್ ಥಾರಸಿಯನ್ನು ಪರಿಚಯಿಸಲಾಗಿದೆ ಎಂದು ತಿಳಿಸಿದರು.

ಲ್ಯಾನ್ಸ್‌ಡೌನ್ ಕಟ್ಟಡ ಬಿದ್ದು ಮಾರ್ಚ್ ತಿಂಗಳಿಗೆ 10 ವರ್ಷ ಕಳೆದಿವೆ. ಆದರೂ ಈ ಕಟ್ಟಡಗಳ ಸಂರಕ್ಷಣೆ ಮಾಡಲು ರಾಜ್ಯ ಸರ್ಕಾರ ಮುಂದಾಗುತ್ತಿಲ್ಲ. ಈ ಕಟ್ಟಡ ಯಾವ ಕಾರಣಕ್ಕೆ ಬಿದ್ದು ಹೋಗಿದೆ ಎಂಬುದನ್ನು ತಜ್ಞರನ್ನು ನೇಮಿಸಿ, ಕಾರಣ ತಿಳಿಯುವ ಪ್ರಯತ್ನ ಇದುವರೆಗೂ ಆಗಿಲ್ಲ. ಹಾಗಾಗಿ ಸಿವಿಲ್ ಇಂಜಿನಿಯರ್‌ಗಳು ಇಂತಹ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ ಬಗ್ಗೆ ಹೆಚ್ಚು ಗಮನಹರಿಸಬೇಕು ಎಂದು ಮನವಿ ಮಾಡಿದರು.

ತಮಿಳುನಾಡಿನ ಖ್ಯಾತ ಇತಿಹಾಸ ತಜ್ಞರೊಬ್ಬರು 51 ಇತಿಹಾಸ ಪುಸ್ತಕವನ್ನು ಸೌತ್ ಇಂಡಿಯಾದ ರಾಜರ ಆಳ್ವಿಕೆ ಬಗ್ಗೆ ಬರೆದಿದ್ದಾರೆ. ಅವರು ಬರೆದಿರುವ ಇತಿಹಾಸ ಪುಸ್ತಕದಲ್ಲಿ ಮೈಸೂರು ಸಂಸ್ಥಾನದ ಬಗ್ಗೆ ಹೆಚ್ಚಿನ ಮಾಹಿತಿ ಸೇರಿಸಿಲ್ಲ. ಮೈಸೂರಿಗರಾದ ನಾವು ಎಚ್ಚರವಹಿಸಬೇಕು ಎಂದು ಮೈಸೂರಿಗರಲ್ಲಿ ಮನವಿ ಮಾಡಿದರು. ಈ ವೇಳೆ ದಿ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನೀಯರ್ಸ್ (ಇಂಡಿಯಾ) ಮೈಸೂರು ಘಟಕದ ಅಧ್ಯಕ್ಷ ಬಿ.ಎಸ್. ಪ್ರಭಾಕರ, ಕಾರ್ಯದರ್ಶಿ ಹೆಚ್.ಎಸ್. ಸುರೇಶ್ ಬಾಬು, ಸಂಚಾಲಕ ಎಂ. ಚಿನ್ನಸ್ವಾಮಿ, ಜಂಟಿ ಕಾರ್ಯದರ್ಶಿ ಆರ್.ದೀಪು ಉಪಸ್ಥಿತರಿದ್ದರು.


Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: mysoorumithra@gmail.com For advertisements: mysoorumithra@gmail.com

ರಾಜ್ಯದಲ್ಲಿ ಆರ್‌ಎಸ್‌ಎಸ್ ಪ್ರಾಯೋಜಿತ ಸರ್ಕಾರ ಬಂದರೆ ಪ್ರತಿಭಟನೆ, ಸಭೆ ಬಂದ್

● ಎಡಚಿಂತಕ ಸಿದ್ದಗೌಡ ಪಾಟೀಲ್ ಆತಂಕ

● ದರೋಡೆ ಕೋರರಿಗಿಂತ ಕಳ್ಳರೇ ಮೇಲಲ್ಲವೇ; ಬಿಜೆಪಿಗಿಂತ ಕಾಂಗ್ರೆಸ್ಸೆ ವಾಸಿ ಎಂಬ ಅರ್ಥ ವಿವರಣೆ

ಮೈಸೂರು, ಫೆ.14(ಜಿಎ)–ರಾಜ್ಯದಲ್ಲಿ ಆರ್‌ಎಸ್‌ಎಸ್ ಪ್ರಾಯೋಜಿತ ಸರ್ಕಾರ ಅಧಿಕಾರಕ್ಕೆ ಬಂದರೆ, ಮುಂದಿನ ದಿನಗಳಲ್ಲಿ ಪ್ರತಿಭಟನೆ, ಸಭೆಗಳನ್ನು ಮಾಡುವುದು ಕಷ್ಟಕರವಾಗಲಿದೆ ಎಂದು ಎಡಚಿಂತಕ ಹಾಗೂ ಸಾಹಿತಿ ಸಿದ್ಧನಗೌಡ ಪಾಟೀಲ್



ಆತಂಕ ವ್ಯಕ್ತಪಡಿಸಿದರು. ಮೈಸೂರಿನ ಬನ್ನಿಮಂಟಪದ ಕುಮಾರ್ಸ್ ದಿ ವೈಟ್ ಹೌಸ್ ಹೋಟೆಲ್ ಸಭಾಂಗಣದಲ್ಲಿ ಬೆಂಗಳೂರು ಸಮಾಜವಾದಿ ವೇದಿಕೆ, ನವದೆಹಲಿಯ ಜನತಾಂತ್ರಿಕ ಸಮಾಜವಾದ ಸಂಘಟನೆ (ಎಡಿಎಸ್), ಮೈಸೂರಿನ ಡಾ.ರಾಮ ಮನೋಹರ ಲೋಹಿಯಾ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಪ್ರೊ.ಮಧು ದಂಡವತೆ ಜನ್ಮ ಶತಮಾನೋತ್ಸವ ಪ್ರಯುಕ್ತ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ ನೇತೃತ್ವದ ಸ್ವತಂತ್ರ ಅಧ್ಯಯನ ತಂಡವು ಕೈಗೊಂಡ ಸಮೀಕ್ಷೆ ಕುರಿತ 'ಮುಕ್ತ ಮತದಾನ–ಸಮರ್ಥ ಸರ್ಕಾರ ; ಜನತಂತ್ರದ ನೈಜ ಹಕ್ಕುದಾರರ ಧ್ವನಿ ಹಿಡಿದಿಡುವ ಡಯಾಗ್ನೋಸ್ಟಿಕ್' ಶೀರ್ಷಿಕೆಯ ವರದಿ ಬಿಡುಗಡೆ ಕಾರ್ಯಕ್ರಮದಲ್ಲಿ ಆಯೋಜಿಸಿದ್ದ 'ಕರ್ನಾಟಕದಲ್ಲಿ ಹೊಸ ರಾಜಕೀಯ ಪ್ರಯೋಗದ ಸಾಧ್ಯತೆ ಮತ್ತು ಪರಿಣಾಮ' ಕುರಿತು ಅವರು ಮಾತನಾಡಿದರು.

1960ರ ಸಂದರ್ಭದಲ್ಲಿ ಆರ್‌ಎಸ್‌ಎಸ್‌ನ ಗೋಲ್ವಾಲ್ಕರ್ 'ಬಂಚ್ ಆಫ್ ಥಾಟ್ಸ್'ನಲ್ಲಿ ಬರೆದುಕೊಂಡಿರುವ ಮೂರು ಅಂಶಗಳನ್ನು ಬಿಜೆಪಿ ದೇಶದಲ್ಲಿ ತರಲು ಮುಂದಾಗಿದೆ. ಅದರಂತೆ ಭಾಷಾವಾರು ರಾಜ್ಯಗಳು ಬೇಕಿಲ್ಲ. ಸಂವಿಧಾನ ಬದಲಾವಣೆ ಮಾಡುವುದು ಹಾಗೂ ಸಂಸ್ಕೃತ ಭಾಷೆಯನ್ನು ರಾಷ್ಟ್ರೀಯ ಭಾಷೆ ಮಾಡುವುದು. ಅಲ್ಲಿಯವರೆಗೂ ಹಿಂದಿ ರಾಷ್ಟ್ರೀಯ ಭಾಷೆಯಾಗಿರಬೇಕು ಎಂಬುದು ಅವರ ಉದ್ದೇಶವಾಗಿತ್ತು. ಆ ಉದ್ದೇಶಗಳನ್ನು ಆರ್‌ಎಸ್‌ಎಸ್ ಪ್ರಾಯೋಜಿತ ಬಿಜೆಪಿ ಸರ್ಕಾರ ಅನುಸರಿಸುತ್ತಿದ್ದು, ಅದರ ಪರಿಣಾಮವಾಗಿಯೇ ಇಂದು ಹಿಂದಿ ಹೇರಿಕೆಯನ್ನು ಕಾಣುತ್ತಿದ್ದೇವೆ ಎಂದರು.

ಸದ್ಯ ದೇಶದಲ್ಲಿ ಬಿಜೆಪಿ ಅಧಿಕಾರದಲ್ಲಿದೆ. ಅದನ್ನು ಮುಂದಿನ ವಿಧಾನಸಭೆ ಮತ್ತು ಲೋಕ ಸಭೆ ಚುನಾವಣೆಯಲ್ಲಿ ತಡೆಯಬೇಕಿದ್ದು, ಇಲ್ಲವಾದರೆ ಮುಂದಿನ ದಿನಗಳಲ್ಲಿ ಆರ್‌ಎಸ್‌ಎಸ್ ಪ್ರಾಯೋಜಿತ ಅಧಿಕಾರವಿರಲಿದೆ. ಈಗ ಬಿಜೆಪಿಯಲ್ಲಿರುವವರು ಜನತಾ ದಳ, ಕಾಂಗ್ರೆಸ್‌ನಿಂದ ಹೋಗಿರುವವರು ಮಾತ್ರ ಇದ್ದಾರೆ. ಮುಂದಿನ ದಿನಗಳಲ್ಲಿ ಆರ್‌ಎಸ್‌ಎಸ್‌ನಿಂದ ತಯಾರಾದ ಅಭ್ಯರ್ಥಿಗಳೇ ಸ್ಪರ್ಧಿಸಲಿದ್ದಾರೆ. ಇದರಿಂದ ಅವರ ಸರ್ಕಾರ ರೂಪುಗೊಂಡರೆ ಕಷ್ಟಕರವಾಗಲಿದೆ. ಈಗಾಗಲೇ ಬೆಂಗಳೂರಿನ ರೈಲ್ವೆ ನಿಲ್ದಾಣದಿಂದ ಫ್ರೀಡಂ ಪಾರ್ಕ್‌ವರೆಗೂ ಮೆರವಣಿಗೆ ಹೋಗಲು ಸಾಧ್ಯವಾಗುತ್ತಿಲ್ಲ. ಮುಂದಿನ ದಿನಗಳಲ್ಲಿ ಈ ರೀತಿ ಸಭೆ, ಪ್ರತಿಭಟನೆ ಮಾಡಲು ಸಾಧ್ಯವಾಗುವುದಿಲ್ಲ. ಆದರಿಂದ ಪರ್ಯಾಯ ರಾಜಕೀಯ ರೂಪುಗೊಳ್ಳುವ ವರೆಗೆ ಹೋರಾಟ ಮಾಡೋಣ ಮತ್ತು ಕಾಂಗ್ರೆಸ್‌ನೊಂದಿಗೆ ಮೈತ್ರಿ ಮಾಡಿಕೊಂಡು ಅವರಿಗೆ ಬೆಂಬಲ ನೀಡೋಣ ಎಂದು ಕರೆ ನೀಡಿದರು.

ಕಾಂಗ್ರೆಸ್ ಮೇಲಿನ ಅಭಿಮಾನದಿಂದ ಅವರನ್ನು ಗೆಲ್ಲಿಸಿ ಎಂದು ಹೇಳುತ್ತಿಲ್ಲ. ದರೋಡೆ ಕೋರರಿಗಿಂತ ಕಳ್ಳರು ಪರವಾಗಿಲ್ಲ. ದರೋಡೆ ಕೋರರು ಮನೆಗೆ ನುಗ್ಗಿ ರಕ್ತಪಾತ ನಡೆಸಿ, ದರೋಡೆ ಮಾಡುತ್ತಾರೆ. ಆದರೆ, ಕಳ್ಳರು ಮನೆಯಲ್ಲಿ ಯಾರು ಇಲ್ಲದ ಸಂದರ್ಭದಲ್ಲಿ ಹಿಂಬಾಗಿಲಿನಿಂದ ಬಂದು ಕಳ್ಳತನ ಮಾಡುತ್ತಾರೆ. ಹಾಗೇ ಕಾಂಗ್ರೆಸ್ ವಿರುದ್ಧ ನಾವು ಪ್ರತಿಭಟನೆ ಮಾಡಿದರೆ, ಅವರು ಹೆದರುತ್ತಾರೆ. ಆದರೆ, ಬಿಜೆಪಿ ಅವರು ಯಾರಿಗೂ ಹೆದರುವುದಿಲ್ಲ. ಅವರ ವಿರುದ್ಧ ಹೋರಾಟ ಮಾಡುವವರನ್ನೆ ಜೈಲಿಗೆ ಕಳುಹಿಸುತ್ತಾರೆ. ಫ್ಯಾಸಿಸ್ಟ್ ಸರ್ಕಾರ ನಿರ್ಮಾಣ ಮಾಡುತ್ತಾರೆ. ಅದರ ಬದಲು ಕಾಂಗ್ರೆಸ್‌ನೊಂದಿಗೆ ಮೈತ್ರಿ ಮಾಡಿಕೊಂಡು ಬಿಜೆಪಿ ಮತ್ತೆ ಬರದಂತೆ ತಡೆಯೋಣ. ಅಕಸ್ಮಾತ್ ಮತ್ತೆ ಬಿಜೆಪಿ ಅಧಿಕಾರಕ್ಕೆ ಬಂದರೆ, ಅವರ ವಿರುದ್ಧ ಜನಾಂದೋಲನ ಮಾಡಲು ರೂಪುರೇಷೆ ಸಿದ್ಧಪಡಿಸೋಣ ಎಂದು ತಿಳಿಸಿದರು.

ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆ ; ಸ್ವತಂತ್ರ ಅಧ್ಯಯನ ತಂಡದಿಂದ ನಡೆಸಿದ ಸಮೀಕ್ಷೆಯಲ್ಲಿ

ಆಡಳಿತ ಪಕ್ಷದ ಬಗ್ಗೆ ಮತದಾರರಲ್ಲಿ ವ್ಯಾಪಕ ನಕಾರಾತ್ಮಕ ಭಾವನೆ

ಸಮೀಕ್ಷೆಯ ವರದಿ ಬಿಡುಗಡೆಗೊಳಿಸಿ ಹಿರಿಯ ಸಾಹಿತಿ ದೇವನೂರ ಮಹಾದೇವರಿಂದ ವಿವರಣೆ



ಮೈಸೂರಿನ ಬನ್ನಿಮಂಟಪದ ಕುಮಾರ್ಸ್ ದಿ ವೈಟ್ ಹೌಸ್ ಹೋಟೆಲ್ ಸಭಾಂಗಣದಲ್ಲಿ ಮಂಗಳವಾರ ಮುಂಬರುವ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ನಡೆಸಿದ ಸಮೀಕ್ಷಾ ವರದಿಯನ್ನು ಹಿರಿಯ ಸಾಹಿತಿ ದೇವನೂರ ಮಹಾದೇವ ಬಿಡುಗಡೆ ಮಾಡಿದರು.

ಮೈಸೂರು,ಫೆ.14(ಪಿಎಂ)– ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆ ಹಿನ್ನೆಲೆಯಲ್ಲಿ ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ ನೇತೃತ್ವದಲ್ಲಿ ಸ್ವತಂತ್ರ ಅಧ್ಯಯನ ತಂಡವು ನಡೆಸಿದ ಸಮೀಕ್ಷೆಯಲ್ಲಿ ಆಡಳಿತ ಪಕ್ಷದ ಬಗ್ಗೆ ಮತದಾರರಲ್ಲಿ ನಕಾರಾತ್ಮಕ ಭಾವನೆ ಹೆಚ್ಚುತ್ತಿರುವುದು ವ್ಯಕ್ತವಾಗಿದೆ. ಆದಾಗ್ಯೂ ಮುಂದಿನ ಚುನಾವಣೆಯಲ್ಲಿ ಹಣ ಮೊದಲಾದ ಆಮಿಷಗಳು ಫಲಿತಾಂಶದ ಮೇಲೆ ಪರಿಣಾಮ ಉಂಟು ಮಾಡುವ ಆತಂಕವಿದೆ ಎಂದು ಹಿರಿಯ ಸಾಹಿತಿ ದೇವನೂರ ಮಹಾದೇವ ಅಭಿಪ್ರಾಯಪಟ್ಟರು.

ಮೈಸೂರಿನ ಬನ್ನಿಮಂಟಪದ ಕುಮಾರ್ಸ್ ದಿ ವೈಟ್ ಹೌಸ್ ಹೋಟೆಲ್ ಸಭಾಂಗಣದಲ್ಲಿ ಬೆಂಗಳೂರು ಸಮಾಜವಾದಿ ವೇದಿಕೆ, ನವದೆಹಲಿಯ ಜನತಾಂತ್ರಿಕ ಸಮಾಜವಾದ ಸಂಘಟನೆ (ಎಡಿಎಸ್), ಮೈಸೂರಿನ ಡಾ.ರಾಮ ಮನೋಹರ ಲೋಹಿಯಾ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಪ್ರೊ.ಮಧು ದಂಡವತೆ ಜನ್ಮ ಶತಮಾನೋತ್ಸವ ಪ್ರಯುಕ್ತ ಮಂಗಳವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ ನೇತೃತ್ವದ ಸ್ವತಂತ್ರ ಅಧ್ಯಯನ ತಂಡವು ಕೈಗೊಂಡ ಸಮೀಕ್ಷೆ ಕುರಿತ 'ಮುಕ್ತ ಮತದಾನ–ಸಮರ್ಥ ಸರ್ಕಾರ ; ಜನತಂತ್ರದ ನೈಜ ಹಕ್ಕುದಾರರ ಧ್ವನಿ ಹಿಡಿದಿಡುವ ಡಯಾಗ್ನೋಸ್ಟಿಕ್' ಶೀರ್ಷಿಕೆಯ ವರದಿ ಬಿಡುಗಡೆಗೊಳಿಸಿ ಅವರು ಮಾತನಾಡಿದರು.

ಆಡಳಿತ ಪಕ್ಷದ ಬಗ್ಗೆ ನಕಾರಾತ್ಮಕ ಭಾವನೆ ಇದ್ದರೂ ಮುಂದಿನ ಚುನಾವಣೆಯಲ್ಲಿ ಹಣ ಮೊದಲಾದ ಆಮಿಷ ಹಾಗೂ ಮಾಧ್ಯಮಗಳ ಸುಳ್ಳು ನಿರೂಪಣೆಗಳು ಫಲಿತಾಂಶದ ಮೇಲೆ ಪರಿಣಾಮ ಬೀರುತ್ತವೆ ಎಂಬ ಆತಂಕವೂ ಮತದಾರರಲ್ಲಿದೆ. ಈ ಆತಂಕ ನನ್ನದೂ ಆಗಿದೆ ಎಂದು ತಿಳಿಸಿದರು.

2022ರ ಆಗಸ್ಟ್ ಮತ್ತು ಸೆಪ್ಟೆಂಬರ್‌ನಲ್ಲಿ ಈ ಅಧ್ಯಯನ ಕೈಗೊಳ್ಳಲಾಗಿದೆ. ಎಲ್ಲಾ ವಯಸ್ಸು, ಶೈಕ್ಷಣಿಕ ಹಿನ್ನೆಲೆಯ ವಿವಿಧ ಜಾತಿ–ಧರ್ಮಗಳ ಗಂಡು–ಹೆಣ್ಣು ಅನುಪಾತದಲ್ಲಿ ರಾಜ್ಯದ 20 ಜಿಲ್ಲೆಗಳಲ್ಲಿ ಅಧ್ಯಯನ ನಡೆಸಲಾಗಿದೆ. ಇಲ್ಲಿ ಕೆಲವು ಆಸಕ್ತಿದಾಯಕ ಅಂಶಗಳೂ ಬೆಳಕಿಗೆ ಬಂದಿವೆ. ಈ ಸಮೀಕ್ಷೆಯಲ್ಲಿ 'ಮಾಧ್ಯಮಗಳು ಜನರನ್ನು ಜಾಗೃತಗೊಳಿಸುವ ಬದಲಿಗೆ ದಿಕ್ಕು ತಪ್ಪಿಸುತ್ತಿವೆ' ಎಂದು ಮುಕ್ಕಾಲು ಪಾಲು ಮತದಾರರು ಅಭಿಪ್ರಾಯಪಟ್ಟಿದ್ದಾರೆ. ಇದು ಮತದಾರರು ಜಾಗೃತಗೊಂಡಿರುವುದನ್ನು ಸೂಚಿಸುತ್ತದೆ ಎಂದರು.

ಮತೀಯ ವಿವಾದದ ಸೃಷ್ಟಿ: ಪ್ರಸ್ತುತ ಸರ್ಕಾರವು ನಿರುದ್ಯೋಗ, ಬೆಲೆ ಏರಿಕೆ, ಭ್ರಷ್ಟಾಚಾರ ನಿಯಂತ್ರಣ ಮಾಡದಿರುವುದು, ಕೋವಿಡ್ ಅನ್ನು ಸಮರ್ಪಕವಾಗಿ ನಿರ್ವಹಿಸದಿರುವ ಬಗ್ಗೆ ಜನರಲ್ಲಿ ಬೇಸರ ಅಧಿಕವಾಗಿದೆ. ಬಲಾತ್ಕಾರದ ಭೂ ಸ್ವಾಧೀನವು ರೈತರ ಆತಂಕ ಹೆಚ್ಚಿಸಿದೆ. ಮುಖ್ಯವಾಗಿ ರಾಜ್ಯದಲ್ಲಿ ಇತ್ತೀಚೆಗೆ ಜರುಗಿದ ಕೋಮು ಗಲಭೆ, ಮತೀಯ ವಿವಾದಗಳು ಸಹಜವಾಗಿ ಹುಟ್ಟಿಲ್ಲವೆಂಬ ಎಚ್ಚರ ಬಹುತೇಕ ಮತದಾರರಲ್ಲಿ ಕಂಡು ಬಂದಿದೆ ಎಂದು ತಿಳಿಸಿದರು.

ನಿಗೂಢ ಮತದಾರರು: ವರದಿಯಲ್ಲಿ ನಿಗೂಢ ಮತದಾರರು ಎಂಬ ಸಂಗತಿ ಆಸಕ್ತಿ ಮೂಡಿಸುತ್ತದೆ. ತಮ್ಮ ಬೆಂಬಲ ನೀಡುವ ಪಕ್ಷದ ಬಗ್ಗೆ ಗುಟ್ಟು ಬಿಟ್ಟುಕೊಡದವರೇ ಈ ನಿಗೂಢ ಮತದಾರರು. ಇದು ಶೇ.23ರಿಂದ 35ರಷ್ಟು ಇದ್ದು, ಮತದಾರರ ನಿಗೂಢತೆ ತುಂಬಾ ಹೆಚ್ಚಿಸಿತು. ನಿಗೂಢತೆ ಹೆಚ್ಚಿದ್ದರೆ ನಮ್ಮ ಸುತ್ತಮುತ್ತ ವಾತಾವರಣ ದುಷ್ಟವಾಗಿದೆ ಅಂತಲೇ ಅರ್ಥ ಎಂದರು.

ಉದಾಹರಣೆಗೆ ಅಲ್ಪಸಂಖ್ಯಾತರ ನಿಗೂಢತೆಗೆ ಭೀತಿ ಕಾರಣವಿರಬಹುದು. ಹಾಗೇ ಮಹಿಳೆ ಮತ್ತು ಹಿರಿಯ ನಾಗರಿಕರಲ್ಲಿ ಹೆಚ್ಚು ನಿಗೂಢತೆ ಇದೆ ಎಂದಾದರೆ ಕೆಂಗಣ್ಣಿಗೆ ಗುರಿಯಾಗದಿರುವ ಅವರ ಎಚ್ಚರಿಕೆ ನಡೆ ಇರಬಹುದು. ಹಾಗೇ ಹೈದರಾಬಾದ್–ಕರ್ನಾಟಕದಲ್ಲೂ ಸಾಕಷ್ಟು ನಿಗೂಢ ಮತದಾರರು ಇದ್ದಾರೆ. ಕಳೆದ ಚುನಾವಣೆಯಲ್ಲಿ ಯಾವುದೋ ಒಂದು ಪಕ್ಷಕ್ಕೆ ಓಟು ಕೊಟ್ಟು ಮುಂದಿನ ಚುನಾವಣೆಯಲ್ಲಿ ಆಯ್ಕೆ ಬದಲಿಸುವ ಕಾರಣ ಇಲ್ಲಿ ಇರಲೂಬಹುದು. ನಿಗೂಢ ಪದ ಒಂದೆ ಆದರೂ ಆ ಪದದೊಳಗಿನ ಅರ್ಥವು ಪರಿಸ್ಥಿತಿ, ಹಿನ್ನೆಲೆಗೆ ತಕ್ಕಂತೆ ಭಿನ್ನವಿರುವ ಸಾಧ್ಯತೆಯೂ ಇದೆ. ಈ ನಿಗೂಢತೆ ಗಂಟು ಬಿಡಿಸಿದರೆ ನಮಗೆ ಹೆಚ್ಚು ತಿಳಿಯಬಹುದು. ಇದಕ್ಕೆ ಪ್ರಶ್ನೋತ್ತರ ಮಾದರಿ ಬದಲಿಗೆ 'ಸನ್ನೆ' ಮಾದರಿ ಬಳಸುವ ಬಗ್ಗೆ ಅವಲೋಕಿಸಬೇಕಿದೆ. ಕಳೆದ ಚುನಾವಣೆಯಲ್ಲಿ ಮತ ನೀಡಿದ ಪಕ್ಷಗಳ ಚಿಹ್ನೆ ತೋರಿಸಿ ಮತದಾರನ ಆಯ್ಕೆಯ ಪಕ್ಷ ತಿಳಿದುಕೊಳ್ಳುವುದಾದರೆ ಈ ಬಾರಿ ಅವರ ಮನಸ್ಸಿನಲ್ಲಿ ಏನಿದೆ ಎಂದು ಅರ್ಥ ಮಾಡಿಕೊಳ್ಳುತ್ತಒಂದು ಬಾಗಿಲು ತೆಗೆಯಲೂಬಹುದು ಎಂದು ತಿಳಿಸಿದರು.

ನವಪಕ್ಷ–ಒಕ್ಕೂಟದತ್ತ ಒಲವು: ನನ್ನ ಆಶಯದ ವಿಷಯವನ್ನೂ ಈ ಅಧ್ಯಯನ ಗುರುತಿಸಿದೆ ಸಮೀಕ್ಷೆಗೆ ಒಳಪಟ್ಟು ಮತದಾರರು ಕಾಂಗ್ರೆಸ್, ಬಿಜೆಪಿ, ಜೆಡಿಎಸ್‌ನಂತಹ ಆಳ್ವಿಕೆ ಮಾಡಿದ ಪಕ್ಷಗಳನ್ನು ಹೊರತುಪಡಿಸಿ, ಇದುವರೆಗೂ ಆಳ್ವಿಕೆ ಮಾಡದ ನವಪಕ್ಷ ಅಥವಾ ಒಕ್ಕೂಟದ (ಮೈತ್ರಿ ಕೂಟ) ಕಡೆಗೆ ಹೆಚ್ಚು ಒಲವು ತೋರಿದ್ದಾರೆ. ಇದು ಮೇಲ್ನೋಟಕ್ಕೆ ಶುಭ ಸೂಚನೆ. ಇವು ಹೇಗೆ ಒಟ್ಟಾಗಿ ಎದುರಿಸುತ್ತವೆ ಎನ್ನುವುದು ಮೇಲೆ ನಿಂತಿದೆ ಎನ್ನುವ ಸೂಚನೆಗಳೂ ಇಲ್ಲಿವೆ ಎಂದರು.

ಸಂಘ ಪರಿವಾರದಂತಹ (ಆರ್‌ಎಸ್‌ಎಸ್) ಗಟ್ಟಿ ಸಾಂಸ್ಥಿಕ ತಳಪಾಯದ ಮೂಲಕ ಬಿಜೆಪಿ 'ಸಾಂಸ್ಥಿಕರಣಗೊಂಡ ಪಕ್ಷ ರಚನೆ' ಹೊಂದಿದೆ ಎಂಬುದು ಆಸಕ್ತಿದಾಯಕ ವಿಚಾರ ಅಧ್ಯಯನಕಾರರ ಈ ಅಭಿಪ್ರಾಯ ನಿಜ ಎನ್ನಿಸುತ್ತದೆ ಮುಂದುವರೆದು ತಳ ಮಟ್ಟದವರೆಗೂ ಬೇರೂರಿರುವ ವಿವಿಧ ಪ್ರಗತಿಪರ ಸಂಘ ಸಂಸ್ಥೆ ಮತ್ತು ಸಂಘಟನೆಗಳ ಜೊತೆಗೆ ಯುವ ಕಾರ್ಯಕರ್ತರ ಪಡೆ ಹೊಸ ರಾಜಕೀಯ ಪ್ರಯೋಗಕ್ಕೆ ಈ ರೀತಿಯ ಸಾಂಸ್ಥಿಕ ರಚನೆಯನ್ನು ಒದಗಿಸಬಹುದು ಎಂದೂ ಹೇಳಲಾಗಿದೆ ಇಂದು ಕರ್ನಾಟಕದ ಮುನ್ನಡೆಯ ಸಮಾಜಮುಖಿ ರಾಜಕೀಯ ಪಕ್ಷಗಳು ಅಲೆ ಎಬ್ಬಿಸುತ್ತಿಲ್ಲ. ಇವುಗಳಿಗೆ ಸಾಂಸ್ಥಿಕ ರಚನೆ ಗಟ್ಟಿಯಾಗಿಯೇ ಇದೆ. ಆದರೆ ಇವುಗಳು ಸಾಂಸ್ಥಿಕ ರಚನೆಯಲ್ಲಿ ರಾಜಕೀಯ ಪ್ರಜ್ಞೆಯ ಕೊರತೆ ಇದೆ. ತನ್ನ ರಾಜಕೀಯ ಪಕ್ಷದ ಗೆಲುವಿನಲ್ಲೇ ತನ್ನ ಅಳಿವು–ಉಳಿವು ಇದೆ ಎಂಬ ಭಾವನೆಯಲ್ಲಿ ಈ ಪಕ್ಷಗಳ ಸಾಂಸ್ಥಿಕ ರಚನೆಗಳು ವರ್ತಿಸುತ್ತಿಲ್ಲ ಎಂದು ಹೇಳಿದರು.

ಹೊಸ ರಂಗಕ್ಕೆ ಸೇರಬಹುದಾದ ಆಮ್ ಆದ್ಮಿ ಪಾರ್ಟಿಗೆ ಸಾಂಸ್ಥಿಕ ರಚನೆ ಇಲ್ಲ. ಆದರೂ ಅದು ಅಲೆ ಎಬ್ಬಿಸುತ್ತಿರುವುದನ್ನು ಕಡೆಗಣಿಸುವಂತಿಲ್ಲ. ಆದರೆ ಆಮ್ ಆದ್ಮಿ ಪಾರ್ಟಿ 'ಒಂಟಿ ಬಡಕಸುಂಟರಗಾಳಿ' ಎಂಬಂತೆ ಯಾರೊಡನೆಯೂ ಕೂಡುತ್ತಿಲ್ಲ. ಸಮಾಜಮುಖಿ, ರಚನಾತ್ಮಕ ಮುನ್ನಡೆಯ ರಾಜಕೀಯ ಪಕ್ಷಗಳ ತಳಮಟ್ಟದ ಸಾಂಸ್ಥಿಕ ರಚನೆಗೆ ರಾಜಕೀಯ ಪ್ರಜ್ಞೆ ಬಂದರೆ ಬಹುಶಃ ಯಾರೂ ಇವರ ಮುಂದೆ ನಿಲ್ಲಲಾರರು. ಈ ಅಭಿಪ್ರಾಯಕ್ಕೆ ನಾನು ಬರಲು ಕಾರಣ ಈ ಅಧ್ಯಯನವೇ ಆಗಿದೆ ಎಂದರು.

ರಾಜಕೀಯ ವಿಮರ್ಶಕ ಸುಧೀಂದ್ರ ಕುಲಕರ್ಣಿ, ನವದೆಹಲಿಯ ಜಾಮಿಯಾ ಮಿಲಿಯಾ ವಿವಿಯ ಪ್ರೊ.ಕೆ.ಗಿರಿ, ಸಮಾಜವಾದಿ ಮುಖಂಡ ಬಿ.ಆರ್.ಪಾಟೀಲ್, ವಿಶ್ರಾಂತ ಕುಲಪತಿ ಡಾ.ಸಬಿಹಾ ಭೂಮಿಗೌಡ, ಸಾಹಿತಿ ಪ್ರೊ.ಕಾಳೇಗೌಡ ನಾಗವಾರ, ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಸಾಮಾಜಿಕ ಕಾರ್ಯಕರ್ತ ಅನೀಸ್ ಪಾಷ, ಸ್ವತಂತ್ರ ಅಧ್ಯಯನ ತಂಡದ ಡಾ.ಟಿ.ಎನ್.ಪ್ರಕಾಶ್ ಕಮ್ಮರಡಿ, ಕುಮಾರ್ಸ್ ದಿ ವೈಟ್ ಹೌಸ್ ಹೋಟೆಲ್ ಮಾಲೀಕ ಕೆ.ಬಿ.ಕುಮಾರ್ ಮತ್ತಿತರರು ಹಾಜರಿದ್ದರು.

ಅಧಿಕಾರ–ಕುರುಡು ಕಾಂಚಾಣ ಕೂಡಿರುವಂತಹ ಕೇಡುಗಾಲದಲ್ಲಿ ಚುನಾವಣೆ ಬಂದಿದೆ

ಮೈಸೂರು,ಫೆ.14(ಪಿಎಂ)– ಅಧಿಕಾರ ಮತ್ತು ಕುರುಡು ಕಾಂಚಾಣ ಎರಡೂ ಕೂಡಿರುವಂತಹ ಕೇಡುಗಾಲದಲ್ಲಿ ಚುನಾವಣೆ ಬರುತ್ತಿದೆ ಎಂದು ಹಿರಿಯ ಸಾಹಿತಿ ದೇವನೂರ ಮಹಾದೇವ ಮಾರ್ಮಿಕವಾಗಿ ನುಡಿದರು.

ಒಂದು ಕಸಿ ಪದ ಈಗ ಚಾಲನೆ ಪಡೆದುಕೊಂಡಿದೆ. ಅದೇ ಮೋದಾನಿ. ಈ ಪದದ ಒಳಹೊಕ್ಕರೆ ಅದು ನಾನಾ ಅರ್ಥ ಹೇಳುತ್ತಿರುತ್ತದೆ. ಮೋದಿ ಮತ್ತು ಅದಾನಿ ಸೇರಿ ಒಂದೇ ಪದ, ಒಂದೇ ಹೆಸರು. ಅಧಿಕಾರ ಮತ್ತು ಕುರುಡು ಕಾಂಚಾಣ ಎರಡೂ ಕೂಡಿ ಒಂದೇ ಆಗಿದ್ದು, ಉಳಿಗಾಲವಿಲ್ಲ, ಇಂತಹ ಕೇಡುಗಾಲದಲ್ಲಿ ಚುನಾವಣೆ ಬಂದಿದೆ ಎಂದು ಹೇಳಿದರು.

ಈಗ ಚುನಾವಣೆ ನಮ್ಮ ಮುಂದಿದೆ. ಹಾಗಾಗಿ ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಷಾ ರಾಜ್ಯದಲ್ಲಿ ಓಡಾಡುತ್ತಿದ್ದಾರೆ. ಹಾಗಾಗಿ ಕರ್ನಾಟಕದ ಮುಖ್ಯಮಂತ್ರಿ ಯಾರೆಂದು ಪ್ರಶ್ನಿಸಿದರೆ ನರೇಂದ್ರ ಮೋದಿ, ರಾಜ್ಯದ ಗೃಹಮಂತ್ರಿ ಯಾರೆಂದರೆ ಅಮಿತ್ ಷಾ ಎನ್ನುವಂತಾಗಿದೆ ಎಂದು ವ್ಯಂಗ್ಯವಾಡಿದರು. ಇಂದು ಫೆ.14, ಪ್ರೇಮಿಗಳ ದಿನಾಚರಣೆ. ಆಳ್ವಿಕೆಯ ಸಂಸಾರ ಮಾಡದ ಯುವ ರಾಜಕೀಯ ಪಕ್ಷಗಳು ಮತದಾರರ ಮುಂದೆ ಮಂಡಿಯೂರಿ ಕೆಂಪು ಗುಲಾಬಿ ಹಿಡಿದು ಆಸೆ ಕಂಗಳಿಂದ ನೋಡುತ್ತಿವೆ ಎಂದು ತಿಳಿಸಿದರು.



ಮೈಸೂರಿನ ಹಿನಕಲ್ ಗ್ರಾಮದ ಅಂಬೇಡ್ಕರ್ ಕಾಲೋನಿಯ ಮುಖಂಡ ಗಣೇಶ್ ಕಾಂಗ್ರೆಸ್ ತೊರೆದು ಶಾಸಕ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಜೆಡಿಎಸ್ ಸೇರ್ಪಡೆಗೊಂಡರು. ಈ ವೇಳೆ ಹಿನಕಲ್ ರಾಜು, ಸ್ವಾಮಿ, ರೇವಣ್ಣ, ಜವರಪ್ಪ, ಈಶ್ವರಪ್ಪ, ಬಾಬು ಬಿರಾದರ್, ಎ.ರಮೇಶ್, ಮಹೇಶ್, ವಾಸು, ವಿಜಯನಗರ ಮಂಜು ಹಾಗೂ ಇತರರು ಉಪಸ್ಥಿತರಿದ್ದರು

ನಿವೇಶನ ಹಂಚಿಕೆಯಲ್ಲಿನ ಗೊಂದಲ ನಿವಾರಣೆಗೆ ಮನವಿ

● ಮುಡಾ ಅದಾಲತ್‌ನಲ್ಲಿ ಅಳಲು ತೋಡಿಕೊಂಡ ಫಲಾನುಭವಿಗಳು ● ಎಷ್ಟೇ ಮನವಿ ಮಾಡಿದರೂ ಅಧಿಕಾರಿಗಳು ಸ್ಪಂದಿಸದ್ದಕ್ಕೆ ಬೇಸರ ● ಪರಿಶೀಲಿಸಿ ಕೂಡಲೇ ವರದಿ ನೀಡಲು ಮುಡಾ ಅಧ್ಯಕ್ಷ ಯಶಸ್ವಿ ಸೋಮಶೇಖರ್ ಅಧಿಕಾರಿಗಳಿಗೆ ಸೂಚನೆ



ಮೈಸೂರು, ಫೆ.14(ಎಸ್‌ಬಿಡಿ)– ಒಂದೇ ನಿವೇಶನವನ್ನು ಇಬ್ಬರಿಗೆ ಹಂಚಿಕೆ ಮಾಡಿ ಗೊಂದಲ ಸೃಷ್ಟಿಸಲಾಗಿದೆ, ಹಕ್ಕುಪತ್ರ, ಖಾತೆ ನೀಡಲು ಅಧಿಕಾರಿಗಳು ವಿಳಂಬ ಮಾಡುತ್ತಿದ್ದಾರೆ. ಹೀಗೆ ಹತ್ತಾರು ಸಮಸ್ಯೆಗಳು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದ ಅದಾಲತ್‌ನಲ್ಲಿ ವ್ಯಕ್ತವಾದವು.

ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಅದಾಲತ್‌ನಲ್ಲಿ ಮೆಲ್ಲಹಳ್ಳಿ ರಾಮಕೃಷ್ಣ ಅವರು ಅರ್ಜಿ ಸಲ್ಲಿಸಿ, ಒಂದೇ ನಿವೇಶನವನ್ನು ಇಬ್ಬರಿಗೆ ಹಂಚಿಕೆ ಮಾಡಿದ್ದು ನನ್ನ ಹಾಗೂ ಮತ್ತೊಬ್ಬರ ಹೆಸರಿನಲ್ಲೂ ದಾಖಲೆ ಇದೆ. ಇದರಿಂದ ತುಂಬಾ ತೊಂದರೆಯಾಗಿದೆ. ಇಬ್ಬರ ದಾಖಲೆಗಳನ್ನು ಪರಿಶೀಲಿಸಿ ಮಂಜೂರಾಗಿರುವ ನಿವೇಶನವನ್ನು ಸರಿಯಾಗಿ ಹಂಚಿಕೆ ಮಾಡಿ ಗೊಂದಲ ಪರಿಹರಿಸುವಂತೆ ಹಲವು ಬಾರಿ ಮನವಿ ಮಾಡಿದ್ದರೂ ಅಧಿಕಾರಿಗಳು ಕ್ರಮ ವಹಿಸಿಲ್ಲ ಎಂದು ಅಲವತ್ತುಕೊಂಡರು. ಇವರ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿದ ಮುಡಾ ಅಧ್ಯಕ್ಷರು, ಕೂಡಲೇ ಇದನ್ನು ವಿಶೇಷ ಪ್ರಕರಣವಾಗಿ ಪರಿಗಣಿಸಿ ಕ್ರಮ ವಹಿಸಬೇಕು. ಸಮರ್ಪಕ ಪರಿಶೀಲನೆ ನಡೆಸಿ ಎಲ್ಲಿ ಲೋಪವಾಗಿದೆ ಎಂದು ಪತ್ತೆಹಚ್ಚಿ ಸಮಸ್ಯೆ ಪರಿಹರಿಸಿ ನಿವೇಶನ ಹಂಚಿಕೆ ಮಾಡಿದ ಬಳಿಕ ವರದಿ ನೀಡಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಖಾತೆ ಮಾಡಿಕೊಡಲು ವಿಳಂಬ ಮಾಡುತ್ತಿದ್ದಾರೆ. ಲೋಕಾಯುಕ್ತರು ಹಾಗೂ ಮುಡಾ ಹಿಂದಿನ ಆಯುಕ್ತರು ಸೂಚನೆ ನೀಡಿದ್ದರೂ ಕ್ರಮ ವಹಿಸುತ್ತಿಲ್ಲ ಎಂದು ಚಾಮುಂಡೇಶ್ವರಿ ರೈಲ್ವೆ ಬಡಾವಣೆ ನಿವಾಸಿ ವೀಣಾ ದೂರಿದರು. ಇದಕ್ಕೆ ಪ್ರತಿಕ್ರಿಯಿಸಿದ ಅಧ್ಯಕ್ಷರು, ಕಾನೂನಾತ್ಮಕ ಸಮಸ್ಯೆಗಳಿಲ್ಲದ ನಿವೇಶಗಳಿಗೆ ಖಾತೆ ವಿಳಂಬ ಮಾಡಬೇಡಿ. ಕಾರಣಗಳಿದ್ದರೆ ಹಿಂಬರಹವನ್ನು ನೀಡಬೇಕು. ಅದನ್ನು ಬಿಟ್ಟು ಅರ್ಜಿದಾರರು ಕಚೇರಿಗೆ ಅಲೆಯುವಂತೆ ಮಾಡಬಾರದು ಎಂದು ಹೇಳಿದರು. ಇದೇ ವೇಳೆ ಕೆಸರೆಯ ನಿವಾಸಿಯೊಬ್ಬರು ಹಕ್ಕುಪತ್ರ ಸಂಬಂಧ ನೀಡಿದ್ದ ಅರ್ಜಿ ಪರಿಶೀಲಿಸಿ, ಈ ಬಗ್ಗೆ ಸೂಕ್ತ ಕ್ರಮ ವಹಿಸಲು ಸೂಚಿಸಿದರು.

ನಿವೇಶನ ದಾಖಲಾತಿ ಸರಿಯಾಗಿ ಇರುವ ಬಗ್ಗೆ ದೃಢೀಕರಣ ಪತ್ರ ನೀಡುವಂತೆ ಕೆ.ಗಿರೀಶ್ ಮನವಿ ಮಾಡಿದರೆ, ಬಿ.ಮಹದೇವ ಎಂಬುವವರು ಹಿರಿಯ ನಾಗರಿಕರ ಕೋಟಾದಡಿ ನಿವೇಶನ ಮಂಜೂರು ಮಾಡುವಂತೆ ಕೋರಿದರು. ಜಯನಗರದ ಎಸ್.ಶಿವಕುಮಾರ್ ನಿವೇಶನ ಕೋರಿ ಪಾವತಿಸಿರುವ ಠೇವಣಿ ಹಣ ವಾಪಸ್ ನೀಡುವಂತೆ ಮೂರು ಬಾರಿ ಅರ್ಜಿ ಸಲ್ಲಿಸಿದ್ದರೂ ಹಿಂತಿರುಗಿಸಿಲ್ಲ ಎಂದು ದೂರಿದರು. ಇದಕ್ಕೆ ಮುಡಾ ಕಾರ್ಯದರ್ಶಿ ಪ್ರತಿಕ್ರಿಯಿಸಿ, ಠೇವಣಿ ಹಣ ಬಿಡುಗಡೆಗೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸುವುದಾಗಿ ಹೇಳಿದರು. ಟೈಟಲ್ ಡೀಡ್‌ಗಾಗಿ ಅರ್ಜಿ ಸಲ್ಲಿಸಿದ್ದರೂ ಕ್ರಮವಹಿಸದ ಕಾರಣ ಆಸ್ತಿ ಮಾರಾಟ ಮಾಡಲು ಸಮಸ್ಯೆಯಾಗಿದ್ದು, ಟೈಟಲ್ ಡೀಡ್ ಕೊಡಿಸುವಂತೆ ಶ್ರೀರಾಂಪುರದ ಶೀಲಾ ಎಸ್.ಗುಪ್ತ ಮನವಿ ಮಾಡಿದರು.

70ಕ್ಕೂ ಹೆಚ್ಚು ಅರ್ಜಿ: ಇಂದು ಮಧ್ಯಾಹ್ನ 3 ಗಂಟೆಯಿಂದ ನಡೆದ ಅದಾಲತ್‌ನಲ್ಲಿ 70ಕ್ಕೂ ಹೆಚ್ಚು ಮಂದಿ ತಮ್ಮ ಸಮಸ್ಯೆ ಪರಿಹಾರಕ್ಕಾಗಿ ಅರ್ಜಿ ಸಲ್ಲಿಸಿದರು. ಅರ್ಜಿ ಸ್ವೀಕರಿಸಿದ ಮುಡಾ ಅಧ್ಯಕ್ಷ ಯಶಸ್ವಿ ಎಸ್.ಸೋಮಶೇಖರ್, ಸುಮಾರು 50 ಅರ್ಜಿಗಳನ್ನು ಸ್ಥಳದಲ್ಲೇ ಇತ್ಯರ್ಥಕ್ಕೆ ಕ್ರಮ ವಹಿಸಿದರು. ಇದೇ ವೇಳೆ ಕ್ರಯಪತ್ರ ಹಾಗೂ ಸಿಆರ್ ನೀಡಲು ವಿಳಂಬ ಅನುಸರಿಸುತ್ತಿರುವ ಬಗ್ಗೆ ಹೆಚ್ಚು ದೂರು ಬಂದಿದ್ದು, ಈ ಬಗ್ಗೆ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಸಭೆಯಲ್ಲಿ ಮುಡಾ ಸದಸ್ಯರಾದ ಎಸ್‌ಬಿಎಂ ಮಂಜು, ಲಕ್ಷ್ಮೀದೇವಿ, ಕೆ.ಮಾದೇಶ್, ಚಿಕ್ಕವೆಂಕಟು, ಜಿ.ಲಿಂಗಯ್ಯ, ಮುಡಾ ಅಧಿಕಾರಿಗಳು ಮತ್ತು ಸಿಬ್ಬಂದಿ ಹಾಜರಿದ್ದರು. ಮುಂದಿನ ಅದಾಲತ್ ಫೆ28 ರಂದು ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ

ರೈತ, ಸೈನಿಕ ದೇವರಿಗೆ ಸಮ: ಹರೀಶ್‌ಗೌಡ



ಮೈಸೂರು, ಫೆ. 14– ದೇಶದಲ್ಲಿ ದೇವರ ನಂತರದಲ್ಲಿ ಪೂಜೆ ಸಲ್ಲಿಸಬೇಕಿರುವುದು ರೈತ ಹಾಗೂ ಸೈನಿಕರಿಗೆ ಎಂದು ಕಾಂಗ್ರೆಸ್ ಮುಖಂಡ ಕೆ. ಹರೀಶ್‌ಗೌಡ ಹೇಳಿದರು.

ಪುಲ್ವಾಮಾ ಹುತಾತ್ಮ ಯೋಧರ ಸ್ಮರಣಾರ್ಥ ಮೈಸೂರು ಗೆಳೆಯರ ಬಳಗದ ವತಿಯಿಂದ ನಗರದ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರ ಉದ್ಯಾನವನದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ವೀರ ಯೋಧರ ಭಾವಚಿತ್ರ ಹಿಡಿದು ಮೇಣದಬತ್ತಿ ಬೆಳಗಿಸುವ ಮೂಲಕ ಕರಾಳ ದಿನ ಆಚರಿಸಲಾಯಿತು.

ನಂತರ ಮಾತನಾಡಿದ ಅವರು, ಪುಲ್ವಾಮಾ ದಾಳಿಯಲ್ಲಿ ನಮ್ಮ ಯೋಧರು ವೀರ ಮರಣ ಹೊಂದಿದ್ದಾರೆ. ಅವರ ಸ್ಮರಣೆ ಭಾರತೀಯರ ಕರ್ತವ್ಯವಾಗಿದ್ದು, ಬಳಗದ ಈ ಕಾರ್ಯ ಶ್ಲಾಘನೀಯ ಎಂದರು. ದೇಶ, ಭಾಷೆಗೆ ಧಕ್ಕೆ ಬಾರದಂತೆ ನೋಡಿಕೊಳ್ಳಬೇಕಿದೆ. ಕೃಷಿಕರ ಶ್ರಮದಿಂದ ಆಹಾರ ಸಿಗುತ್ತಿದೆ. ಯೋಧರು ಬಿಸಿಲು ಚಳಿಗಾಳಿ ಎನ್ನದೇ ದೇಶ ಕಾಯುತ್ತಾರೆ. ಆದ್ದರಿಂದ ರೈತ, ಸೈನಿಕರನ್ನು ಗೌರವಿಸುವುದನ್ನು ನಾವು ಮರೆಯಬಾರದು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಗುರುರಾಜ್, ಸುದರ್ಶನ್, ವಿಜ್ಞೇಶ್ವರ ಭಟ್, ಮಂಜುನಾಥ್, ಸಂತೋಷ್ ಕುಮಾರ್, ಶ್ರೀನಿವಾಸ್, ಲೋಕೇಶ್, ಜಗದೀಶ್, ನವೀನ್, ಪ್ರಶಾಂತ್, ರವಿಚಂದ್ರ ಕಮಲ, ವಿನುತಾ, ಮೀನಾಕ್ಷಿ, ಸರೋಜಾ, ನಾಗರತ್ನ ಮುಂದಾದರು ಉಪಸ್ಥಿತರಿದ್ದರು.

ಫೆ.16, 17ರಂದು ಹೋಮ, ಆಶ್ಲೇಷಾ ಬಲಿ ಪೂಜೆ

ಮೈಸೂರು,ಫೆ.14(ಪಿಎಂ)–ದೇವರಾಜ ಮೊಹಲ್ಲಾದಲ್ಲಿರುವ ಶ್ರೀ ಅಮೃತೇಶ್ವರ ದೇವಸ್ಥಾನದಲ್ಲಿ ಫೆ.16ರಂದು ಬೆಳಗ್ಗೆ 7.30ಕ್ಕೆ ಸರ್ಪ ಸಂಸ್ಕಾರ ಮತ್ತು ಫೆ.17ರಂದು ಬೆಳಗ್ಗೆ 7.30ಕ್ಕೆ ಸರ್ಪ ಸಂಸ್ಕಾರಾಂಗ ಹೋಮ, ಆಶ್ಲೇಷಾ ಬಲಿ ಪೂಜೆ ಏರ್ಪಡಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಮೈ.ಕುಮಾರ್ ಜಾತಕ ವಿಮರ್ಶಕರ ಮೊ.ಸಂ. 98451 83399, 98451 83392 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮುತೂಟ್ ಫಿನ್‌ಕಾರ್ಪ್‌ನಿಂದ ಸಣ್ಣಪುಟ್ಟ ವ್ಯಾಪಾರಿಗಳಿಗೆ 'ವ್ಯಾಪಾರ ಮಿತ್ರ' 25 ಸಾವಿರದಿಂದ ಐದು ಲಕ್ಷ ಹೊಸ ಸಾಲ


ಮೈಸೂರು,ಫೆ.14(ಎಂಟಿವೈ)– ಮುತೂಟ್ ಫಿನ್‌ಕಾರ್ಪ್ ವತಿಯಿಂದ ಸಣ್ಣ ಪುಟ್ಟ ವ್ಯಾಪಾರಿಗಳಿಗಾಗಿ 'ವ್ಯಾಪಾರ ಮಿತ್ರ' ಹೊಸ ಸಾಲ ಯೋಜನೆಯನ್ನು ಫೆ. 15 ರಿಂದ ಆರಂಭಿಸಲಾಗುತ್ತಿದೆ ಎಂದು ಪ್ರಾದೇಶಿಕ ವ್ಯವಸ್ಥಾಪಕ ತಿಮ್ಮೇಶ್ ಪ್ರಭಾಕರ್ ತಿಳಿಸಿದ್ದಾರೆ.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಯೋಜನೆ ಅಡಿಯಲ್ಲಿ 25 ಸಾವಿರದಿಂದ ಐದು ಲಕ್ಷ ರೂ.ವರೆಗೂ ಸಾಲ ಪಡೆಯಬಹುದಾಗಿದೆ. ಬಳಿಕ ಪ್ರತಿದಿನ ನಿಗದಿತ ಹಣವನ್ನು ಸುಮಾರು 104 ಕಂತುಗಳಲ್ಲಿ ಪಾವತಿಸಬಹುದಾಗಿದೆ. ಚಿನ್ನದ ಮೇಲಿನ ಸಾಲದಂತೆ ಈ ಯೋಜನೆ ಇಲ್ಲ. ಬದಲಾಗಿ ಯಾವುದೇ ಅಡಮಾನ ಮಾಡದೇ ಸಾಲ ಪಡೆದು ನಿತ್ಯದ ಕಂತಿನಲ್ಲಿ ತೀರಿಸಬಹುದಾಗಿದೆ. ಹೀಗಾಗಿ ಸಾರ್ವಜನಿಕರು ಪ್ರಯೋಜನ ಪಡೆಯಬೇಕೆಂದು ಮನವಿ ಮಾಡಿದರು., ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಇನ್ನಿತರ ಅಧಿಕಾರಿಗಳಾದ ರಿಕ್ಸನ್ ಸಂಪತ್, ಹರೀಶ್ ಹಾಗೂ ಸಂತೋಷ್ ಹಾಜರಿದ್ದರು.

ಮೈಸೂರು ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ

ಜನ್ಮಜಾತ ಹೃದಯ ದೋಷಕ್ಕೆ ಸಮಗ್ರ ಚಿಕಿತ್ಸೆ ಲಭ್ಯ

ಆಸ್ಪತ್ರೆಯಲ್ಲಿ ಕೈಗೊಂಡ ಯಶಸ್ವಿ ಶಸ್ತ್ರಚಿಕಿತ್ಸೆ ವಿವರಿಸಿದ ಕ್ಲಿನಿಕಲ್ ಡೈರೆಕ್ಟರ್ ಡಾ.ಎಂ.ಎನ್.ರವಿ ಮಾಹಿತಿ



ಮೈಸೂರು,ಫೆ.14(ಪಿಎಂ)–ಜನ್ಮಜಾತ ಹೃದಯ ದೋಷಕ್ಕೆ ಮೈಸೂರಿನ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸಮಗ್ರ ಚಿಕಿತ್ಸೆ ಲಭ್ಯವಿದ್ದು, ಆಸ್ಪತ್ರೆಯಲ್ಲಿ 50ಕ್ಕೂ ಹೆಚ್ಚು ಮಕ್ಕಳಿಗೆ ಯಶಸ್ವಿ ಹೃದಯ ಶಸ್ತ್ರಚಿಕಿತ್ಸೆ ನಡೆಸಲಾಗಿದೆ ಎಂದು ಆಸ್ಪತ್ರೆಯ ಕ್ಲಿನಿಕಲ್ ಡೈರೆಕ್ಟರ್ ಡಾ.ಎಂ.ಎನ್.ರವಿ ತಿಳಿಸಿದರು.

ಮೈಸೂರಿನ ಹುಣಸೂರು ರಸ್ತೆಯ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಜನ್ಮಜಾತ ಹೃದಯ ದೋಷ ಜಾಗೃತಿ ದಿನದ (ಫೆ.14) ಅಂಗವಾಗಿ ಮಂಗಳವಾರ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಜನ್ಮಜಾತ ಹೃದಯ ದೋಷ (Congenital Heart Disease) ಒಂದು ಮಾರಣಾಂತಿಕ ಸ್ಥಿತಿ. ಪ್ರತಿ ವರ್ಷ ಸಾವಿರಾರು ಮಕ್ಕಳನ್ನು ಇದು ಬಲಿ ತೆಗೆದುಕೊಳ್ಳುತ್ತಿದೆ. ನಂಜನಗೂಡು ಮೂಲದ 10 ತಿಂಗಳ ಹೆಣ್ಣು ಮಗುವಿನ ಹೃದಯದಲ್ಲಿ ದೊಡ್ಡ ರಂಧ್ರ (ವೆಂಟ್ರಿಕ್ಯುಲರ್ ಸೆಪ್ಟಲ್ ಡಿಫೆಕ್ಟ್) ಇರುವುದು ಪತ್ತೆಯಾಯಿತು. ಜೊತೆಗೆ ಮಗು ಕೇವಲ 6 ಕೆಜಿ ತೂಕವಿತ್ತು. ನಮ್ಮ ಆಸ್ಪತ್ರೆಯ ವೈದ್ಯರ ತಂಡವು ಇಷ್ಟು ಕಡಿಮೆ ತೂಕದ ಮಗುವಿಗೆ ಯಶಸ್ವಿಯಾಗಿ ಶಸ್ತ್ರಚಿಕಿತ್ಸೆ ನಡೆಸಿದೆ ಎಂದು ಹೇಳಿದರು.

ಮತ್ತೊಂದು ಪ್ರಕರಣದಲ್ಲಿ ಗರ್ಭಿಣಿಯೊಬ್ಬರ ಹೊಟ್ಟೆಯಲ್ಲಿದ್ದ ಮಗುವಿಗೆ ಹೃದಯದ ಬಲಭಾಗದ ಶ್ವಾಸಕೋಶದ ಕವಾಟ ತೀವ್ರ ಕಿರಿದಾಗಿತ್ತು. ಭ್ರೂಣದ ಎಕೋಕಾರ್ಡಿಯೋಗ್ರಾಮ್ ಮೂಲಕ ಗರ್ಭಾವಸ್ಥೆಯಲ್ಲಿ ದೋಷವನ್ನು ಗುರುತಿಸಲಾಯಿತು. ಮಗು ಜನಿಸಿದ 15 ದಿನಗಳ ನಂತರ ತೆರೆದ ಶಸ್ತ್ರಚಿಕಿತ್ಸೆ ನಡೆಸದೆಯೇ ನುರಿತ ವೈದ್ಯರಿಂದ ಬಲೂನ್ ಡೈಲೇಷನ್ ಮೂಲಕ ಕಿರಿದಾದ ಕವಾಟವನ್ನು ಯಶಸ್ವಿಯಾಗಿ ಹಿಗ್ಗಿಸಲಾಯಿತು. ನವಜಾತ ಶಿಶುವಿನಲ್ಲಿ ಇಂತಹ ಕ್ಯಾತಿಟರ್ ಆಧಾರಿತ ಕಾರ್ಯ ವಿಧಾನವನ್ನು ಮೈಸೂರಿನಲ್ಲಿ ಇದೇ ಮೊದಲ ಬಾರಿಗೆ ಮಾಡಲಾಗಿದೆ. ಈ ಹಿಂದೆ ಇದಕ್ಕಾಗಿ ಬೆಂಗಳೂರಿಗೆ ಹೋಗಬೇಕಿತ್ತು ಎಂದು ವಿವರಿಸಿದರು.

ಜನ್ಮಜಾತ ಹೃದಯ ದೋಷ ಪರಿಹಾರಕ್ಕೆ ಸಕಾಲದಲ್ಲಿ ರೋಗನಿರ್ಣಯ ಮಹತ್ವದ ಪಾತ್ರ ನಿರ್ವಹಿಸಲಿದೆ. ಆಸ್ಪತ್ರೆಯಲ್ಲಿ ಮಕ್ಕಳಿಗೆ ಸಮಗ್ರ ಹೃದ್ರೋಗ ಆರೈಕೆ ಚಿಕಿತ್ಸೆ ಲಭ್ಯವಿದ್ದು, ವಿಶೇಷ ಕ್ಲಿನಿಕ್, ತರಬೇತಿ ಪಡೆದ ಮಕ್ಕಳ ಹೃದ್ರೋಗ ತಜ್ಞರು, ಶಸ್ತ್ರಚಿಕಿತ್ಸಕರು ಮತ್ತು ಅರಿವಳಿಕೆ ತಜ್ಞರು ಇದ್ದಾರೆ. ಮೈಸೂರು ಮಾತ್ರವಲ್ಲದೆ, ನೆರೆ ಜಿಲ್ಲೆಗಳು, ಗಡಿ ರಾಜ್ಯಗಳ ಕುಟುಂಬಗಳಿಗೆ ಈ ಸೇವೆಗಳನ್ನು ಒದಗಿಸುವ ಏಕೈಕ ಕೇಂದ್ರವಾಗಿ ನಮ್ಮ ಆಸ್ಪತ್ರೆ ಹೊರಹೊಮ್ಮಿದೆ ಎಂದು ತಿಳಿಸಿದರು.

ಆಸ್ಪತ್ರೆಯ ಪೀಡಿಯಾಟ್ರಿಕ್ ಕಾರ್ಡಿಯಾಕ್ ಸರ್ಜನ್ ಡಾ.ರವಿವರ್ಮ ಪಾಟೀಲ್ ಮಾತನಾಡಿ, ಜನ್ಮಜಾತ ಹೃದಯ ದೋಷದಲ್ಲಿ ಶೇ.50ರಷ್ಟು ರೋಗಿಗಳಿಗೆ ಜೀವನದ ಒಂದು ವರ್ಷದೊಳಗೆ ನಿರ್ದಿಷ್ಟ ಚಿಕಿತ್ಸೆ ಅಗತ್ಯ. ನಮ್ಮ ಆಸ್ಪತ್ರೆಯಲ್ಲಿ ಇದಕ್ಕೆ ಉತ್ತಮ ಚಿಕಿತ್ಸೆ ಇರುವ ಹಿನ್ನೆಲೆಯಲ್ಲಿ ದೂರದ ಬೆಂಗಳೂರು ಮತ್ತು ಇತರೆ ನಗರಗಳಿಗೆ ಪ್ರಯಾಣಿಸುವ ಅನಿವಾರ್ಯ ತಪ್ಪಿದೆ ಎಂದು ಹೇಳಿದರು.

ಆಸ್ಪತ್ರೆಯ ಮಕ್ಕಳ ಹೃದ್ರೋಗ ತಜ್ಞ ಡಾ.ಆನಂದ್ ಲಿಂಗನ್ ಮಾತನಾಡಿ, ಆರಂಭಿಕ ಹಂತದಲ್ಲೇ ನಿಖರವಾದ ರೋಗನಿರ್ಣಯ ಕೈಗೊಂಡು ಸಕಾಲದಲ್ಲಿ ಚಿಕಿತ್ಸೆ ನೀಡಲು ಎಕೋಕಾರ್ಡಿಯೋಗ್ರಾಮ್ ಸಹಕಾರಿ. ಹಾಗಾಗಿ ನಮ್ಮ ಆಸ್ಪತ್ರೆಯಲ್ಲಿ ಪ್ರತಿ ಮಂಗಳವಾರ ವಿಶೇಷ ಉಚಿತ 'ಲಿಟಲ್ ಹಾರ್ಟ್ ಕ್ಲಿನಿಕ್' ಅನ್ನು ನಡೆಸಲಾಗುತ್ತಿದೆ ಎಂದು ತಿಳಿಸಿದರು. ಆಸ್ಪತ್ರೆಯಲ್ಲಿ ಯಶಸ್ವಿ ಚಿಕಿತ್ಸೆ–ಶಸ್ತ್ರಚಿಕಿತ್ಸೆ ಮೂಲಕ ಗುಣಮುಖರಾದ ಮಕ್ಕಳ ಪೋಷಕರು ತಮ್ಮ ಅನಿಸಿಕೆ ಹಂಚಿಕೊಂಡರು. ಇದೇ ವೇಳೆ ಸದರಿ ಮಕ್ಕಳಿಗೆ ಸ್ಕೂಲ್ ಬ್ಯಾಗ್‌ಗಳನ್ನು ಕಾಣಿಕೆಯಾಗಿ ಆಸ್ಪತ್ರೆಯಿಂದ ನೀಡಲಾಯಿತು. ಆಸ್ಪತ್ರೆಯ ಅರವಳಿಕೆ ತಜ್ಞ ಡಾ.ದಿಲೀಪ್ ಸೇರಿದಂತೆ ಮತ್ತಿತರರು ಹಾಜರಿದ್ದರು.

ಜಿಲ್ಲೆಯ ಏಳು ಕ್ಷೇತ್ರಗಳ ಅಭ್ಯರ್ಥಿ ಬದಲಾವಣೆ ಇಲ್ಲ

ಮಂಡ್ಯ, ಕೆ.ಆರ್.ಪೇಟೆ ಅಭ್ಯರ್ಥಿಗಳ ಬದಲಾವಣೆ ಸತ್ಯಕ್ಕೆ ದೂರ: ನಿಖಿಲ್ ಕುಮಾರಸ್ವಾಮಿ ಸ್ಪಷ್ಟನೆ

ಮಂಡ್ಯ, ಫೆ.14– ಜಿಲ್ಲೆಯ ಏಳು ಕ್ಷೇತ್ರಗಳಿಗೂ ಅಭ್ಯರ್ಥಿಗಳ ಹೆಸರನ್ನು ಘೋಷಿಸಿದ್ದು, ಯಾವುದೇ ಕಾರಣಕ್ಕೂ ಬದಲಾವಣೆ ಮಾಡುವುದಿಲ್ಲ ಎಂದು ರಾಜ್ಯ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಸ್ಪಷ್ಟಪಡಿಸಿದರು.



ನಗರದ ಬಂದೀಗೌಡ ಬಡಾವಣೆಯಲ್ಲಿ ಮಂಗಳವಾರ ನೂತನ ಜೆಡಿಎಸ್ ಕಚೇರಿ ಲೋಕಾರ್ಪಣೆಗೊಳಿಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಮಂಡ್ಯ ಹಾಗೂ ಕೆ.ಆರ್.ಪೇಟೆ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿಗಳನ್ನು ಬದಲಾವಣೆ ಮಾಡುತ್ತೇವೆ ಎಂಬ ಊಹಾಪೋಹ ಸತ್ಯಕ್ಕೆ ದೂರವಾಗಿದ್ದು, ಮಂಡ್ಯ ಜಿಲ್ಲೆ ಸೇರಿದಂತೆ ರಾಜ್ಯಾದ್ಯಂತ 93 ಕ್ಷೇತ್ರಗಳಿಗೆ ಘೋಷಣೆ ಮಾಡಿರುವ ಅಭ್ಯರ್ಥಿಗಳ ಪಟ್ಟಿಯೇ ಅಂತಿಮ ಎಂದರು.

ಜೆಡಿಎಸ್ ಕಚೇರಿಗೆ ಕಾಲ ಕೂಡಿ ಬಂದಿರಲಿಲ್ಲ: ಜಿಲ್ಲೆಯಲ್ಲಿ ಜೆಡಿಎಸ್ ಏಳಕ್ಕೆ ಏಳು ಸೀಟು ಗೆದ್ದಿದ್ದರೂ, ಸ್ವಂತ ಜಿಲ್ಲಾ ಕಚೇರಿ ಮಾಡಬೇಕೆಂಬ ಬಯಕೆ ಈಡೇರಿರಲಿಲ್ಲ. ಇದೀಗ ಜೆಡಿಎಸ್ ನೂತನ ಕಚೇರಿ ಲೋಕಾರ್ಪಣೆಗೆ ಕಾಲ ಕೂಡಿ ಬಂದಿದೆ. ಮುಂದಿನ ದಿನಗಳಲ್ಲಿ ಸ್ವಂತ ಜಾಗ ಖರೀದಿ ಮಾಡಿ, ದೊಡ್ಡ ಮಟ್ಟದಲ್ಲಿ ಜೆಡಿಎಸ್ ಜಿಲ್ಲಾ ಕಚೇರಿ ತೆರೆಯಲಾಗುವುದು. ಸ್ವಂತ ಜಾಗದಲ್ಲಿ ಕಚೇರಿ ತೆರೆಯುವವರೆಗೂ ಈಗ ತೆರೆದಿರುವ ಕಚೇರಿ ಶಾಶ್ವತವಾಗಿಯೇ ಇರಲಿದ್ದು, ವಾಸ್ತು ನೋಡಿ ನೂತನ ಕಚೇರಿ ತೆರೆಯಲಾಗಿದೆ ಎಂದರು.

ಚನ್ನಪಟ್ಟಣದಲ್ಲಿಯೇ ಹೆಚ್‌ಡಿಕೆ ಸ್ಪರ್ಧೆ: ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರಿಗೆ ರಾಮನಗರ ಮಾತ್ರವಲ್ಲದೇ ಮಂಡ್ಯ ಸೇರಿದಂತೆ ಹಲವು ಕಡೆ ಸ್ಪರ್ಧೆಗೆ ಒತ್ತಡವಿದೆ. ಅವರು ಎಷ್ಟು ಕ್ಷೇತ್ರಗಳಲ್ಲಿ ಸ್ಪರ್ಧಿಸಲು ಸಾಧ್ಯ. ಚನ್ನಪಟ್ಟಣದಲ್ಲಿ ಮಾತ್ರ ಮುಂದಿನ ಚುನಾವಣೆಯಲ್ಲಿ ಸ್ಪರ್ಧಿಸಲಿದ್ದು, ಕಳೆದ ಚುನಾವಣೆಯಲ್ಲಿ ಚನ್ನಪಟ್ಟಣ ಭಾಗದ ಜನರಿಗೋಸ್ಕರ ರಾಮನಗರ ಸೇರಿದಂತೆ 2 ಕ್ಷೇತ್ರಗಳಲ್ಲಿ ಸ್ಪರ್ಧೆಗೆ ಇಳಿದಿದ್ದರು. ಆದರೆ ಈ ಬಾರಿ ಅಂತಹ ಸನ್ನಿವೇಶವಿಲ್ಲ. ಚನ್ನಪಟ್ಟಣದಲ್ಲಿ ಮಾತ್ರ ಸ್ಪರ್ಧಿಸಲಿದ್ದಾರೆ ಎಂದು ಹೇಳಿದರು.

ನಾಗಮಂಗಲ ಜನತೆ ನಮ್ಮ ಕೈ ಬಿಡಲ್ಲ: ನಾಗಮಂಗಲ ಜೆಡಿಎಸ್‌ನಲ್ಲಿ ಬಂಡಾಯ ಹೆಚ್ಚಾಗಿರುವ ಬಗ್ಗೆ ಪ್ರತಿಕ್ರಿಯೆ ನೀಡಿದ ನಿಖಿಲ್, 1999ರ ಚುನಾವಣೆ ಸೇರಿದಂತೆ ಮೊನ್ನೆಯ 2019ರ ಲೋಕಸಭಾ ಚುನಾವಣೆಯಲ್ಲಿ ನಾಗಮಂಗಲ ಕ್ಷೇತ್ರದ ಜನ ನಮ್ಮ ಕೈ ಹಿಡಿದಿದ್ದಾರೆ. ನಾವು ಅಲ್ಲಿನ ಜನರ ಆಶೋತ್ತರಗಳನ್ನು ಈಡೇರಿಸಿದ್ದು, ಮುಂದಿನ ಚುನಾವಣೆಯಲ್ಲೂ ಸಹ ನಮ್ಮ ಅಭ್ಯರ್ಥಿ ಸುರೇಶ್‌ಗೌಡ ಗೆಲ್ಲಲಿದ್ದಾರೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಮಂಜು ಅಭ್ಯರ್ಥಿಯಾಗಲು ದೇವರಾಜು ಒಪ್ಪಿದ್ದರು: ಕೆ.ಆರ್.ಪೇಟೆಯಲ್ಲಿ ಬಂಡಾಯವೆದ್ದಿರುವ 2019ರ ಉಪಚುನಾವಣೆ ಬಂಡಾಯ ಅಭ್ಯರ್ಥಿ ಬಿ.ಎಲ್.ದೇವರಾಜು ಬಗ್ಗೆ ಪ್ರತಿಕ್ರಿಯಿಸಿದ ನಿಖಿಲ್, ಉಪಚುನಾವಣೆ ಸಮಯದಲ್ಲೇ ದೇವರಾಜು ಅವರಿಗೆ ಟಿಕೆಟ್ ಕೊಡಬೇಡಿ ಎಂದು ಮಂಜು ಬೆಂಬಲಿಗರು ಪಟ್ಟು ಹಿಡಿದಿದ್ದರು. ಆದರೆ ಮಾಜಿ ಸಚಿವ ರೇವಣ್ಣ ಒತ್ತಡಕ್ಕೆ ಮಣಿದು ಕುಮಾರಸ್ವಾಮಿ ಟಿಕೆಟ್ ನೀಡಿದ್ದರು. ಆ ಸಮಯದಲ್ಲಿ 2023ರ ಚುನಾವಣೆಗೆ ಮಂಜುಗೆ ಟಿಕೆಟ್ ಬಿಟ್ಟುಕೊಡಲು ದೇವರಾಜು ಒಪ್ಪಿಗೆ ಸೂಚಿಸಿ, ಇದೀಗ ಮಂಜು ಬದಲಿಗೆ ಮತ್ತೆ ನನಗೆ ಟಿಕೆಟ್ ಕೊಡಿ ಎನ್ನುತ್ತಿದ್ದಾರೆ. ಇದು ಸಮಂಜಸವಲ್ಲ ಎಂದರು.

ಸುಮಲತಾ ಬಗ್ಗೆ ಪ್ರತಿಕ್ರಿಯೆ ನೀಡಲ್ಲ: ಕಳೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್, ಬಿಜೆಪಿ, ರೈತ ಸಂಘದ ಒಳಸಂಚಿನಿಂದ ನಾನು ಸೋತಿದ್ದೇನೆ. ಆದರೆ ಜನರ ಮನಸ್ಸಿನಲ್ಲಿ ಸೋತಿಲ್ಲ. ರಾಮನಗರ ಜನರ ಒತ್ತಾಯದ ಮೇರೆಗೆ ನಾನು ರಾಮನಗರದಿಂದ ಸ್ಪರ್ಧಿಸುತ್ತಿದ್ದು, ಮಂಡ್ಯ ಜನರ ಬಗ್ಗೆ ಅಪಾರ ಪ್ರೀತಿ ಅಭಿಮಾನ ಇದೆ. ಪಕ್ಷದ ಆಣತಿಯಂತೆ ರಾಮನಗರದತ್ತ ತೆರಳುತ್ತಿದ್ದು, ಒಂದು ವೇಳೆ ಪಕ್ಷ ಅಲ್ಲೂ ಸ್ಪರ್ಧಿಸಬೇಡ ಎಂದರೆ ಆ ನಿರ್ಧಾರಕ್ಕೆ ನಾನು ಬದ್ಧ. ಹಾಗೆಯೇ ಕ್ಷೇತ್ರದ ಸಂಸದರು ನನ್ನ ವಿರುದ್ಧ ಮಾತನಾಡುತ್ತಿದ್ದು, ಅವರ ಹೇಳಿಕೆಗಳಿಗೆ ಪ್ರತಿಕ್ರಿಯೆ ನೀಡಲ್ಲ ಎಂದರು.

ರಮ್ಯಾ ನನ್ನ ವಿರುದ್ಧ ಸ್ಪರ್ಧಿಸಲ್ಲ: ಮಾಜಿ ಸಂಸದೆ ರಮ್ಯಾ ಹಾಗೂ ನಾನು ಉತ್ತಮ ಸ್ನೇಹಿತರು. ಸಿನಿಮಾ ಕ್ಷೇತ್ರದಲ್ಲಿ ನನ್ನ ಅವರ ನಡುವೆ ಒಳ್ಳೆಯ ಬಾಂಧವ್ಯವಿದೆ. ಅವರು ನನ್ನ ಹಾಗೂ ನನ್ನ ತಂದೆ ವಿರುದ್ಧ ಸ್ಪರ್ಧೆ ಮಾಡಲ್ಲ. ರಮ್ಯಾ ಚನ್ನಪಟ್ಟಣ ಅಥವಾ ರಾಮನಗರದಿಂದ ಸ್ಪರ್ಧೆ ಮಾಡುತ್ತಾರೆ ಎನ್ನುವುದು ಕೇವಲ ಮಾಧ್ಯಮ ಸೃಷ್ಟಿ ಎಂದರು.

ಬಿಜೆಪಿ ಬಿ ಟೀಂ ಕಾಂಗ್ರೆಸ್: ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಬಿ ಟೀಂ ಜೆಡಿಎಸ್ ಎಂದು ಬಿಂಬಿಸಿದ್ದರು. ಆದರೆ ಹೆಚ್‌ಡಿಕೆ ಸರ್ಕಾರ ಬೀಳಿಸಬೇಕೆಂದು 16 ಮಂದಿ ಶಾಸಕರನ್ನು ಬಿಜೆಪಿಗೆ ಕಳುಹಿಸಿದ್ದು, ಇದೇ ಕಾಂಗ್ರೆಸ್ಸಿಗರು. ಬಿಜೆಪಿ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ಪರೋಕ್ಷವಾಗಿ ಇದೇ ಕಾಂಗ್ರೆಸ್ ಕಾರಣವಾಗಿದ್ದು, ಬಿಜೆಪಿ ಬಿ ಟೀಂ ಕಾಂಗ್ರೆಸ್ ಎಂದು ಲೇವಡಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಮನ್‌ಮುಲ್ ಅಧ್ಯಕ್ಷ ಬಿ.ಆರ್.ರಾಮಚಂದ್ರು, ವಿಧಾನ ಪರಿಷತ್ ಮಾಜಿ ಸದಸ್ಯ ಎನ್.ಅಪ್ಪಾಜಿಗೌಡ, ಜಿಲ್ಲಾಧ್ಯಕ್ಷ ಡಿ.ರಮೇಶ್, ಕೆ.ಆರ್.ಪೇಟೆ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಹೆಚ್.ಟಿ.ಮಂಜು, ಪಿಇಟಿ ಅಧ್ಯಕ್ಷ ಕೆ.ಎಸ್.ವಿಜಯಾನಂದ, ಕೆಎಂಎಫ್ ನಿರ್ದೇಶಕ ವಿಶ್ವನಾಥ್, ಜೆಡಿಎಸ್ ಯುವ ಘಟಕದ ಜಿಲ್ಲಾಧ್ಯಕ್ಷ ಕಂಸಾಗರ ರವಿ, ಜಿಪಂ ಮಾಜಿ ಸದಸ್ಯ ಯೋಗೇಶ್ ಇದ್ದರು.

ತಗ್ಗಹಳ್ಳಿ ವೆಂಕಟೇಶ್ ಮನವೊಲಿಸಲು ಹೆಚ್‌ಡಿಕೆ ಯತ್ನಿಸಿದ್ದರು

ಶ್ರೀರಂಗಪಟ್ಟಣದ ಹಿರಿಯ ಜೆಡಿಎಸ್ ಮುಖಂಡ ತಗ್ಗಹಳ್ಳಿ ವೆಂಕಟೇಶ್ ಮನವೊಲಿಕೆಗೆ ಮಾಜಿ ಸಿಎಂ ಕುಮಾರಸ್ವಾಮಿ ಈ ಹಿಂದೆಯೇ ಪ್ರಯತ್ನ ಮಾಡಿದ್ದರು. ಆದರೆ ಅವರು ಒಪ್ಪಲಿಲ್ಲ. ಮಂಡ್ಯ ಜಿಲ್ಲೆ ಜೆಡಿಎಸ್‌ನ ಭದ್ರಕೋಟೆಯಾಗಿವುದರಿಂದ ಪ್ರತಿಯೊಬ್ಬರಿಗೂ ಅಧಿಕಾರ ಬೇಕು. ಶಾಸಕರಾಗಬೇಕೆಂಬ ಹಂಬಲವಿದೆ. ಆದರೆ ತಗ್ಗಹಳ್ಳಿ ವೆಂಕಟೇಶ್ ಅವರಿಗೆ ಬೇರೆ ರೀತಿ ಅವಕಾಶ ಮಾಡಿಕೊಡಬಹುದಿತ್ತು. ದುಡುಕಿನ ನಿರ್ಧಾರ ಕೈಗೊಂಡಿದ್ದಾರೆ. ಇದರಿಂದ ಜೆಡಿಎಸ್‌ಗೆ ಯಾವುದೇ ಸಮಸ್ಯೆಯಾಗುವುದಿಲ್ಲ ಎಂದರು.

ಬೆಸ್ಕಾಂ ಉದ್ಯೋಗಿ ಆತ್ಮಹತ್ಯೆ

ಮಂಡ್ಯ, ಫೆ.14– ಬೆಸ್ಕಾಂ ಪ್ರಥಮ ದರ್ಜೆ ಸಹಾಯಕ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ನಗರದ ಕ್ರಿಶ್ಚಿಯನ್ ಕಾಲೋನಿ 6ನೇ ಕ್ರಾಸ್‌ನಲ್ಲಿ ಸೋಮವಾರ ಮಧ್ಯರಾತ್ರಿ ನಡೆದಿದೆ.

ಮೂಲತಃ ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲೂಕಿನ ಸಿಂಗನಲ್ಲೂರು ಗ್ರಾಮದ ನಿವೃತ್ತ ಪ್ರಾಧ್ಯಾಪಕ ಪ್ರೊ.ಸುಂದರ್ ಅವರ ಪುತ್ರ ದೀಪಕ್(32) ಆತ್ಮಹತ್ಯೆ ಮಾಡಿಕೊಂಡವರು. ಕಳೆದ 2 ವರ್ಷಗಳ ಹಿಂದೆ ತಿ.ನರಸೀಪುರ ತಾಲೂಕಿನ ಮಂಡ್ಯ ಚೆಸ್ಕಾಂನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಪ್ರಿಯಾ ಎಂಬಾಕೆಯೊಂದಿಗೆ ದೀಪಕ್ ವಿವಾಹ ನಡೆದಿತ್ತು. ನಂತರ ದಂಪತಿ ಮಂಡ್ಯದಲ್ಲಿ ಮನೆ ಮಾಡಿಕೊಂಡು ವಾಸವಿದ್ದರು.

ದೀಪಕ್ ಚನ್ನಪಟ್ಟಣ ಬೆಸ್ಕಾಂನಲ್ಲಿ ಪ್ರಥಮ ದರ್ಜೆ ಸಹಾಯಕನಾಗಿ ಕೆಲಸ ಮಾಡುತ್ತಿದ್ದು, ಆತನಿಗೆ ಮಂಡ್ಯದ ಚೆಸ್ಕಾಂ ಕಚೇರಿಗೆ ವರ್ಗಾವಣೆಯಾಗಿತ್ತು ದಂಪತಿಗಳಿಗೆ ಒಂದು ವರ್ಷದ ಗಂಡು ಮಗುವಿದ್ದು, ಮಗುವನ್ನು ಪ್ರಿಯಾ ಅವರ ತಂದೆ ತಾಯಿ ನೋಡಿಕೊಳ್ಳುತ್ತಿದ್ದರು. ನಿನ್ನೆ ರಾತ್ರಿ ಪತಿ, ಪತ್ನಿ ಊಟ ಮಾಡಿ ಮಲಗಿದ್ದು, ಆದರೆ ಪತ್ನಿ ಸಂಪೂರ್ಣವಾಗಿ ನಿದ್ದೆಗೆ ಜಾರಿದ್ದ ಸಂದರ್ಭ ಮಗುವಿನ ತೊಟ್ಟಿಲಿಗೆ ಹಾಕಿದ್ದ ಹಗ್ಗಕ್ಕೆ ನೇಣು ಬಿಗಿದುಕೊಂಡು ದೀಪಕ್ ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

ಡೆತ್‌ನೋಟ್ ಪತ್ತೆ: ದೀಪಕ್ ಡೆತ್ ನೋಟ್ ಬರೆದು ಆತ್ಮಹತ್ಯೆಗೆ ಶರಣಾಗಿದ್ದಾರೆ. ಅದರಲ್ಲಿ ಕೌಟುಂಬಿಕ ಕಲಹ ಹಾಗೂ ಪತ್ನಿ ಮಾನಸಿಕ ಕಿರುಕುಳದ ಬಗ್ಗೆ ತಿಳಿಸಿದ್ದಾರೆ. ಆತ್ಮಹತ್ಯೆಗೂ ಮುನ್ನ ದೂರವಾಣಿಯಲ್ಲಿ ತಮ್ಮ ಚಿಕ್ಕಪ್ಪನ ಜತೆ ಮಾತನಾಡಿದ್ದು ಆ ನಂತರ ಚಿಕ್ಕಪ್ಪ ಮತ್ತೆ ದೂರವಾಣಿ ಕರೆ ಮಾಡಿದಾಗ ಸ್ವೀಕರಿಸಿಲ್ಲ. ಮೃತ ದೇಹವನ್ನು ಶವಾಗಾರಕ್ಕೆ ರವಾನಿಸಲಾಗಿದೆ. ಸ್ಥಳಕ್ಕೆ ಪಶ್ಚಿಮ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ, ದೂರು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

ಬೈಕ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ: ಸವಾರ ಸಾವು

ಪಾಂಡವಪುರ, ಫೆ.14– ಬೈಕ್‌ಗೆ ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ಸವಾರ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಜಕ್ಕನಹಳ್ಳಿ ಸರ್ಕಲ್‌ನಲ್ಲಿ ನಡೆದಿದೆ.



ತಾಲೂಕಿನ ಕದಲಗೆರೆ ಗ್ರಾಮದ ನಿವಾಸಿ ಕೆ.ಜೆ.ಭರತ್(26) ಸಾವನ್ನಪ್ಪಿದವರಾಗಿದ್ದು, ತೀವ್ರ ಗಾಯಗೊಂಡಿರುವ ಅದೇ ಗ್ರಾಮದ ನಾಗೇಶ್ ಅವರನ್ನು ಚಿಕಿತ್ಸೆಗಾಗಿ ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಮೈಸೂರಿನಿಂದ ತಿಪಟೂರು ಕಡೆಗೆ ತೆರಳುತ್ತಿದ್ದ ಸಾರಿಗೆ ಬಸ್ ತಾಲೂಕಿನ ಜಕ್ಕನಹಳ್ಳಿ ಸರ್ಕಲ್‌ನಲ್ಲಿ ಕದಲಗೆರೆ ಕಡೆಯಿಂದ ಬಂದ ಬೈಕ್‌ಗೆ ಡಿಕ್ಕಿ ಹೊಡೆದ ಪರಿಣಾಮ ಭರತ್ ಸ್ಥಳದಲ್ಲೇ ಸಾವನ್ನಪ್ಪಿದ್ದಾನೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಸಿಪಿಐ ಲವಕುಮಾರ್ ಪರಿಶೀಲನೆ ನಡೆಸಿದರು. ಈ ಸಂಬಂಧ ಮೇಲುಕೋಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಉಸ್ತುವಾರಿ ನಿಭಾಯಿಸಲು ಹಲವರು ಸಮರ್ಥರಿದ್ದಾರೆ

ಮಂಡ್ಯ, ಫೆ.14– ಜಿಲ್ಲೆ ಬಗ್ಗೆ ಪ್ರೀತಿ ಹಾಗೂ ಬಾಂಧವ್ಯ ಎರಡೂ ಇದೆ. ಉಸ್ತುವಾರಿ ನಿಭಾಯಿಸಲು ಬೊಮ್ಮಾಯಿ ಸಂಪುಟದಲ್ಲಿ ಹಲವು ಸಮರ್ಥ ಸಚಿವರಿದ್ದು, ಜಿಲ್ಲೆಯ ಬಗ್ಗೆ ಅಭಿಮಾನವೇ ಬೇರೆ. ಜವಾಬ್ದಾರಿಯಾಗಿ ಆಡಳಿತ ನಿರ್ವಹಿಸುವುದೇ ಬೇರೆ ಎನ್ನುವ ಮೂಲಕ ಪರೋಕ್ಷವಾಗಿ ಮಂಡ್ಯ ಜಿಲ್ಲಾ ಉಸ್ತುವಾರಿ ವಹಿಸಿಕೊಳ್ಳಲು ಉನ್ನತ ಶಿಕ್ಷಣ ಸಚಿವ ಸಿ.ಎನ್.ಅಶ್ವತ್ಥ ನಾರಾಯಣ್ ಹಿಂದೇಟು ಹಾಕಿದ್ದಾರೆ.

ತಾಲೂಕಿನ ಸಾತನೂರಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಉಸ್ತುವಾರಿ ನಿಶ್ಚಯ ಮಾಡುವುದು ಮುಖ್ಯಮಂತ್ರಿಗಳು. ಈ ವಿಚಾರದಲ್ಲಿ ಹೆಚ್ಚಿನ ಮಾಹಿತಿ ಇಲ್ಲ. ಜಿಲ್ಲೆ ವಿಚಾರದಲ್ಲಿ ಪಕ್ಷ ಸಂಘಟನೆ ಜವಾಬ್ದಾರಿಯನ್ನಷ್ಟೇ ನಾನು ವಹಿಸಿಕೊಂಡಿದ್ದು, ಉಸ್ತುವಾರಿ ಕೇಳುವುದು ಅಥವಾ ಬೇಡ ಎನ್ನುವುದು ನನಗೆ ಸಂಬಂಧಿಸಿದ್ದಲ್ಲ. ಅದು ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟಿದ್ದು ಎಂದು ಸ್ಪಷ್ಟಪಡಿಸಿದರು.

ಸದ್ಯ ಸದನ ನಡೆಯುತ್ತಿದ್ದು, ಜಿಲ್ಲೆಯ ಉಸ್ತುವಾರಿ ಸಿಎಂ ಬಳಿಯೇ ಇರುತ್ತದೆ. ನನಗೆ ಅವಕಾಶ ಕೊಡುವುದು ಬಿಡುವುದು ಸಿಎಂಗೆ ಬಿಟ್ಟಿದ್ದು, ಅವರು ಈ ಬಗ್ಗೆ ಕೇಳಿದರೆ ನನ್ನ ಅಭಿಪ್ರಾಯ ತಿಳಿಸುವೆ. ರಾಮನಗರ ಜಿಲ್ಲಾ ಉಸ್ತುವಾರಿ ಸಚಿವರಾಗಿ ಸಮರ್ಥವಾಗಿ ಕಾರ್ಯ ನಿರ್ವಹಿಸುತ್ತಿದ್ದೇನೆ. ಚುನಾವಣೆ ಘೋಷಣೆ ಬಳಿಕ ನಮ್ಮಲ್ಲಿ ಪಟ್ಟಿ ಬಿಡುಗಡೆಯಾಗುತ್ತದೆ. ಅಲ್ಲಿಯವರೆಗೂ ಆಕಾಂಕ್ಷಿತರು ಕಾಯಬೇಕೆಂದರು. ಸಚಿವ ನಾರಾಯಣಗೌಡ ನಮ್ಮ ನಾಯಕರು, ಅವರು ಸ್ವಾಭಿಮಾನಿಗಳು, ಪಕ್ಷ ಸಂಘಟನೆ ಮಾಡಿದ್ದಾರೆ. ಜಿಲ್ಲೆಯ ಅಭಿವೃದ್ಧಿ ಮಾಡಿದ್ದಾರೆ. ಜಿಲ್ಲೆಯಲ್ಲಿ ಬಿಜೆಪಿಗೆ ಶಕ್ತಿ ತುಂಬಿದ್ದಾರೆ. ಅವರು ಬಿಜೆಪಿ ಬಿಡುವುದಿಲ್ಲ ಎಂದರು.

ಸಂಸದೆ ಸುಮಲತಾಗೆ ಬಿಜೆಪಿ ಬಾಗಿಲು ತೆರೆದಿದೆ. ಅವರು ಮುಕ್ತವಾಗಿ ಯಾವಾಗಾದರೂ ಪಕ್ಷಕ್ಕೆ ಬರಬಹುದು. ಈ ಹಿಂದೆ ಹಲವು ಬಾರಿ ಅವರು ಪಕ್ಷಕ್ಕೆ ಬರುತ್ತಾರೆ ಎಂಬ ಮಾತುಗಳು ಕೇಳಿ ಬಂದಿವೆ. ನಮ್ಮ ಸಿದ್ಧಾಂತ ಒಪ್ಪಿ ಪಕ್ಷಕ್ಕೆ ಯಾರೇ ಬಂದರೂ ಮುಕ್ತ ಅವಕಾಶವಿದೆ ಎಂದರು.

50 ವರ್ಷ ಮಾಡಲಾಗದ ಕೆಲಸ ಐದೇ ವರ್ಷದಲ್ಲಿ ಮಾಡುವೆ

ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಸವಾಲು

ಮಂಡ್ಯ, ಫೆ.14– ಕಳೆದ 50 ವರ್ಷಗಳಲ್ಲಿ ಮಾಡದ ಅಭಿವೃದ್ಧಿ ಕಾರ್ಯಗಳನ್ನು ಕೇವಲ ಐದೇ ವರ್ಷಗಳಲ್ಲಿ ಮಾಡದಿದ್ದರೆ ನನ್ನ ಹೆಸರನ್ನು ಬದಲಾಯಿಸಿಕೊಳ್ಳುತ್ತೇನೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಸವಾಲು ಹಾಕಿದರು.

ತಾಲೂಕಿನ ಕಂಬದ ನರಸಿಂಹಸ್ವಾಮಿ ದೇವಾಲಯ ಆವರಣದಲ್ಲಿ ನಡೆದ ಕಸಬಾ ಮಹಾಶಕ್ತಿ ಕೇಂದ್ರ ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರು ಮಹಾರಾಜರ ಕಾಲದಲ್ಲಿ ಉತ್ತಮ ಆಡಳಿತ ನೀಡಿ ಅಭಿವೃದ್ಧಿ ಕೆಲಸ ಮಾಡಿದ್ದರು. ವಿಶ್ವವೇ ಎದುರು ನೋಡುವಂತಹ ಆಡಳಿತ, ಕೊಡುಗೆ ಕೊಟ್ಟಿದ್ದರು. ಆ ನಂತರ ಅಧಿಕಾರ ಹಿಡಿದ ಯಾವ ಪಕ್ಷವೂ ಜಿಲ್ಲೆಯಲ್ಲಿ ಅಭಿವೃದ್ಧಿ ಮಾಡಲಿಲ್ಲ ಎಂದು ಪರೋಕ್ಷವಾಗಿ ಜೆಡಿಎಸ್ ವಿರುದ್ಧ ಹರಿಹಾಯ್ದರು.



ಕಳೆದ ಮೂರ್ನಾಲ್ಕು ವರ್ಷಗಳಲ್ಲಿ ರಾಮನಗರ ಹೇಗೆ ಅಭಿವೃದ್ಧಿ ಹೊಂದಿದೆ. ಕೈಗಾರಿಕೆ, ಕೃಷಿ, ಕೌಶಲ್ಯ ಸೇರಿದಂತೆ ಎಲ್ಲಾ ಕ್ಷೇತ್ರಗಳಲ್ಲೂ ಮುಂಚೂಣಿಯಲ್ಲಿದೆ. ನನಗೆ ಮಂತ್ರಿಯಾಗಿ ಕೇವಲ 3 ವರ್ಷದ ಅನುಭವವಿದೆ. ನಿಮಗಿರುವಂತೆ ಹಲವಾರು ವರ್ಷಗಳ ರಾಜಕೀಯ ಅನುಭವ ನನಗಿಲ್ಲದಿದ್ದರೂ, ಯಾವ ರೀತಿ ಅಭಿವೃದ್ಧಿ ಪಥದತ್ತ ದಾಪುಗಾಲು ಇಡುತ್ತಿದೆ ಎಂಬುದನ್ನು ನೋಡಬಹುದಾಗಿದೆ. ಇಂತಹ ಅಭಿವೃದ್ಧಿ ಮಂಡ್ಯದಲ್ಲೂ ಆಗಬೇಕಿದೆ ಎಂದರು.

ನಾವು ಕಣ್ಣೀರು ಹಾಕಲ್ಲ, ಕಥೆಯನ್ನೂ ಹೇಳಲ್ಲ. ಕೆಲಸ ಮಾಡಿ ತೋರಿಸುತ್ತೇವೆ. ಕಳೆದ ಬಾರಿ ಜೆಡಿಎಸ್‌ಗೆ ಕೊಟ್ಟಂತೆ ನಮಗೂ ಒಂದು ಅವಕಾಶ ಕೊಟ್ಟು ನೋಡಿ. ಆಮೇಲೆ ಕೆಲಸ ಮಾಡದಿದ್ದರೆ ನನ್ನ ಹೆಸರನ್ನು ಬದಲಿಸಿಕೊಳ್ಳುತ್ತೇವೆ ಎಂದು ಹೇಳಿದರು.

ಹೆಚ್.ಡಿ.ಕುಮಾರಸ್ವಾಮಿ ಅವರನ್ನು ನಮ್ಮನೆ ಹುಡುಗ ಎಂದು ಜಿಲ್ಲೆಯ ಜನತೆ ಆಶೀರ್ವಾದ ಮಾಡಿದರು. ಆದರೆ ಅವರು ಜಿಲ್ಲೆಗೆ ಏನು ಕೊಟ್ಟಿದ್ದಾರೆ. ನಮ್ಮ ಮನೆಯ ಸೊಸೆ, ಮೊಮ್ಮಗ, ಮಗ ಎಂದು ಕುಟುಂಬದವರೇ ರಾಜಕೀಯವಾಗಿ ಬರಬೇಕೇ, ನಮ್ಮಲ್ಲಿ ಸೋನಿಯಾಗಾಂಧಿ ಕುಟುಂಬವೂ ಇಲ್ಲ, ದೇವೇಗೌಡರ ಕುಟುಂಬವೂ ಇಲ್ಲ. ಇದು ಜನರ ಆಶೋತ್ತರಗಳನ್ನು ಈಡೇರಿಸುವ ಪಕ್ಷ. ಇಂತಹ ಪಕ್ಷ ಅಧಿಕಾರಕ್ಕೆ ಬರಬೇಕು ಎಂದು ಪ್ರತಿಪಾದಿಸಿದರು. ಕಾರ್ಯಕ್ರಮದಲ್ಲಿ ರಾಜ್ಯ ಬಿಜೆಪಿ ಸಂಘಟನಾ ಕಾರ್ಯದರ್ಶಿ ರಾಜೇಶ್, ಮುಖಂಡರಾದ ಅಶೋಕ್ ಜಯರಾಂ, ಡಾ.ಸಿದ್ದರಾಮಯ್ಯ, ವಿದ್ಯಾ ನಾಗೇಂದ್ರ ಡಾ.ಇಂದ್ರೇಶ್, ಎಸ್.ಪಿ.ಸ್ವಾಮಿ, ಭೀಮೇಶ್, ಸುಜಾತ ರಮೇಶ್ ಇತರರಿದ್ದರು.

ಪ್ರಚಾರಕ್ಕೆ ಹಪಾಹಪಿಸುವವರ ನಡುವೆ ಶ್ರೀಧರ್ ಮಾದರಿ ನಡೆ!

ಮೈಸೂರು, ಫೆ.14(ಎಸ್‌ಬಿಡಿ)– ಅಭಿವೃದ್ಧಿ ನೆಪದಲ್ಲಿ ಪ್ರಚಾರದ ಜಿದ್ದಾಜಿದ್ದಿ ನಡೆಸುವ ಜನಪ್ರತಿನಿಧಿಗಳ ನಡುವೆ ಮೈಸೂರು ಮಹಾನಗರ ಪಾಲಿಕೆ ಸದಸ್ಯರೊಬ್ಬರು ಮಾದರಿ ನಡೆ ಮೂಲಕ ಎಲ್ಲರ ಗಮನ ಸೆಳೆದಿದ್ದಾರೆ.



ನಗರದ ವಾರ್ಡ್ ಸಂಖ್ಯೆ 3ರ ಸದಸ್ಯ ಕೆ.ವಿ.ಶ್ರೀಧರ್, ರಸ್ತೆಗಳಿಗೆ ಅಳವಡಿಸುವ ಫಲಕಗಳ ಹೊಸ ಮಾದರಿಯನ್ನು ಪರಿಚಯಿಸಿದ್ದಾರೆ. ಸಹಜವಾಗಿ ರಸ್ತೆಗಳ ತುದಿಯಲ್ಲಿ ಕಬ್ಬಿಣದ ಫಲಕ ಅಳವಡಿಸಲಾಗಿದೆ. ಅದರಲ್ಲಿ ರಸ್ತೆಯ ಹೆಸರು, ಕ್ರಾಸ್ ಸಂಖ್ಯೆ ಜೊತೆಗೆ ಸಂಸದರು, ಶಾಸಕರು ಹಾಗೂ ಸ್ಥಳೀಯ ಕಾರ್ಪೊರೇಟರ್ ಹೆಸರು ನಮೂದಿಸಲಾಗಿರುತ್ತದೆ. ಆದರೆ ಕೆ.ವಿ.ಶ್ರೀಧರ್ ಅವರು ತಮ್ಮ ವಾರ್ಡ್‌ನಲ್ಲಿ ಹೊಸದಾಗಿ ಅಳವಡಿಸಿರುವ ಫಲಕಗಳಲ್ಲಿ ಯಾವ ಜನಪ್ರತಿನಿಧಿಯ ಹೆಸರಿಲ್ಲ ಎನ್ನುವುದೇ ವಿಶೇಷ.

ಬಡಾವಣೆ ಹೆಸರು, ವಾರ್ಡ್ ಸಂಖ್ಯೆ, ಬ್ಲಾಕ್, ರಸ್ತೆ ಹೆಸರು, ಅಡ್ಡರಸ್ತೆ ಸಂಖ್ಯೆ ಜೊತೆಗೆ ಪಾಲಿಕೆ ಕಂಟ್ರೋಲ್ ರೂಂ ದೂರವಾಣಿ ಸಂಖ್ಯೆ ಹಾಗೂ ಕಾರ್ಪೊರೇಟರ್ ಮೊಬೈಲ್ ಸಂಖ್ಯೆಯನ್ನಷ್ಟೇ ನಮೂದಿಸಲಾಗಿದೆ. ಸ್ಥಳೀಯರಿಗೆ ತಮ್ಮ ಕ್ಷೇತ್ರದ ಶಾಸಕರು, ಕಾರ್ಪೊರೇಟರ್ ಯಾರೆಂದು ಸಾಮಾನ್ಯವಾಗಿ ತಿಳಿದಿರುತ್ತದೆ. ಇದು ಹೊರಗಿನಿಂದ ಬಂದು ಹೋಗುವವರಿಗೆ ಅವಶ್ಯವೇನಿಲ್ಲ. ಆದರೆ ಪಾಲಿಕೆ ಹಾಗೂ ಕಾರ್ಪೊರೇಟರ್ ಸಂಪರ್ಕ ಸಂಖ್ಯೆ ಪ್ರಕಟಿಸಿರುವುದು ಅನುಕೂಲಕಾರಿಯಾಗಿದೆ.

ನೋಡಿದಲ್ಲೆಲ್ಲಾ ತಮ್ಮ ಹೆಸರು, ಫೋಟೋ ಕಾಣಿಸಬೇಕೆಂಬ ಜನಪ್ರತಿನಿಧಿಗಳೇ ಹೆಚ್ಚಾಗಿರುವ ಕಾಲಮಾನದಲ್ಲಿ ಕೆ.ವಿ.ಶ್ರೀಧರ್ ಅವರ ಚಿಂತನೆ ಸ್ತುತ್ಯಾರ್ಹವಾಗಿದೆ. ಸಾರ್ವಜನಿಕರ ತೆರಿಗೆ ಹಣದಿಂದಲೇ ರಸ್ತೆಗಳಲ್ಲಿ ಅಳವಡಿಸುವ ಫಲಕಗಳಲ್ಲೂ ಜನಪ್ರತಿನಿಧಿಗಳ ಹೆಸರು ನಮೂದಿಸುವ ಪದ್ಧತಿ ಹಲವು ವರ್ಷಗಳಿಂದ ನಡೆದು ಬಂದಿದೆ. ಆದರೆ ಇದು ಹಳೆಯ ಸಂಪ್ರದಾಯವಂತೂ ಅಲ್ಲ. ಜನಪ್ರತಿನಿಧಿಗಳ ಹೆಸರು ರಾರಾಜಿಸುವ ಅದೆಷ್ಟೋ ಫಲಕಗಳಲ್ಲಿ ವಿಳಾಸ ಮಾಹಿತಿ ತಪ್ಪಾಗಿರುತ್ತದೆ. ಅಂದರೆ ಫಲಕದ ಉದ್ದೇಶವನ್ನು ಬಿಡಿಸಿ ಹೇಳುವ ಅಗತ್ಯವಿಲ್ಲ. ಆದರೆ ಕೆ.ವಿ.ಶ್ರೀಧರ್ ತಮ್ಮ ಹೆಸರೂ ಸೇರಿದಂತೆ ಜನಪ್ರತಿನಿಧಿಗಳ ಪರಿಚಯದ ಬದಲಾಗಿ ಸಾರ್ವಜನಿಕರಿಗೆ ಅಗತ್ಯವಿರುವಷ್ಟು ಮಾಹಿತಿಯನ್ನು ಮಾತ್ರ ಫಲಕದಲ್ಲಿ ಬರೆಸಿದ್ದಾರೆ. ಈ ಬಗ್ಗೆ ವಾರ್ಡ್ ನಿವಾಸಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಪ್ರಚಾರ ಬಯಸದ ಮನೋಭಾವವನ್ನು ಪ್ರಶಂಸಿಸಿದ್ದಾರೆ. ಎಲ್ಲಾ ವಾರ್ಡ್‌ಗಳಲ್ಲೂ ಈ ಮಾದರಿ ಫಲಕಗಳಿರುವುದೇ ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಿದ್ದಾರೆ ಎಂದು ಪ್ರಜ್ಞಾವಂತ ನಾಗರಿಕರೊಬ್ಬರು ತಿಳಿಸಿದರು.

ನಗರ ಪಾಲಿಕೆಯ ನಿಯಂತ್ರಣ ಕೊಠಡಿಯ ಮೂರು ದೂರವಾಣಿ ಸಂಖ್ಯೆಗಳೊಟ್ಟಿಗೆ ಪಾಲಿಕೆ ಸದಸ್ಯ ಶ್ರೀಧರ್ ಅವರ ಮೊಬೈಲ್ ಸಂಖ್ಯೆಯನ್ನು ನಾಮಫಲಕದಲ್ಲಿ ನಮೂದಿಸಲಾಗಿದೆ ಏನಾದರೂ ಸಮಸ್ಯೆಯಾದರೆ ಯಾರಾದರೂ ತಕ್ಷಣ ಫಲಕ ನೋಡಿ ಕಂಟ್ರೋಲ್ ರೂಂಗೆ ಕರೆ ಮಾಡಿ ತಿಳಿಸಬಹುದು. ಒಂದು ವೇಳೆ ಸೂಕ್ತ ಸ್ಪಂದನೆ ಸಿಗದಿದ್ದರೆ 24 ಗಂಟೆ ಯಾವಾಗಲಾದರೂ ಪಾಲಿಕೆ ಸದಸ್ಯರಿಗೆ ಕರೆ ಮಾಡಿ ಸಂಪರ್ಕಿಸಬಹುದು ಎಂದು ಅವರ ಆಪ್ತರೊಬ್ಬರು ಹೇಳಿದರು.

ರಸ್ತೆಯ ಮಾಹಿತಿ ಫಲಕದಲ್ಲಿ ಪಾಲಿಕೆ ಸದಸ್ಯರು, ಸ್ಥಳೀಯ ಶಾಸಕರ ಹೆಸರಿಲ್ಲ ಎಂಬ ಮಾತ್ರಕ್ಕೆ ಅವರನ್ನು ಜನ ಮರೆತು ಬಿಡುವುದಿಲ್ಲ. ನಾವು ಮಾಡುವ ಕೆಲಸದ ಮೂಲಕ ಅವರ ಮನಸ್ಸಿನಲ್ಲಿ ನೀಡಿರುವ ಜಾಗವನ್ನು ಗಟ್ಟಿ ಮಾಡಿಕೊಳ್ಳಬೇಕು. ಹಾಗಾಗಿ ಸಾರ್ವಜನಿಕರಿಗೆ ಅಗತ್ಯವಿರುವ ಮಾಹಿತಿಯನ್ನಷ್ಟೇ ಫಲಕದಲ್ಲಿ ನಮೂದಿಸಲಾಗಿದೆ. ಚುನಾವಣೆಗಳ ಬಳಿಕ ಜನಪ್ರತಿನಿಧಿಗಳ ಹೆಸರು ಬದಲಾಗಬಹುದು. ಆಗ ಫಲಕದ ಮಾಹಿತಿಯನ್ನು ಅಳಿಸಿ ಮತ್ತೆ ಬರೆಸಬೇಕು. ಅದಕ್ಕೂ ಜನರ ತೆರಿಗೆ ಹಣ ನಷ್ಟವಾಗುತ್ತದೆ ಅಲ್ಲವೇ.



-ಕೆ.ವಿ.ಶ್ರೀಧರ್, ಕಾರ್ಪೊರೇಟರ್

ತೊಣಚಿಕೊಪ್ಪಲಲ್ಲಿ ಬಿಸಿಲು ಮಾರಮ್ಮ ಜಾತ್ರಾ ಮಹೋತ್ಸವ

● ಭಕ್ತಿ ಭಾವದ ಪೂಜೆ, ಪುನಸ್ಕಾರ ● ದೇವಿಯ ಉತ್ಸವ ಮೂರ್ತಿ ಮೆರವಣಿಗೆ ● 30 ಸಾವಿರಕ್ಕೂ ಅಧಿಕ ಮಂದಿಗೆ ಅನ್ನಸಂತರ್ಪಣೆ




ಮೈಸೂರು, ಫೆ.14(ಎಂಕೆ)– ಮೈಸೂರಿನ ಟಿ.ಕೆ.ಬಡಾವಣೆಯಲ್ಲಿ ಸಾಂಪ್ರದಾಯಿಕ ಪೂಜಾ ಕೈಂಕರ್ಯದೊಂದಿಗೆ 'ಬಿಸಿಲು ಮಾರಮ್ಮ ಜಾತ್ರಾ ಮಹೋತ್ಸವ' ಸಾವಿರಾರು ಭಕ್ತರ ಸಮ್ಮುಖದಲ್ಲಿ ಅದ್ಧೂರಿಯಾಗಿ ನೆರವೇರಿತು.

ಫೆ.13ರ ಬೆಳಗಿನ ಜಾವ 3.30ರ ಸುಮಾರಿಗೆ ಹೋಮ–ಹವನಗಳಿಂದ ಆರಂಭವಾದ ಜಾತ್ರಾ ಮಹೋತ್ಸವದಲ್ಲಿ ತೊಣಚಿಕೊಪ್ಪಲಿನ ಹುಚ್ಚಮ್ಮತಾಯಿ ದೇವಸ್ಥಾನದಿಂದ ಬಿಸಿಲು ಮಾರಮ್ಮ ದೇವಿಯ ಉತ್ಸವ ಮೂರ್ತಿಯನ್ನು ಮೆರವಣಿಗೆ ಮೂಲಕ ತರಲಾಯಿತು. ನಂತರ ಬೆಳಗ್ಗೆ 11 ಗಂಟೆಯಿಂದ ಸಾವಿರಾರು ಭಕ್ತಾದಿಗಳು ದೇವಿಗೆ ತಂಪು ತಂದು(ತಂಬಿಟ್ಟು ಆರತಿ)ಆರತಿ ಬೆಳಗಿದರಲ್ಲದೆ ಇಷ್ಟಾರ್ಥಗಳು ಕೈಗೂಡುವಂತೆ ಪೂಜೆ ಸಲ್ಲಿಸಿದರು.

ರಾತ್ರಿ 9 ಗಂಟೆಯಿಂದ ಹೂವಿನ ಪಲ್ಲಕ್ಕಿಯಲ್ಲಿ ಪುನರ್ಹ ದೇವಿಯ ಉತ್ಸವ ಮೂರ್ತಿಯನ್ನು ಫೆ.14ರ ಬೆಳಗಿನ ಜಾವ 3.30ರವರೆಗೆ ಟಿ.ಕೆ.ಬಡಾವಣೆಯ ಪ್ರಮುಖ ಬೀದಿಗಳ ಮೂಲಕ ತೊಣಚಿಕೊಪ್ಪಲಿನ ಹುಚ್ಚಮ್ಮತಾಯಿ ದೇವಸ್ಥಾನದವರೆಗೆ ನಡೆಸಲಾಯಿತು. ಮೆರವಣಿಗೆಗೆ ಸಾವಿರಾರು ಭಕ್ತರು ಭಾಗವಹಿಸಿ, ಬಿಸಿಲು ಮಾರಮ್ಮ ತಾಯಿಗೆ ಪ್ರಾರ್ಥನೆ ಸಲ್ಲಿಸಿದರು.

ಅನ್ನ ಸಂತರ್ಪಣೆ: ಮಹಾಶಿವರಾತ್ರಿ ಹಬ್ಬದ ದಿನದಂದು ಟಿ.ಕೆ.ಬಡಾವಣೆಯಲ್ಲಿರುವ ಬಿಸಿಲು ಮಾರಮ್ಮ ದೇವಸ್ಥಾನದ ಆವರಣದಲ್ಲಿ ಸುಮಾರು 30 ಸಾವಿರ ಭಕ್ತರಿಗೆ ಅನ್ನ ಸಂತರ್ಪಣೆ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಜಾತ್ರಾ ಮಹೋತ್ಸವದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕಾಂಗ್ರೆಸ್ ಹಿರಿಯ ಮುಖಂಡ ಕೆ.ಮರೀಗೌಡ, ಕೆಪಿಸಿಸಿ ಒಬಿಸಿ ಘಟಕ ರಾಜ್ಯ ಕಾರ್ಯದರ್ಶಿ ಹರೀಶ್ ಮೊಗಣ್ಣ, ಬೀರೇಶ್ವರ ಟ್ರಸ್ಟ್ ಅಧ್ಯಕ್ಷ ಜವರಪ್ಪ, ಯಜಮಾನ್ ರವಿ, ಕಾಳಪ್ಪ, ಗ್ರಾಪಂ ಸದಸ್ಯ ಸೂರ್ಯ, ಕುಸ್ತಿ ಪೈಲ್ವಾನರಾದ ವಿನೋದ್, ಕುಮಾರ್, ಬೀರೇಶ್, ಗೋಪಿ, ಸಾಗರ್‌ಕಿಚ್ಚ, ರವಿ, ಸಂಜು, ಮಹೇಂದ್ರ, ದೇವಸ್ಥಾನದ ಟ್ರಸ್ಟ್‌ನ ನಿರ್ದೇಶಕರು, ಗ್ರಾಮಸ್ಥರು ಭಾಗವಹಿಸಿದ್ದರು.



ಕೆಂಗಲ್ ಹನುಮಂತಯ್ಯನವರ ಮಾರ್ಗದಲ್ಲಿ ಸಾಗಿದರೆ ರಾಜ್ಯದಲ್ಲಿ ಭಾರೀ ಸುಧಾರಣೆ

ಮೇಯರ್ ಶಿವಕುಮಾರ್ ಅಭಿಮತ

ಮೈಸೂರು,ಫೆ.14(ಪಿಎಂ)– ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರು ಕರ್ನಾಟಕ ಏಕೀಕರಣದ ರೂವಾರಿ. ಅವರ ಹಾಕಿಕೊಟ್ಟ ಮಾರ್ಗದಲ್ಲಿ ಇಂದಿನ ರಾಜಕಾರಣಿಗಳಾದ ನಾವೆಲ್ಲರೂ ಸಾಗಿದರೆ ರಾಜ್ಯ ಸುಧಾರಣೆ ಕಾಣಲಿದೆ ಎಂದು ಮೇಯರ್ ಶಿವಕುಮಾರ್ ಅಭಿಪ್ರಾಯಪಟ್ಟರು.



ಮೈಸೂರಿನ ಅಗ್ರಹಾರ ವೃತ್ತದಲ್ಲಿ ಕರ್ನಾಟಕ ಸೇನಾಪಡೆ ವತಿಯಿಂದ ಮಂಗಳವಾರ ಹಮ್ಮಿಕೊಂಡಿದ್ದ ಮುತ್ಸದ್ದಿ, ಧೀಮಂತ ರಾಜಕಾರಣಿ ಮಾಜಿ ಮುಖ್ಯಮಂತ್ರಿ ಕೆಂಗಲ್ ಹನುಮಂತಯ್ಯನವರ 115ನೇ ಜಯಂತಿಯಲ್ಲಿ ಕೆಂಗಲ್ ಹನುಮಂತಯ್ಯನವರ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಅವರು ಮಾತನಾಡಿದರು.

ಕೆಂಗಲ್ ಹನುಮಂತಯ್ಯನವರು ವಿಧಾನಸೌಧದ ಶಿಲ್ಪಿ. ಮುತ್ಸದ್ದಿ ರಾಜಕಾರಣಿಯಾಗಿ ಅಧಿಕಾರವನ್ನು ಜನರ ಬಳಿಗೆ ತೆಗೆದುಕೊಂಡು ಹೋದವರು. ಸರ್ಕಾರದ ಕೆಲಸ, ದೇವರ ಕೆಲಸ ಎಂದು ನಂಬಿದ್ದವರು. ಅವರು ವಿಧಾನಸೌಧ ನಿರ್ಮಿಸಿ 'ಸರ್ಕಾರಿ ಕೆಲಸ ದೇವರ ಕೆಲಸ' ಎಂದು ನಾಮಫಲಕ ಹಾಕಿದರು. ಇಂತಹ ಮಹನೀಯರ ಜಯಂತಿ ಆಚರಿಸುತ್ತಿರುವುದು ನಿಜಕ್ಕೂ ಶ್ಲಾಘನೀಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಕರ್ನಾಟಕದ ಏಕೀಕರಣ ಕೆಂಗಲ್ ಹನುಮಂತಯ್ಯನವರ ಮಹಾನ್ ಸಾಧನೆ. ಕನ್ನಡ ಭಾಷಿಗರ ಪ್ರದೇಶಗಳನ್ನು ಒಂದೇ ರಾಜ್ಯವಾಗಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದರು. ನಾವೆಲ್ಲರೂ ಅವರ ತತ್ವ–ಸಿದ್ಧಾಂತಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಕರ್ನಾಟಕ ಸೇನಾ ಪಡೆ ಜಿಲ್ಲಾಧ್ಯಕ್ಷ ತೇಜೇಶ್ ಲೋಕೇಶ್‌ಗೌಡ ಮಾತನಾಡಿ, ಅಂದಿನ ಹಳೇ ಮೈಸೂರು ಒಕ್ಕಲಿಗರ ಪ್ರಾಬಲ್ಯ ಹೊಂದಿತ್ತು. ಹಾಗಾಗಿ ಏಕೀಕರಣವಾದರೆ ಒಕ್ಕಲಿಗರ ಪ್ರಾಬಲ್ಯ ಕುಗ್ಗುತ್ತದೆ ಎಂದು ಸಮುದಾಯದ ಎಲ್ಲಾ ಮುಖಂಡರು ವಿರೋಧ ವ್ಯಕ್ತಪಡಿಸಿದ್ದರು. ಇದ್ಯಾವುದಕ್ಕೂ ಮಣಿಯದೇ ಅಖಂಡ ಕರ್ನಾಟಕ ಆಗಲೇಬೇಕೆಂದು ಏಕೀಕರಣ ಬೆಂಬಲಿಸಿ ತಮ್ಮ ಮುಖ್ಯಮಂತ್ರಿ ಪದವಿಯನ್ನೇ ಕಳೆದುಕೊಂಡ ಮಹಾನ್ ನಾಯಕರು ಕೆಂಗಲ್ ಹನುಮಂತಯ್ಯನವರು ಎಂದು ಸ್ಮರಿಸಿದರು.

ಸರ್ಕಾರದಿಂದ ಜಯಂತಿ ಆಚರಿಸಬೇಕು: ಕೆಂಗಲ್ ಹನುಮಂತಯ್ಯನವರು ಭಾರತದಲ್ಲೇ ಎಲ್ಲೂ ಇಲ್ಲದಂತಹ ವಿಶ್ವಪ್ರಸಿದ್ಧ ವಿಧಾನಸೌಧದ ನಿರ್ಮಾತೃಗಳು. ಅವರ ಜಯಂತಿಯನ್ನು ಮುಂದಿನ ವರ್ಷದಿಂದ ಸರ್ಕಾರದ ವತಿಯಿಂದ ಆಚರಿಸಬೇಕೆಂದು ಒತ್ತಾಯಿಸಿದರು.

ಇದೇ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಒಕ್ಕಲಿಗರ ಸಂಘದ ಕಾರ್ಯಾಧ್ಯಕ್ಷ ಸಿ.ಜಿ.ಗಂಗಾಧರ್ ಸಾರ್ವಜನಿಕರಿಗೆ ಸಿಹಿ ವಿತರಿಸಿದರು. ಸುಯೋಗ್ ಆಸ್ಪತ್ರೆ ಸಂಸ್ಥಾಪಕ ಡಾ.ಎಸ್.ಪಿ.ಯೋಗಣ್ಣ, ಸಮಾಜ ಸೇವಕ ಡಾ.ರಘುರಾಂ ವಾಜಪೇಯಿ, ಒಕ್ಕಲಿಗರ ಸಂಘದ ಕಾರ್ಯದರ್ಶಿ ಚೇತನ್, ಮುಖಂಡರಾದ ಸುರೇಶ್ ಗೋಲ್ಡ್, ಡಾ.ಶಾಂತ ರಾಜೇಅರಸ್, ಸಿ.ಹೆಚ್.ಕೃಷ್ಣಯ್ಯ, ಪ್ರಭುಶಂಕರ್, ಗಿರೀಶ್‌ಕುಮಾರ್, ರಾಮಣ್ಣ, ಪ್ರಭಾಕರ, ಮೊಗಣ್ಣಾಚಾರ್, ಯೋಗೀಶ್ ಉಪ್ಪಾರ್, ಪದ್ಮಾ, ಹನುಮಂತಯ್ಯ, ಗಣೇಶ್‌ಪ್ರಸಾದ್, ದಿಲೀಪ್ ಮತ್ತಿತರರು ಹಾಜರಿದ್ದರು.

ಕಡಿಮೆ ಮತದಾನವಾಗುವ ಬೂತ್‌ಗಳಲ್ಲಿ ಹೆಚ್ಚಿನ ಸ್ವೀಪ್ ಚಟುವಟಿಕೆ ಕೈಗೊಳ್ಳಿ

ಅಧಿಕಾರಿಗಳೊಂದಿಗೆ ಮತದಾರರ ಜಾಗೃತಿ ಕುರಿತು ಡಿಸಿ ಚರ್ಚೆ



ಮೈಸೂರು, ಫೆ.14(ಜಿಎ)–ಕಡಿಮೆ ಮತದಾನವಾಗಿರುವ ಬೂತ್‌ಗಳಲ್ಲಿ ಹೆಚ್ಚಿನ ಸ್ವೀಪ್ ಚಟುವಟಿಕೆ(ವ್ಯವಸ್ಥಿತ ಮತದಾರರ ಶಿಕ್ಷಣ ಹಾಗೂ ಚುನಾವಣೆಯಲ್ಲಿ ಪಾಲ್ಗೊಳ್ಳುವಿಕೆ) ಕೈಗೊಳ್ಳುವಂತೆ ಜಿಲ್ಲಾಧಿಕಾರಿಗಳಾದ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು

ಮುಂಬರುವ ವಿಧಾನ ಸಭಾ ಚುನಾವಣೆ ಸಂಬಂಧ ಚುನಾವಣಾ ಪೂರ್ವ ಸಿದ್ಧತೆ ಹಾಗೂ ಸ್ವೀಪ್ ಚಟುವಟಿಕೆಗಳ ಕುರಿತು ತಮ್ಮ ಕಚೇರಿಯಲ್ಲಿ ಮಂಗಳವಾರ ಅಧಿಕಾರಿಗಳ ಸಭೆ ನಡೆಸಿ ಅವರು ಮಾತನಾಡಿದರು.

ಮತದಾರರ ಜಾಗೃತಿ ಕಾರ್ಯಕ್ರಮಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು. ಮತದಾರರ ಅಂತಿಮ ಪಟ್ಟಿ ಪ್ರಕಟವಾಗಿದ್ದು, ಮತದಾರರ ಪಟ್ಟಿಯಲ್ಲಿ ಹೆಸರು ಇದೆಯೇ, ಇಲ್ಲವೇ ಎಂಬುದನ್ನು ಎಲ್ಲರೂ ಖಚಿತಪಡಿಸಿಕೊಳ್ಳಬೇಕು. ಮತದಾನ ಮಾಡುವ ಸ್ಥಳದ ವಿವರ ದೊರೆಯಬೇಕು. ಇದಕ್ಕಾಗಿ ಸುಲಭವಾಗಿ ಸಾರ್ವಜನಿಕರು ತಮ್ಮ ಬೂತ್ ವ್ಯಾಪ್ತಿಯಲ್ಲಿ ಯಾರನ್ನು ಸಂಪರ್ಕಿಸಬೇಕು ಎಂಬುದರ ಮಾಹಿತಿ ನೀಡಿ ಎಂದು ಸೂಚಿಸಿದರು.

ಎಲ್ಲಾ ಇಲಾಖೆಯವರೂ ತಮ್ಮ ವ್ಯಾಪ್ತಿಯಲ್ಲಿ ಯಾವ ರೀತಿ ಸ್ವೀಪ್ (ವ್ಯವಸ್ಥಿತ ಮತದಾರರ ಶಿಕ್ಷಣ ಹಾಗೂ ಚುನಾವಣೆಯಲ್ಲಿ ಪಾಲ್ಗೊಳ್ಳುವಿಕೆ) ಚಟುವಟಿಕೆಗಳನ್ನು ನಡೆಸಬೇಕು ಎಂಬುದರ ಬಗ್ಗೆ ಯೋಜನೆ ಸಿದ್ಧಪಡಿಸಿಕೊಳ್ಳಿ. ಎಲ್ಲಾ ಮತಗಟ್ಟೆಗಳಲ್ಲಿ ವಿದ್ಯುತ್, ಆಸನ ಸೌಲಭ್ಯಗಳು, ಕುಡಿಯುವ ನೀರು ಸೇರಿದಂತೆ ಇತರೆ ಸಿದ್ಧತೆಗಳ ಬಗ್ಗೆ ಪರಿಶೀಲಿಸಬೇಕು ಮತ್ತು ದೈಹಿಕ ನ್ಯೂನತೆಯುಳ್ಳವರಿಗೆ ಮತ್ತು ಮಹಿಳೆಯರು ಹಾಗೂ ಜನರನ್ನು ಆಕರ್ಷಿಸಲು ವಿನೂತನ ಮತಗಟ್ಟೆ ಸ್ಥಾಪನೆಗೆ ಈಗಿನಿಂದಲೇ ಕಾರ್ಯಕ್ರಮ ರೂಪಿಸಿ, ಕಾಲೇಜು ವಿದ್ಯಾರ್ಥಿಗಳು, ಯುವ ಮತದಾರರು, ಮಹಿಳೆಯರು, ಹಿರಿಯ ನಾಗರೀಕರು, ವಿಕಲಚೇತನರು, ಟ್ರಾನ್ಸ್ ಜೆಂಡರ್ ಹೀಗೆ ವಿವಿಧ ಗುಂಪುಗಳಲ್ಲಿ ಮತದಾನದ ಅರಿವು ಮೂಡಿಸಬೇಕು ಎಂದರು.

ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ಮತದಾನ ಕಡಿಮೆಯಾಗಿರುವ ಕಡೆಯಲ್ಲಿ ವಿಶ್ಲೇಷಣೆ ನಡೆಸಿ ಮತದಾನ ಹೆಚ್ಚಿಸಲು ಪ್ರಚಾರ ಫಲಕಗಳು, ಜಾಥಾ, ಜಿಂಗಲ್ ಗಳು ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

'ಜಮ್ಮಾ' ಕುರಿತು ಸಚಿವರ ಹೇಳಿಕೆಗೆ ಕಾಂಗ್ರೆಸ್ ಖಂಡನೆ

ಗುತ್ತಿಗೆ ಆಧಾರದಲ್ಲಿ ಸದರಿ ಭೂಮಿ ನೀಡುವ ಸಚಿವರ ಹೇಳಿಕೆ ನ್ಯಾಯಾಲಯದ ಆದೇಶ ಉಲ್ಲಂಘನೆ: ಕ್ಷಮೆಗೆ ಆಗ್ರಹ



ಮಡಿಕೇರಿ, ಫೆ.14– ಕೊಡಗಿನ ವಿಶಿಷ್ಟ ಭೂ ಹಿಡುವಳಿ 'ಜಮ್ಮಾ' ಖಾಸಗಿ ಆಸ್ತಿಯಾಗಿದ್ದು, ಈ ವಿಷಯದ ಗೊಂದಲಗಳು ರಾಜ್ಯ ಉಚ್ಚ ನ್ಯಾಯಾಲಯದ ತೀರ್ಪಿನೊಂದಿಗೆ ಈಗಾಗಲೇ ಇತ್ಯರ್ಥವಾಗಿದೆ. ಹೀಗಿದ್ದೂ ಜಮ್ಮಾ ಭೂಮಿಯನ್ನು ಗುತ್ತಿಗೆ ಆಧಾರದಲ್ಲಿ ನೀಡುವುದಾಗಿ ಕಂದಾಯ ಸಚಿವ ಆರ್.ಅಶೋಕ್ ನೀಡಿರುವ ಹೇಳಿಕೆಗೆ ರಾಜ್ಯ ಸರ್ಕಾರ ಸ್ಪಷ್ಟನೆ ನೀಡಬೇಕೆಂದು ಕೆಪಿಸಿಸಿ ಕಾನೂನು ಘಟಕದ ರಾಜ್ಯಾಧ್ಯಕ್ಷ ಅಜ್ಜಿಕುಟ್ಟಿರ .ಎಸ್. ಪೊನ್ನಣ್ಣ ಆಗ್ರಹಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನ್ಯಾಯಾಲಯದ ತೀರ್ಪಿನ ವಿರುದ್ಧವಾಗಿ ಕಂದಾಯ ಸಚಿವರು ಹೇಳಿಕೆ ನೀಡಿ, ಜಿಲ್ಲೆಯ ಜಮ್ಮಾ ಜಾಗ ಹೊಂದಿರುವ ಹಿಡುವಳಿದಾರರನ್ನು ಗೊಂದಲ ಮತ್ತು ಆತಂಕಕ್ಕೆ ತಳ್ಳಿದ್ದಾರೆ. ವಿಷಯಕ್ಕೆ ಸಂಬಂಧಿಸಿದಂತೆ ಕಂದಾಯ ಸಚಿವರು ಜಿಲ್ಲೆಯ ಜನರ 'ಕ್ಷಮೆ' ಯಾಚಿಸಬೇಕೆಂದು ಒತ್ತಾಯಿಸಿದರು.

ರಾಜಕೀಯ ಪ್ರೇರಿತ: 'ಜಮ್ಮಾ' ಜಾಗವನ್ನು ಗುತ್ತಿಗೆ ಆಧಾರದಲ್ಲಿ ನೀಡುವುದಾಗಿ ಕಂದಾಯ ಸಚಿವರು ನೀಡಿರುವ ಹೇಳಿಕೆ ರಾಜಕೀಯ ಪ್ರೇರಿತವಾದುದು. ಇಂತಹ ಹೇಳಿಕೆಗಳನ್ನು ನೀಡುವ ಮೂಲಕ ಕೊಡಗಿನ ಜಮ್ಮಾ ಜಾಗದ ಹಿಡುವಳಿದಾರರನ್ನು ಗೊಂದಲಕ್ಕೆ ದೂಡಿ, ದುರ್ಬಲರನ್ನಾಗಿಸುವ ಮೂಲಕ ಚುನಾವಣಾ ಹಂತದಲ್ಲಿ ರಾಜಕೀಯ ಲಾಭ ಪಡೆಯುವ ಹುನ್ನಾರ ನಡೆಸಿರುವುದಾಗಿ ಪೊನ್ನಣ್ಣ ಆರೋಪಿಸಿದರು.

ರಾಜ್ಯ ಉಚ್ಚ ನ್ಯಾಯಾಲಯದ ತೀರ್ಪಿನಂತೆ 'ಜಮ್ಮಾ' ಜಾಗ ಖಾಸಗಿ ಜಾಗವಾಗಿದೆ. ಇಂತಹ ಖಾಸಗಿ ಜಾಗವನ್ನು ಗುತ್ತಿಗೆ ಆಧಾರದಲ್ಲಿ ಇತರರಿಗೆ ನೀಡುವುದಾದರು ಹೇಗೆ ಎಂದು ಪ್ರಶ್ನಿಸಿದ ಎ.ಎಸ್. ಪೊನ್ನಣ್ಣ, ಇಂತಹ ಹೇಳಿಕೆಯೆ ಕಾನೂನು ಬಾಹಿರ ಮತ್ತು ನ್ಯಾಯಾಲಯದ ತೀರ್ಪಿನ ವಿರುದ್ಧವಾಗುತ್ತದೆ ಎಂದು ಸ್ಪಷ್ಟಪಡಿಸಿದರು.

ನ್ಯಾಯಾಲಯದ ತೀರ್ಪಿನ ಬಳಿಕವೂ ಕಂದಾಯ ಸಚಿವರು 'ಜಮ್ಮಾ' ಜಾಗವನ್ನು ಕುಮ್ಕಿ ಮತ್ತು ದಕ್ಷಿಣ ಕನ್ನಡದ ವಿವಿಧ ಭೂ ಹಿಡುವಳಿಗಳಿಗೆ ಹೋಲಿಕೆ ಮಾಡಿ, ಜಮ್ಮಾ ಜಾಗವನ್ನು ಗುತ್ತಿಗೆ ನೀಡುವುದಾಗಿ ಹೇಳಿಕೆ ನಿಡಿದ್ದಾರೆ. ಇದು ಅಚಾನಕ್ ತಪ್ಪಿನಿಂದ ನಡೆದಿರಬಹುದೆಂದು ಭಾವಿಸಿದರೂ, ಇಷ್ಟು ಸಮಯದ ಬಳಿಕವೂ ಕಂದಾಯ ಸಚಿವರು ತಮ್ಮ ಹೇಳಿಕೆಗೆ ಕನಿಷ್ಠ ಸ್ಪಷ್ಟನೆಯನ್ನೂ ನೀಡಿಲ್ಲ. ಆದ್ದರಿಂದ, ಇದೊಂದು ಸ್ಪಷ್ಟ ರಾಜಕೀಯ ದುರುದ್ದೇಶದ ಜನರನ್ನು ಆತಂಕಕ್ಕೆ ಗುರಿಮಾಡಿ ರಾಜಕೀಯ ಲಾಭ ಪಡೆಯುವ ಹೇಳಿಕೆಯೆಂದು ಆರೋಪಿಸಿದರು.

ಅರಣ್ಯಾಧಿಕಾರಿಗಳೇ ಕಾರಣ: ಪೊನ್ನಂಪೇಟೆ ವ್ಯಾಪ್ತಿಯ ಕೆ.ಬಾಡಗ ಗ್ರಾಮದಲ್ಲಿ ಎರಡು ಅಮಾಯಕ ಜೀವಗಳು ಹುಲಿ ದಾಳಿಗೆ ಬಲಿಯಾಗಲು ಅರಣ್ಯ ಅಧಿಕಾರಿಗಳ ನಿರ್ಲಕ್ಷ್ಯವೇ ಪ್ರಮುಖ ಕಾರಣವೆಂದು ಪೊನ್ನಣ್ಣ ಆರೋಪಿಸಿದರು. ಅರಣ್ಯ ಅಧಿಕಾರಿಗಳ ವಿರುದ್ಧ ದೂರು ದಾಖಲಿಸಿ ಅಮಾನತುಗೊಳಿಸಬೇಕೆಂದು ಒತ್ತಾಯಿಸಿದರು. ಭಾನುವಾರ ಚೇತನ್ ಎಂಬಾತನನ್ನು ಹುಲಿ ಕೊಂದು ಹಾಕಿದೆ, ಮರುದಿನ ಬೆಳಗ್ಗೆ ವೃದ್ಧರೊಬ್ಬರು ಬಲಿಯಾಗಿದ್ದಾರೆ. ಅರಣ್ಯ ಅಧಿಕಾರಿಗಳು ಚೇತನ್ ಮೃತಪಟ್ಟಾಗಲೇ ಎಚ್ಚೆತ್ತುಕೊಂಡಿದ್ದರೆ ವೃದ್ಧನ ಜೀವ ಉಳಿಯುತ್ತಿತ್ತು ಎಂದು ಅಭಿಪ್ರಾಯಪಟ್ಟರು.

ಆದೇಶವೇ ಆತಂಕ: ಒಂದು ಹುಲಿಯನ್ನು ಕೊಂದಾಕ್ಷಣ ಸಮಸ್ಯೆ ಬಗೆಹರಿಯಲು ಸಾಧ್ಯವಿಲ್ಲ. ಕಾಡುಗಳನ್ನು ನಾಶ ಮಾಡಿ ತೋಟಗಳನ್ನೇ ಕಾಡೆಂದು ಅರಣ್ಯ ಅಧಿಕಾರಿಗಳು ಬಿಂಬಿಸುತ್ತಿದ್ದಾರೆ. ಹುಲಿ ಎರಡು ಅಮಾಯಕ ಜೀವಗಳನ್ನು ಬಲಿ ಪಡೆದ ಪ್ರದೇಶವಾದ ಕೆ.ಬಾಡಗ ಗ್ರಾಮವೇ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಎಂದು 'ಹುಲಿ ಸೆರೆ' ಆದೇಶದಲ್ಲಿ ಉಲ್ಲೇಖಿಸಲಾಗಿದೆ. ಇದು ಆತಂಕದ ಆದೇಶವಾಗಿದ್ದು, ಇಡೀ ಗ್ರಾಮವನ್ನೇ ಹುಲಿ ಪ್ರದೇಶ ಎಂದು ಬಿಂಬಿಸಲಾಗಿದೆ. ಇದು ಕಾನೂನಿನ ಕಣ್ಣಿನಿಂದ ತಪ್ಪಿಸಿಕೊಳ್ಳಲು ಅರಣ್ಯಾಧಿಕಾರಿಗಳು ಮಾಡಿರುವ ಯತ್ನವಾಗಿದೆ ಎಂದು ಪೊನ್ನಣ್ಣ ಆರೋಪಿಸಿದರು. ಕಾಫಿ ತೋಟಗಳಿಗೆ ಮಾಲೀಕರು ಹಾಗೂ ಕಾರ್ಮಿಕರು ಹೋಗಲು ಸಾಧ್ಯವಾಗದ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ಅವರು ಆತಂಕ ವ್ಯಕ್ತಪಡಿಸಿದರು.

ಜೈಲಿಗೆ ಹೋಗಬೇಕೆ: ಜವಾಬ್ದಾರಿಯುತ ಸ್ಥಾನದಲ್ಲಿರುವ ಪ್ರತಿನಿಧಿಗಳು ಅಧಿಕಾರಿಗಳಿಗೆ ಸೂಕ್ತ ಕಾನೂನು ಕ್ರಮಗಳನ್ನು ಕೈಗೊಳ್ಳುವಂತೆ ಆದೇಶ ಮಾಡದೆ ಭಾವನಾತ್ಮಕ ಭಾಷಣಗಳನ್ನು ಮಾಡುತ್ತಿದ್ದಾರೆ. ಹುಲಿಗಳನ್ನು ಗುಂಡು ಹೊಡೆದು ಕೊಲ್ಲುವ ಮಾತುಗಳನ್ನಾಡುತ್ತಾರೆ. ಹುಲಿಯನ್ನು ಕೊಂದು ಜನರು ಜೈಲಿಗೆ ಹೋಗಬೇಕೆ, ಈ ತಮಾಷೆಯನ್ನು ಇವರು ನೋಡಬೇಕೆ ಎಂದು ಪೊನ್ನಣ್ಣ ಪ್ರಶ್ನಿಸಿದರು. ಸಂಬಂಧಪಟ್ಟ ಸಚಿವರು ಹಾಗೂ ಹಿರಿಯ ಅಧಿಕಾರಿಗಳು ಜಿಲ್ಲೆಗೆ ಭೇಟಿ ನೀಡಿ ವನ್ಯಜೀವಿಗಳ ದಾಳಿ ಕುರಿತು ಉನ್ನತ ಮಟ್ಟದ ಸಭೆ ನಡೆಸಬೇಕು. ಹುಲಿ ಉಪಟಳ ತಡೆಯುವಲ್ಲಿ ವಿಫಲರಾಗಿರುವ ಅರಣ್ಯ ಅಧಿಕಾರಿಗಳನ್ನು ಅಮಾನತುಗೊಳಿಸಿ ತನಿಖೆಗೆ ಒಳಪಡಿಸಬೇಕು, ಕಠಿಣ ಶಿಕ್ಷೆಯಾಗುವಂತೆ ನೋಡಿಕೊಳ್ಳಬೇಕು ಮತ್ತು ಹುಲಿ ಉಪಟಳದ ವಿರುದ್ಧ ಅರಣ್ಯ ಇಲಾಖೆ ತೆಗೆದುಕೊಂಡಿರುವ ಕ್ರಮಗಳ ಕುರಿತು ಶ್ವೇತಪತ್ರ ಹೊರಡಿಸಬೇಕು ಎಂದು ಅವರು ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಜಿಲ್ಲಾ ಕಾಂಗ್ರೆಸ್‌ನ ಕಾನೂನು ಘಟಕದ ಅಧ್ಯಕ್ಷ ಶ್ರೀಧರ್ ನಾಯರ್, ಸಾಮಾಜಿಕ ಜಾಲತಾಣ ಘಟಕದ ಜಿಲ್ಲಾಧ್ಯಕ್ಷ ಸೂರಜ್ ಹೊಸೂರು, ಪಕ್ಷದ ಪ್ರಮುಖರಾದ ಕಿರಣ್ ಪೂವಯ್ಯ, ಬಲ್ಯಾಟಂಡ ಕೌಶಿಕ್, ಶರಿನ್ ಗಿರೀಶ್ ಉಪಸ್ಥಿತರಿದ್ದರು.

ನ್ಯಾಯಾಲಯದ ತೀರ್ಪೇನು?

'ಜಮ್ಮಾ' ಜಾಗದ ವಿಷಯಕ್ಕೆ ಸಂಬಂಧಿಸಿದಂತೆ 'ಚಕ್ಕೇರ ಪೂವಯ್ಯ ಮತ್ತು ಕರ್ನಾಟಕ ರಾಜ್ಯ ಸರ್ಕಾರ'ದ ನಡುವೆ ವ್ಯಾಜ್ಯಕ್ಕೆ ಸಂಬಂಧಿಸಿದಂತೆ 1993ರಲ್ಲಿ ರಾಜ್ಯ ಉಚ್ಚ ನ್ಯಾಯಾಲಯ ಜಮ್ಮಾ ಹಿಡುವಳಿದಾರರ ಪರವಾದ ತೀರ್ಪನ್ನು ನೀಡುವ ಮೂಲಕ, ಜಮ್ಮಾ ಸಮಸ್ಯೆ ಇಲ್ಲವಾಗಿದೆ ಎಂದು ಪೊನ್ನಣ್ಣ ತಿಳಿಸಿದರು. ನ್ಯಾಯಾಲಯ ತನ್ನ ತೀರ್ಪಿನಲ್ಲಿ ಯಾವೆಲ್ಲ 'ಜಮ್ಮಾ' ಜಾಗ ಕಂದಾಯಕ್ಕೆ ಒಳಪಟ್ಟಿಲ್ಲವೋ, ಅಂತಹ ಜಾಗದಲ್ಲಿ ಸೊಪ್ಪು ಹಾಗೂ ಇತರೆ ಸೀಮಿತ ಸೌಲಭ್ಯಗಳನ್ನು ಪಡೆಯುವ ಹಕ್ಕನ್ನು ಹಿಡುವಳಿದಾರ ಹೊಂದಿರುತ್ತಾನೆ ಹಾಗೂ 'ಜಮ್ಮಾ' ಜಾಗದಲ್ಲಿ ಹಿಡುವಳಿದಾರ ಕೃಷಿ ಮಾಡುವ ಮೂಲಕ ಕಂದಾಯಕ್ಕೆ ಒಳಪಡಿಸಿದಲ್ಲಿ, ಆ ಜಾಗದ ಹಕ್ಕನ್ನು ಪಡೆದುಕೊಳ್ಳುವುದಾಗಿ ಸ್ಪಷ್ಟವಾಗಿ ತಿಳಿಸಿದೆ. ಈ ತೀರ್ಪಿನ ಬಳಿಕ ಜಮ್ಮಾ ಜಾಗ ಖಾಸಗಿ ಆಸ್ತಿ ಎನ್ನುವುದು ಶಾಸನ ಸಭೆಯಲ್ಲಿ ಶಾಸನವಾಗಿ ರೂಪುಗೊಂಡಿರುವುದಾಗಿ ಪೊನ್ನಣ್ಣ ಸ್ಪಷ್ಟಪಡಿಸಿದರು.

ಅಕ್ರಮವಾಗಿ ಸಾಗಿಸುತ್ತಿದ್ದ ಬೀಟೆ ಮರದ ತುಂಡುಗಳು ಜಪ್ತಿ



ಮಡಿಕೇರಿ, ಫೆ.14– ಅಕ್ರಮವಾಗಿ ಸಾಗಾಟ ಮಾಡಲಾಗುತ್ತಿದ್ದ ಬೀಟೆ ಮರದ ತುಂಡುಗಳನ್ನು ಅರಣ್ಯ ಇಲಾಖೆಯ ಕುಶಾಲನಗರ ವಿಭಾಗದ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಕೊಪ್ಪ ಅರಣ್ಯ ತಪಾಸಣಾ ಗೇಟ್ ಬಳಿ ಕಾರೊಂದನ್ನು ಪರಿಶೀಲನೆಗೆ ಒಳಪಡಿಸಿದಾಗ ಬೀಟೆ ಮರಗಳು ಇರುವುದು ಪತ್ತೆಯಾಗಿದೆ. ಈ ಸಂದರ್ಭದಲ್ಲಿ ಆರೋಪಿಗಳು ಪರಾರಿಯಾಗಿದ್ದಾರೆ. ಬೀಟೆ ಮರ ಮತ್ತು ಕಾರನ್ನು ವಶಪಡಿಸಿಕೊಂಡಿರುವ ಅಧಿಕಾರಿಗಳು ಪ್ರಕರಣ ದಾಖಲಿಸಿಕೊಂಡು ಆರೋಪಿಗಳ ಪತ್ತೆಗೆ ತನಿಖೆ ಕೈಗೊಂಡಿದ್ದಾರೆ.

ಮಡಿಕೇರಿ ಉಪ ಅರಣ್ಯ ಸಂರಕ್ಷಣಾಧಿಕಾರಿ ಎ.ಟಿ.ಪೂವಯ್ಯ ಅವರ ಮಾರ್ಗದರ್ಶನದಲ್ಲಿ ಎಸಿಎಫ್ ಎ.ಎ.ಗೋಪಾಲ್, ಕುಶಾಲನಗರ ವಲಯ ಅರಣ್ಯಾಧಿಕಾರಿ ಕೆ.ವಿ. ಶಿವರಾಮ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಉಪವಲಯ ಅರಣ್ಯಾಧಿಕಾರಿಗಳಾದ ದೇವಯ್ಯ ಮತ್ತಿತರ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಗ್ರಾಮಾಭಿವೃದ್ಧಿ ಯೋಜನೆಯಿಂದ ಮಹಿಳೆಯರು ಸ್ವಾವಲಂಬಿ



ವಿರಾಜಪೇಟೆ, ಫೆ.14– ಮಹಿಳೆಯರು ಸ್ವಾವಲಂಬಿಗಳಾಗಿ ಸಮಾಜದ ಮುಖ್ಯವಾಹಿನಿಗೆ ಬರುವಂತಾಗಲು ಗ್ರಾಮೀಣ ಪ್ರದೇಶದಲ್ಲಿರುವ ಮಹಿಳೆಯರಿಗೆ ಗ್ರಾಮಾಭಿವೃದ್ಧಿ ಯೋಜನೆಯಿಂದ ಸ್ವ ಉದ್ಯೋಗಕ್ಕಾಗಿ 600 ಕೋಟಿ ರೂ. ಸಾಲ ನೀಡಲಾಗಿದೆ ಎಂದು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಪ್ರಾದೇಶಿಕ ನಿರ್ದೇಶಕ ವಸಂತ ಸಾಲಿಯಾನ್ ಹೇಳಿದರು.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ತಾಲೂಕಿನ ಮಹಿಳಾ ಜ್ಞಾನವಿಕಾಸ ಕೇಂದ್ರಗಳು ಮತ್ತು ಪ್ರಗತಿಬಂಧು ಸ್ವ–ಸಹಾಯ ಸಂಘಗಳ ಒಕ್ಕೂಟದ ಸಂಯುಕ್ತ ಆಶ್ರಯದಲ್ಲಿ ನಗರದಲ್ಲಿರುವ ಮಹಿಳಾ ಸಮಾಜದಲ್ಲಿ ಆಯೋಜಿಸಿದ್ದ ತಾಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿಯನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಮಾತನಾಡಿದ ಅವರು, ಈಗಾಗಲೇ ತಂತ್ರಜ್ಞಾನ ಬಹಳಷ್ಟು ಮುಂದುವರಿದಿದೆ. ಇತ್ತೀಚಿನ ದಿನಗಳಲ್ಲಿ ಮಹಿಳೆಯರು ಎಲ್ಲಾ ರಂಗದಲ್ಲಿಯೂ ಮುಂದೆ ಇದ್ದಾರೆ. ಅಗತ್ಯತೆಗಳ ಬಗ್ಗೆ ತಿಳಿದುಕೊಂಡು ಬಹಳಷ್ಟು ಯಶಸ್ವಿಯಾಗಿದ್ದಾರೆ ಎಂದರು.

ಗ್ರಾಮೀಣ ಭಾಗದ ಅಸಕ್ತ ಮಹಿಳೆಯರನ್ನು ಗುರುತಿಸಿ ತರಬೇತಿ ನೀಡಲಾಗುತ್ತಿದೆ. ಗ್ರಾಮಾಭಿವೃದ್ಧಿ ಯೋಜನೆಯಿಂದ ಸಾಲ ನೀಡುತ್ತಿಲ್ಲ. ಬ್ಯಾಂಕ್ ಸಾಲ ನೀಡುತ್ತಿದೆ ಎಂದ ಅವರು, ಯೋಜನೆಯ ಸೌಲಭ್ಯಗಳನ್ನು ಸದಸ್ಯರು ಸರಿಯಾಗಿ ಬಳಕೆ ಮಾಡಿಕೊಳ್ಳುವಂತಾಗಬೇಕು ಎಂದರು.

ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿ ಡಿ.ಆರ್.ರವಿಕುಮಾರ್ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಸಾರ್ವಜನಿಕರು ಪೊಲೀಸರೊಂದಿಗೆ ಸಹಕಾರ ನೀಡಬೇಕು. ಗ್ರಾಮಗಳಲ್ಲಿ ಸಮಸ್ಯೆಗಳಿದ್ದಾಗ ನೇರವಾಗಿ ದೂರವಾಣಿ ಮೂಲಕ ಸಂಪರ್ಕಿಸಬಹುದು. ಪೋಷಕರು ತಮ್ಮ ಮಕ್ಕಳ ಬಗ್ಗೆ ಗಮನ ಹರಿಸಬೇಕು. ಯುವಕರು ದುಶ್ಚಟಗಳಿಂದ ದೂರವಿದ್ದು, ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಬೇಕು ಎಂದರು.

ಯೋಜನೆಯ ತಾಲೂಕು ಜ್ಞಾನವಿಕಾಸ ಕೇಂದ್ರದ ಬಿ.ಎಸ್.ಪವಿತ್ರ ಸಭೆಯ ಅಧ್ಯಕ್ಷತೆ ವಹಿಸಿದ್ದರು. ವಿರಾಜಪೇಟೆ ಕಾವೇರಿ ಕಾಲೇಜಿನ ಉಪನ್ಯಾಸಕರಾದ ಅಂಬಿಕಾ ಉತ್ತಪ್ಪ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿ 'ಸದೃಢ ಸಮಾಜ ನಿರ್ಮಾಣದಲ್ಲಿ ಮಹಿಳೆಯರ ಪಾತ್ರ' ಎಂಬ ವಿಷಯ ಕುರಿತು ಉಪನ್ಯಾಸ ನೀಡಿದರು. ವೇದಿಕೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾ ಜನಜಾಗೃತಿ ವೇದಿಕೆಯ ನಿಕಟಪೂರ್ವ ಅಧ್ಯಕ್ಷ ಬಾನಂಗಡ ಅರುಣ್ ಹಾಗೂ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕಿ ಲೀಲಾವತಿ ಅವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಅಮ್ಮತ್ತಿ ವಲಯದ ಮೇಲ್ವಿಚಾರಕ ಸುಜೀರ್ ಕುಲಾಲ್, ತಾಲೂಕು ಲೆಕ್ಕಪರಿಶೋಧಕ ನವೀನ್, ಜ್ಞಾನವಿಕಾಸ ಸಮನ್ವಯಾಧಿಕಾರಿಗಳಾದ ಅಮೃತ ಮತ್ತು ಆರ್.ಶ್ರೇಯಾ ಉಪಸ್ಥಿತರಿದ್ದರು.

ವಿರಾಜಪೇಟೆ ಮತ್ತು ಮಡಿಕೇರಿ ಗ್ರಾಮಾಭಿವೃದ್ಧಿ ಯೋಜನಾಧಿಕಾರಿ ಬಿ.ದಿನೇಶ್ ಸ್ವಾಗತಿಸಿದರು, ಕೃಷಿ ಅಧಿಕಾರಿ ರಾಮ್‌ಕುಮಾರ್ ಮಾರ್ನಾಡು ನಿರೂಪಿಸಿದರೆ, ವಿರಾಜಪೇಟೆ ವಲಯ ಮೇಲ್ವಿಚಾರಕ ನಾಗರಾಜ್ ವಂದಿಸಿದರು. ಪೊನ್ನಂಪೇಟೆ ಶ್ರೀಮಂಗಲ ವಲಯದ ಸದಸ್ಯೆ ಸುಜಾತ ಮನೆಯವರಿಗೆ ಗ್ಯಾಸ್ ಸ್ಫೋಟದಿಂದ ಗಾಯಗೊಂಡವರಿಗೆ 33 ಸಾವಿರ ರೂ., ಗೋಣಿಕೊಪ್ಪ–ಚೆನ್ನಂಗೋಲಿ ರುಕ್ಮಿಣಿ ಅವರಿಗೆ ಆಸ್ಪತ್ರೆ ಚಿಕಿತ್ಸಾ ವೆಚ್ಚ 20 ಸಾವಿರ ರೂ., ಮತ್ತು ಅಲ್ಲಿನ ಜಯ ಅವರಿಗೆ ಆಸ್ಪತ್ರೆ ಚಿಕಿತ್ಸಾ ವೆಚ್ಚ 20 ಸಾವಿರ ರೂ., ವಿರಾಜಪೇಟೆ ವೆಂಕಪ್ಪ ಅವರಿಗೆ ಹೃದಯ ಸಂಬಂಧಿ ಕಾಯಿಲೆಗೆ 20 ಸಾವಿರ ರೂ., ಸಿದ್ದಾಪುರ–ಪಾಲಿಬೆಟ್ಟ ಸಿ.ಎಸ್.ಸರಿತಾ ಆನೆ ದಾಳಿಗೆ ತುತ್ತಾದ ಕಾರಣ 20 ಸಾವಿರ ರೂ., ಸಿದ್ದಾಪುರ–ಮಾಲ್ದಾರೆ ವಿ.ಎಸ್. ಅಪ್ಪಯ್ಯ ಹೃದಯ ಸಂಬಂಧಿ ಕಾಯಿಲೆಗೆ 15 ಸಾವಿರ ರೂ. ಸೇರಿ ಒಟ್ಟು 1,28,000 ರೂ. ಚೆಕ್ ನೀಡಲಾಯಿತು. ಈ ಸಂದರ್ಭ ಜ್ಞಾನವಿಕಾಸ ಕೇಂದ್ರ, ಪ್ರಗತಿಬಂಧು, ಸ್ವ ಸಹಾಯ ಸಂಘಗಳ ಸದಸ್ಯರು ಹಾಜರಿದ್ದರು.

ರಥ ನಿರ್ಮಾಣ ಕಾಮಗಾರಿ ವಿಳಂಬ ಖಂಡಿಸಿ ಪ್ರತಿಭಟನೆ



ಚಾಮರಾಜನಗರ, ಫೆ.14– ತಾಲೂಕಿನ ಹರದನಹಳ್ಳಿ ಹೋಬಳಿಯ ಚನ್ನಪ್ಪನಪುರ ಗ್ರಾಮದ ಶ್ರೀವೀರಭದ್ರೇಶ್ವರಸ್ವಾಮಿ ರಥದ ನಿರ್ಮಾಣ ಕಾಮಗಾರಿ ಪ್ರಾರಂಭವಾಗದಿರುವುದನ್ನು ಖಂಡಿಸಿ ಚನ್ನಪ್ಪನಪುರ ಮತ್ತು ಅಮಚವಾಡಿ ಗ್ರಾಮಸ್ಥರು ನಗರದ ಜಿಲ್ಲಾಡಳಿತ ಭವನದ ಮುಂದೆ ಪ್ರತಿಭಟನೆ ನಡೆಸಿದರು.

ಭವನದ ಮುಂದೆ ಜಮಾಯಿಸಿದ ಗ್ರಾಮಗಳ ಮುಖಂಡರು, ಸರ್ಕಾರ, ಜಿಲ್ಲಾಡಳಿತ, ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಶಾಸಕರ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಕಳೆದ ಕೆಲವು ತಿಂಗಳ ಹಿಂದೆ ನಡೆದ ಚನ್ನಪ್ಪನಪುರ ಗ್ರಾಮದ ಶ್ರೀವೀರಭದ್ರೇಶ್ವರಸ್ವಾಮಿ ರಥೋತ್ಸವದ ವೇಳೆ ರಥದ ಚಕ್ರದ ದೂರಿ ಮುರಿದು ರಥ ಉರುಳಿ ಬಿದ್ದ ಪರಿಣಾಮ ರಥಕ್ಕೆ ಹಾನಿ ಉಂಟಾಯಿತು. ನಂತರ ಜಿಲ್ಲಾ ಉಸ್ತುವಾರಿ ಸಚಿವ ವಿ. ಸೋಮಣ್ಣ, ಶಾಸಕ ಸಿ. ಪುಟ್ಟರಂಗಶೆಟ್ಟಿ, ಜಿಲ್ಲಾಧಿಕಾರಿ ಡಿ.ಎಸ್. ರಮೇಶ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ವೇಳೆ ಹೊಸ ರಥವನ್ನು ಮಾಡಿಸಲಾಗುವುದು, ದೇವಸ್ಥಾನವನ್ನು ಅಭಿವೃದ್ಧಿ ಪಡಿಸಲಾಗುವುದು ಎಂದು ಭರವಸೆ ನೀಡಲಾಗಿತ್ತು. ಆದರೆ, ಈ ಭರವಸೆ ಕಾರ್ಯ ರೂಪಕ್ಕೆ ಬಂದಿಲ್ಲ ಎಂದು ಪ್ರತಿಭಟನಾಕಾರರು ದೂರಿದರು.

ಈ ಕೂಡಲೇ ನೂತನ ನಿರ್ಮಾಣ ಮಾಡುವ ಕೆಲಸ ಪ್ರಾರಂಭಿಸಬೇಕು. ದೇವಸ್ಥಾನದ ಅಭಿವೃದ್ಧಿ ಕಾಮಗಾರಿಗಳು ಆರಂಭವಾಗಬೇಕು. ಒಂದು ವೇಳೆ ಮತ್ತೆ ವಿಳಂಬವಾದಲ್ಲಿ ತೀವ್ರ ಹೋರಾಟ ನಡೆಸಬೇಕಾಗುತ್ತದೆ. ಇದಕ್ಕೂ ಮನ್ನಣೆ ದೊರೆಯದಿದ್ದರೆ ಮುಂಬರುವ ಎಲ್ಲಾ ಚುನಾವಣೆಗಳನ್ನು ಬಹಿಷ್ಕರಿಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ನಂತರ ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಾಯಿನಿ ದೇವಿ ಅವರಿಗೆ ಮನವಿ ಸಲ್ಲಿಸಿದರು. ಅಮಚವಾಡಿ ಕೋಮುವಾರು ಮುಖಂಡರಾದ ಶ್ರೀಕಾಂತ್‌ರಾಜ ಅರಸ್, ಉಪಾಧ್ಯಕ್ಷರಾದ ಮಹದೇವಸ್ವಾಮಿ, ಅಮಚವಾಡಿ ಗ್ರಾಪಂ ಅಧ್ಯಕ್ಷ ಮಹೇಂದ್ರ, ಮುಖಂಡರಾದ ಕುಮಾರ್, ರಾಜಣ್ಣ, ಚನ್ನಪ್ಪನಪುರ ಶೇಖರ್, ಇತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಇಂದು ಬೃಹತ್ ತಪಾಸಣಾ ಶಿಬಿರ

ಚಾಮರಾಜನಗರ, ಫೆ.14– ಜೆಎಸ್‌ಎಸ್ ಆಸ್ಪತ್ರೆ ಮೈಸೂರು ಹಾಗೂ ಡಾ.ಬಾಬು ಸೋಷಿಯಲ್ ವೆಲ್‌ಫೇರ್ ಮತ್ತು ಚಾರಿಟಬಲ್ ಟ್ರಸ್ಟ್ ಸಂಯುಕ್ತಾಶ್ರಯದಲ್ಲಿ ಫೆ. 15 ರಂದು ನಗರದ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಮೂಳೆ ಸಂಬಂಧಿತ ಖಾಯಿಲೆಗಳ ಬೃಹತ್ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಬೆಳಿಗ್ಗೆ 9 ರಿಂದ 1 ಗಂಟೆಯವರೆಗೆ ಶಿಬಿರ ನಡೆಯುತ್ತದೆ. ಶಿಬಿರದಲ್ಲಿ ಬೆನ್ನು ನೋವಿನ ಸಮಸ್ಯೆ, ಕತ್ತು ನೋವು. ಮಂಡಿ ನೋವಿನ ಸಮಸ್ಯೆ, ಕೀಲುಗಳ ಸಮಸ್ಯೆ ಹಾಗೂ ಮಕ್ಕಳಿಗೆ ಮೂಳೆ ಅಂಗವೈಕಲ್ಯ ಸಮಸ್ಯೆಗಳಿಗೆ ತಪಾಸಣೆ ನಡೆಸಿ, ಸಲಹೆ ಕೊಡಲಾಗುವುದು,

ವಿಶೇಷ ಸೂಚನೆ: ಶಿಬಿರಕ್ಕೆ ಬರುವ ರೋಗಿಗಳಿಗೆ ಅವಶ್ಯಕತೆ ಇದ್ದಲ್ಲಿ ಎಕ್ಸ್–ರೇಯನ್ನು ಉಚಿತವಾಗಿ ಮಾಡಲಾಗುವುದು, ಅಪರೇಷನ್ ಅವಶ್ಯಕತೆ ಇರುವ ರೋಗಿಗಳಿಗೆ ಆಯುಷ್ಮಾನ್ ಭಾರತ ಮತ್ತು ಯಶಸ್ವಿನಿ ಯೋಜನೆಯಡಿಯಲ್ಲಿ ಆಯ್ಕೆ ಮಾಡಲಾಗುವುದು. ಜಿಲ್ಲೆಯ ಜನತೆ ಈ ಸದಾವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು. ಡಾ. ಬಾಬು ಸೋಷಿಯಲ್ ವೆಲ್‌ಫೇರ್ ಮತ್ತು ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಡಾ. ಎಆರ್.ಬಾಬು ಪತ್ರಿಕಾ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಆಹಾರ ಅರಸಿ ಬಂದ ಕಾಡಾನೆಗೆ ವಿದ್ಯುತ್ ಸ್ಪರ್ಶ

ನಿತ್ರಾಣಗೊಂಡ ಆನೆಗೆ ಅರಣ್ಯ ಇಲಾಖೆ ಪಶು ವೈದ್ಯರಿಂದ ಚಿಕಿತ್ಸೆ

- ಸದ್ಯ ಚೇತರಿಸಿಕೊಂಡು ಕಾಡಿನತ್ತ ತೆರಳಿದ ಹೆಣ್ಣಾನೆ
- ಅಕ್ರಮ ವಿದ್ಯುತ್ ಅಳವಡಿಸಿದ್ದ ಜಮೀನಿನ ಮಾಲೀಕ ನಾಪತ್ತೆ



ಗುಂಡ್ಲುಪೇಟೆ, ಫೆ.14– ಆಹಾರ ಅರಸಿ ಕಾಡಿನಿಂದ ನಾಡಿಗೆ ಬಂದಿದ್ದ ಕಾಡಾನೆಯೊಂದು ಅಕ್ರಮವಾಗಿ ಹರಿಸಿದ್ದ ವಿದ್ಯುತ್ ಸ್ಪರ್ಶಿಸಿ ನಿತ್ರಾಣಗೊಂಡು ನಂತರ ಅರಣ್ಯ ಇಲಾಖೆ ಸಿಬ್ಬಂದಿಗಳ ಚಿಕಿತ್ಸೆಯಿಂದ ಮತ್ತೆ ಕಾಡು ಸೇರಿದ ಘಟನೆ ತಾಲೂಕಿನ ನಾಗಾಪಟ್ಟಣದಲ್ಲಿ ನಡೆದಿದೆ.

ಬಂಡೀಪುರ ಹುಲಿ ಯೋಜನೆಯ ಓಂಕಾರ್ ವಲಯದ ಕಾಡಂಚಿನ ನಾಗಾಪಟ್ಟಣ ಗ್ರಾಮದ ಸಮೀಪ ಪುತ್ತನಪುರ ರಾಜು ಎಂಬುವರು ತಮ್ಮ ಜಮೀನಿನಲ್ಲಿ ತೆಂಗಿನ ಮರಗಳನ್ನು ರಕ್ಷಿಸುವ ಸಲುವಾಗಿ ಸುತ್ತಲೂ ತಂತಿ ಬೇಲಿ ಹಾಕಿ ನೆಲಮಟ್ಟದಲ್ಲಿ ಅಕ್ರಮವಾಗಿ ವಿದ್ಯುತ್ ಸಂಪರ್ಕ ಅಳವಡಿಸಿದ್ದರು. ಆಹಾರವನ್ನರಸಿ ಮಂಗಳವಾರ ನಸುಕಿನಲ್ಲಿ ಅರಣ್ಯದಿಂದ ಹೊರಬಂದ ಸುಮಾರು 25 ವರ್ಷ ವಯಸ್ಸಿನ ಹೆಣ್ಣಾನೆಗೆ ವಿದ್ಯುತ್ ಸ್ಪರ್ಶಿಸಿದ್ದರಿಂದ ಸ್ಥಳದಲ್ಲಿಯೇ ನಿತ್ರಾಣಗೊಂಡು ಕುಸಿದು ಬಿದ್ದಿದೆ. ಆನೆ ಜೋರಾಗಿ ಘೀಳಿಡುತ್ತಿದ್ದ ಶಬ್ದ ಕೇಳಿದ ಸಾರ್ವಜನಿಕರು ಅರಣ್ಯ ಇಲಾಖೆಗೆ ವಿಷಯ ತಿಳಿಸಿದರು.

ಕೂಡಲೇ ಸ್ಥಳಕ್ಕೆ ಬಂದ ಓಂಕಾರ್ ವಲಯಾರಣ್ಯಾಧಿಕಾರಿ ಸತೀಶ್, ಗುಂಡ್ಲುಪೇಟೆ ಉಪವಿಭಾಗದ ಎಸಿಎಫ್ ಸಿ.ರವೀಂದ್ರ ಭೇಟಿ ನೀಡಿ ಪರಿಶೀಲಿಸಿದರು. ನಂತರ ಅರಣ್ಯ ಇಲಾಖೆಯ ಪಶುವೈದ್ಯ ಡಾ.ವಾಸಿಂ ಮಿರ್ಜಾ ಮತ್ತು ತಂಡ ಸರಿಯಾದ ಸಮಯಕ್ಕೆ ಬಂದು ಸತತ ನಾಲ್ಕು ಗಂಟೆಗಳಿಗೂ ಅಧಿಕ ಕಾಲ ಚಿಕಿತ್ಸೆ ಹಾಗೂ ಆರೈಕೆ ಮಾಡಿದ ಹಿನ್ನೆಲೆಯಲ್ಲಿ ಆನೆ ಚೇತರಿಸಿಕೊಂಡಿತು. ನಂತರ ಜೆಸಿಬಿ ಸಹಾಯದಿಂದ ಮೇಲೆತ್ತಿ ಆನೆಯು ನಡೆಯಲು ಅನುಕೂಲ ಮಾಡಿಕೊಡುತ್ತಿದ್ದಂತೆಯೇ ಕಾಡಿನತ್ತ ಆನೆ ತೆರಳಿತು.

ಈ ಬಗ್ಗೆ ಗುಂಡ್ಲುಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಜಮೀನಿನ ಮಾಲೀಕ ತಲೆಮರೆಸಿಕೊಂಡಿದ್ದಾನೆ. ಆತ ತೆಂಗಿನ ಮರಗಳಿಗೆ ನೆಲಮಟ್ಟದಲ್ಲಿ ಕಟ್ಟಿದ್ದ ವಿದ್ಯುತ್ ತಂತಿಗಳನ್ನು ವಶಕ್ಕೆ ಪಡೆದುಕೊಂಡು ಆತನ ಪತ್ತೆಗೆ ಕ್ರಮಕೈಗೊಳ್ಳಲಾಗಿದೆ ಎಂದು ಅರಣ್ಯ ಅಧಿಕಾರಿಗಳು ತಿಳಿಸಿದ್ದಾರೆ. ಸ್ಥಳಕ್ಕೆ ಬಂಡೀಪುರ ಹುಲಿ ಯೋಜನೆಯ ನಿರ್ದೇಶಕ ಡಾ.ರಮೇಶ್‌ಕುಮಾರ್, ಎಸಿಎಫ್ ರವೀಂದ್ರ, ಆರ್‌ಎಫ್‌ಒ ನವೀನ್ ಕುಮಾರ್, ಕಂದಾಯ ಹಾಗೂ ಸೆಸ್ಕ್ ಅಧಿಕಾರಿಗಳ ತಂಡ ಭೇಟಿ ನೀಡಿ ಪರಿಶೀಲಿಸಿತು.

21 ಅಡಿ ಶಿವಲಿಂಗ, ವಿವಿಧ ರಾಜ್ಯಗಳಿಂದ ತರಿಸಲಾದ 12 ಜ್ಯೋತಿರ್ಲಿಂಗಗಳ ದರ್ಶನ

ಫೆ.16ರಿಂದ 27ರವರೆಗೆ ಕಾರ್ಯಕ್ರಮ



ಕೊಳ್ಳೇಗಾಲ, ಫೆ.14– ಶಿವರಾತ್ರಿ ಅಂಗವಾಗಿ ಎಂಜಿಎಸ್‌ವಿ ಜೂನಿಯರ್ ಕಾಲೇಜು ಆವರಣದಲ್ಲಿ 21 ಅಡಿ ಎತ್ತರದ ಬೃಹದಾಕಾರದ ಲೈಟಿಂಗ್ ಶಿವಲಿಂಗ ಮತ್ತು ಮಹಾರಾಷ್ಟ್ರ, ತಮಿಳುನಾಡು, ಆಂಧ್ರ, ಮಧ್ಯಪ್ರದೇಶ, ಬಿಹಾರ, ಉತ್ತರ ಪ್ರದೇಶಗಳಿಂದ ತರಿಸಲಾದ 12 ದ್ವಾದಶ ಜ್ಯೋತಿರ್ಲಿಂಗಗಳನ್ನು ಸಾರ್ವಜನಿಕರಿಗೆ ಪುಣ್ಯದರ್ಶನ ಮಾಡಿಸುವ ಮಹತ್ಕಾರ್ಯವನ್ನು ಬ್ರಹ್ಮಕುಮಾರಿ ಈಶ್ವರಿಯ ವಿಶ್ವ ವಿದ್ಯಾನಿಲಯ ಹಮ್ಮಿಕೊಂಡಿದೆ.

ಫೆ.16ರಂದು ನಡೆಯುವ ಅಂದಿನ ಸಮಾರಂಭವನ್ನು ಜಿಲ್ಲಾ ಉಸ್ತುವಾರಿ ಸಚಿವ ಸೋಮಣ್ಣ ಉದ್ಘಾಟಿಸುವರು ಎಂದು ರಾಜಯೋಗಿನಿ ಬಿ.ಕೆ. ಪ್ರಭಾವಣಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು ಶ್ರೀಶೈಲ ಮಲ್ಲಿಕಾರ್ಜುನ, ಸೋಮನಾಥೇಶ್ವರ, ಮಹಾಕಾಳೇಶ್ವರ, ಓಂಕಾರೇಶ್ವರ, ಕೇದಾರನಾಥ, ಬೀಮಾಶಂಕರ, ಗ್ರಿಶನೇಶ್ವರ, ರಾಮೇಶ್ವರ ನಾಗೇಶ್ವರಂ, ವೈದ್ಯನಾಥ, ತ್ರಯಂಬಕೇಶ್ವರ, ವಿಶ್ವನಾಥೇಶ್ವರ ಲಿಂಗಗಳ ಪುಣ್ಯದರ್ಶನವನ್ನು ಭಕ್ತಾದಿಗಳ ಅನುಕೂಲಕ್ಕಾಗಿ ಇದೇ ಪ್ರಥಮ ಬಾರಿಗೆ ಹಲವು ವರ್ಷಗಳ ಬಳಿಕ ಅನುಕೂಲ ಕಲ್ಪಿಸಲಾಗಿದ್ದು, ಶರಣರು ಕಂಡ ಶಿವ ವಿಶೇಷ ಪ್ರವಚನ ಮಾಲೆ ಸಹಾ ಆಯೋಜಿಸಲಾಗಿದೆ. ಭಕ್ತಾದಿಗಳು ಇದರ ಬಳಕೆ ಮಾಡಿಕೊಂಡು ಶಿವನ ಕೃಪೆಗೆ ಪಾತ್ರರಾಗಬೇಕು ಎಂದರು.

ಕೊಳ್ಳೇಗಾಲದಲ್ಲಿ ಶಿವರಾತ್ರಿ ಅಂಗವಾಗಿ ಪ್ರಪ್ರಥಮ ಬಾರಿಗೆ ಫೆ.16ರಿಂದ 27ರವರೆಗೆ 11 ದಿನಗಳ ಕಾಲ 21 ಅಡಿ ಬೃಹದಾಕಾರದ ಭಾರತದ ಪ್ರಸಿದ್ಧ ಶಿವಲಿಂಗ ಮತ್ತು ವಿವಿಧ ರಾಜ್ಯಗಳಿಂದ ತರಿಸಲಾದ 12 ಜ್ಯೋತಿರ್ಲಿಂಗಗಳ ಪುಣ್ಯ ದರ್ಶನಕ್ಕೆ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾನಿಲಯ ಅವಕಾಶ ಕಲ್ಪಿಸಲಾಗಿದ್ದು, ಸಾರ್ವಜನಿಕರು, ಭಕ್ತಾದಿಗಳು ಪಾಲ್ಗೊಂಡು ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.

ನಾಳೆ ನಗರದಲ್ಲಿ ಅರಿಶಿನ ಬೆಳೆಗಾರರಿಂದ ಬೈಕ್ ರ್‍ಯಾಲಿ

ಚಾಮರಾಜನಗರ, ಫೆ.14– ಮಾರುಕಟ್ಟೆ ಮಧ್ಯೆ ಪ್ರವೇಶ ಯೋಜನೆಯಡಿ (ಎಂಐಎಸ್) ಅರಿಶಿನ ಖರೀದಿಸುವಂತೆ ಸರ್ಕಾರವನ್ನು ಒತ್ತಾಯಿಸಿ ನಗರದಲ್ಲಿ ಫೆ. 16ರಂದು ಅರಿಶಿನ ಬೆಳೆಗಾರರಿಂದ ಬೈಕ್ ರ್‍ಯಾಲಿ ಹಮ್ಮಿಕೊಳ್ಳಲಾಗಿದೆ ಎಂದು ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್ ತಿಳಿಸಿದರು.

ನಗರದಲ್ಲಿ ಮಂಗಳವಾರ ಕರೆದಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರಿಶಿನ ಬೆಳೆ ತೀವ್ರ ಕುಸಿದಿದ್ದು, ಬೆಳೆಗಾರರು ಕಂಗಾಲಾಗಿದ್ದಾರೆ. ಹೀಗಾಗಿ, ಸರ್ಕಾರ ಎಂಐಎಸ್ ಯೋಜನೆಯಡಿ ಕ್ವಿಂಟಾಲ್ ಅರಿಶಿನವನ್ನು 17,500 ರೂ. ದರದಲ್ಲಿ ಖರೀದಿಸಬೇಕು. ಈ ಮೂಲಕ ಸರ್ಕಾರ ರೈತರ ನೆರವಿಗೆ ಧಾವಿಸಬೇಕು ಎಂದು ಆಗ್ರಹಿಸಿದರು. ಜಿಲ್ಲೆಯ ಎಲ್ಲಾ ತಾಲೂಕುಗಳಿಂದ ಅಂದು (ಫೆ.16) ನಗರಕ್ಕೆ ಅರಿಶಿನ ಬೆಳೆಗಾರರು ಬೈಕ್‌ನಲ್ಲಿ ಆಗಮಿಸುವರು. ನಂತರ ಜಿಲ್ಲಾಡಳಿತ ಭವನಕ್ಕೆ ತೆರಳಿ ಜಿಲ್ಲಾಧಿಕಾರಿಗಳ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಗುವುದು. ಸುಮಾರು ಐದು ಸಾವಿರ ರೈತರು ಈ ರ್‍ಯಾಲಿಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಸಭೆ ಮುಂದೂಡಿಕೆ

ಚಾಮರಾಜನಗರ, ಫೆ.14– ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಫೆ.15 ರಂದು ಕೊಳ್ಳೇಗಾಲದಲ್ಲಿ ನಿಗದಿಯಾಗಿದ್ದ ಉಪವಿಭಾಗ ಮಟ್ಟದ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಹಿತರಕ್ಷಣಾ ಸಮಿತಿ ಸಭೆಯನ್ನು ಅನಿವಾರ್ಯ ಕಾರಣದಿಂದ ಮುಂದೂಡಲಾಗಿದೆ ಎಂದು ಕೊಳ್ಳೇಗಾಲ ತಾಲೂಕು ಸಮಾಜ ಕಲ್ಯಾಣಾಧಿಕಾರಿ ಎಲ್.ಗಂಗಾಧರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಂಜದೇವನಪುರ ಗ್ರಾಮ ಪಂಚಾಯಿತಿ ನೂತನ ಉಪಾಧ್ಯಕ್ಷೆಯಾಗಿ

ಬಿಜೆಪಿ ಬೆಂಬಲಿತ ನಾಗಮ್ಮ ಆಯ್ಕೆ



ಚಾಮರಾಜನಗರ, ಫೆ. 14– ತಾಲೂಕಿನ ನಂಜದೇವನಪುರ ಗ್ರಾಮ ಪಂಚಾಯಿತಿ ನೂತನ ಉಪಾಧ್ಯಕ್ಷೆಯಾಗಿ ಬಿಜೆಪಿ ಬೆಂಬಲಿತ ನಾಗಮ್ಮ ಆಯ್ಕೆಯಾಗಿದ್ದಾರೆ.

ಗ್ರಾಮದ ಗ್ರಾಮ ಪಂಚಾಯಿತಿ ಕಚೇರಿಯಲ್ಲಿ ಉಪಾಧ್ಯಕ್ಷೆ ಅಮೃತಮ್ಮ ರಾಜೀನಾಮೆಯಿಂದ ತೆರವಾಗಿದ್ದ ಉಪಾಧ್ಯಕ್ಷ ಸ್ಥಾನಕ್ಕೆ ಇಂದು ನಡೆದ ಚುನಾವಣೆಯಲ್ಲಿ ಬಿಜೆಪಿ ಬೆಂಬಲಿತರಾಗಿ ನಾಗಮ್ಮ ಹಾಗೂ ಕಾಂಗ್ರೆಸ್ ಬೆಂಬಲಿತರಾಗಿ ಶಶಿಕಲಾ ನಾಮಪತ್ರ ಸಲ್ಲಿಸಿದ್ದರು. ಚುನಾವಣೆ ನಡೆದು ಕಾಂಗ್ರೆಸ್ ಅಭ್ಯರ್ಥಿ ಶಶಿಕಲಾ 10 ಮತ, ಬಿಜೆಪಿ ಅಭ್ಯರ್ಥಿ ನಾಗಮ್ಮ 11 ಮತ ಪಡೆದು ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾದರು. ಚುನಾವಣಾಧಿಕಾರಿ ಮಾದೇಶ್ ಉಪಾಧ್ಯಕ್ಷರ ಆಯ್ಕೆ ಪ್ರಕಟಿಸಿದರು.

ಸಭೆಯಲ್ಲಿ ಅಧ್ಯಕ್ಷೆ ಮೇಘಶ್ರೀ, ಸದಸ್ಯರಾದ ಜಯಮ್ಮ, ನಾಗರತ್ನಮ್ಮ, ಪಾರ್ವತಿ, ಮಂಜುಳ, ಮಹದೇವಸ್ವಾಮಿ, ಟಿ.ಎಸ್. ಬಸವಣ್ಣ, ಬಸವಶೆಟ್ಟಿ, ಗುರುರಾಜು, ಆರ್.ಸಿದ್ದರಾಜನಾಯಕ, ಡಿಓ ಸಿ.ಎನ್. ವೀಣಾ ಭಾಗವಹಿಸಿದ್ದರು.

ನೂತನ ಉಪಾಧ್ಯಕ್ಷರಿಗೆ ಸನ್ಮಾನ: ನೂತನ ಉಪಾಧ್ಯಕ್ಷರಾಗಿ ಆಯ್ಕೆಯಾದ ನಾಗಮ್ಮ ಅವರನ್ನು ಬಿಜೆಪಿ ನಿಕಟಪೂರ್ವ ಬಿಜೆಪಿ ಗ್ರಾಮಾಂತರ ಮಂಡಲ ಅಧ್ಯಕ್ಷ ಜಿ.ಪ್ರಶಾಂತ್ ಹಾಗೂ ವಕೀಲ ಎಂ.ಬಿ.ಮಹೇಶ್ ಸನ್ಮಾನಿಸಿದರು. ಈ ಸಂದರ್ಭದಲ್ಲಿ ಜಿ.ಪ್ರಶಾಂತ ಮಾತನಾಡಿ, ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಗಳ ಗೆಲುವಿಗೆ ಗ್ರಾಮ ಪಂಚಾಯಿತಿ ಸದಸ್ಯರ ಕೊಡುಗೆ ಅಪಾರವಾಗಿದೆ. ಇದೇ ಒಗ್ಗಟ್ಟಿನಲ್ಲಿ ಕೆಲಸ ಮಾಡಿ ಕ್ಷೇತ್ರದಲ್ಲಿ ಕಮಲ ಅರಳಿಸಲು ಶ್ರಮಿಸಬೇಕು ಎಂದು ಮನವಿ ಮಾಡಿದರು. ಈ ಸಂದರ್ಭದಲ್ಲಿ ಮುಖಂಡ ಪುಟ್ಟನಂಜ, ಶಿವರಾಜ್ ಇತರರು ಹಾಜರಿದ್ದರು.

ಚಾಮರಾಜನಗರ ಕ್ಷೇತ್ರದಲ್ಲಿ ಬಿಜೆಪಿ ಅಲೆ: ಕೋಟೆ ಎಂ.ಶಿವಣ್ಣ



ಚಾಮರಾಜನಗರ, ಫೆ.14– ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಅಲೆಯಿದ್ದು ಈ ಬಾರಿ ಶತಾಯ–ಗತಾಯ ಪಕ್ಷದ ಅಭ್ಯರ್ಥಿ ಗೆಲುವಿಗೆ ಶ್ರಮಿಸಲಾಗುವುದು ಎಂದು ಕ್ಷೇತ್ರದ ನೂತನ ಬಿಜೆಪಿ ಚುನಾವಣಾ ಪ್ರಭಾರಿ ಹಾಗೂ ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ ಹೇಳಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಅವರು, ರಾಜ್ಯದ 224 ವಿಧಾನಸಭಾ ಕ್ಷೇತ್ರಗಳಿಗೆ ಚುನಾವಣಾ ಪ್ರಭಾರಿಗಳನ್ನು ಪಕ್ಷ ನೇಮಕ ಮಾಡಲಾಗಿದ್ದು, ಚಾಮರಾಜನಗರ ವಿಧಾನಸಭಾ ಕ್ಷೇತ್ರಕ್ಕೆ ತಮ್ಮನ್ನು ಚುನಾವಣಾ ಪ್ರಭಾರಿಯಾಗಿ ನೇಮಕ ಮಾಡಿದ್ದಾರೆ ಎಂದರು.

ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಗಟ್ಟಿಯಾಗಿರುವುದರಿಂದ ಹತ್ತಾರು ಮಂದಿ ಆಕಾಂಕ್ಷಿಗಳು ಇದ್ದಾರೆ. ಪಕ್ಷ ಕಮಲದ ಚಿಹ್ನೆಯಡಿಯಲ್ಲಿ ಕ್ಷೇತ್ರದಲ್ಲಿ ಕೆಲಸ ಮಾಡುವಂತೆ ಎಲ್ಲರಿಗೂ ಸೂಚಿಸಿದೆ. ಅದರಂತೆ ಆಕಾಂಕ್ಷಿಗಳೆಲ್ಲ ಕ್ಷೇತ್ರದಲ್ಲಿ ಪಕ್ಷದ ಸಂಘಟನೆಯಲ್ಲಿ ಕೆಲಸ ಮಾಡುತ್ತಿದ್ದಾರೆ. ಪಕ್ಷದ ವರಿಷ್ಠರು ಯಾರಿಗೇ ಟಿಕೆಟ್ ನೀಡಿದರೂ ಅವರ ಪರ ಕೆಲಸ ಮಾಡಬೇಕಾದ್ದು ಎಲ್ಲರ ಕರ್ತವ್ಯವಾಗಿದೆ ಎಂದರು.

ಪಕ್ಷದ ಜಿಲ್ಲಾಧ್ಯಕ್ಷ ನಾರಾಯಣಪ್ರಸಾದ್ ಅಧ್ಯಕ್ಷತೆ ವಹಿಸಿದ್ದರು. ಕಾಡಾ ಅಧ್ಯಕ್ಷ ಜಿ.ನಿಜಗುಣರಾಜು, ಆರ್.ಸುಂದರ್, ವಿಧಾನಪರಿಷತ್ ಮಾಜಿ ಸದಸ್ಯ ಪ್ರೊ.ಕೆ.ಆರ್. ಮಲ್ಲಿಕಾರ್ಜುನಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ನಾಗಶ್ರೀ ಪ್ರತಾಪ್, ಗ್ರಾಮಾಂತರ ಮಂಡಲ ಬಿಜೆಪಿ ಅಧ್ಯಕ್ಷ ಬಸವಣ್ಣ, ಮುಖಂಡ ನೂರೊಂದುಶೆಟ್ಟಿ, ಮಹಾಶಕ್ತಿ ಕೇಂದ್ರ, ಶಕ್ತಿ ಕೇಂದ್ರದ ಅಧ್ಯಕ್ಷರು, ಮುಖಂಡರು ಇತರರು ಭಾಗವಹಿಸಿದ್ದರು.

ಒಂದನೇ ಪುಟದಿಂದ

ಬಲಿ ಪಡೆದ ಹುಲಿ ಸೆರೆ

ಹುಲಿ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. ಇಬ್ಬರ ಬಲಿಯ ನಂತರ ತೀವ್ರ ಕಾರ್ಯಾಚರಣೆ ನಡೆಸಿ ಹುಲಿಯನ್ನು ಸೆರೆ ಹಿಡಿಯಲಾಗಿದೆ. ಆದರೂ ಮುಂಜಾಗ್ರತಾ ಕ್ರಮವಾಗಿ ಇನ್ನೂ ಮೂರ್‍ನಾಲ್ಕು ದಿನಗಳ ಕಾಲ ಕೂಂಬಿಂಗ್ ಮುಂದುವರೆಸಲಾಗುವುದು. ಮನುಷ್ಯರ ಮೇಲೆ ದಾಳಿ ನಡೆದಿರುವ ಸ್ಥಳ, ಹುಲಿ ಸಂಚರಿಸಿರುವ ಪ್ರದೇಶಗಳಲ್ಲಿ ಹೆಚ್ಚಿನ ಶೋಧ ನಡೆಸಬೇಕಿದ್ದು, ಅದರಂತೆ ಕಾರ್ಯಾಚರಣೆ ನಡೆಸಲಾಗುವುದು. ಜನರ ಸುರಕ್ಷತೆ ದೃಷ್ಟಿಯಿಂದ ಕಾಫಿ ತೋಟಗಳಲ್ಲಿ ಕಾರ್ಯಚಟುವಟಿಕೆಯನ್ನು ನಾಲ್ಕೈದು ದಿನ ನಿಷೇಧಿಸಲಾಗಿದೆ. ಇದರಿಂದ ಶೋಧ ಕಾರ್ಯಕ್ಕೂ ಅನುಕೂಲವಾಗಲಿದೆ ಎಂದು ಕೊಡಗು ವೃತ್ತದ ಸಿಸಿಎಫ್ ನಿರಂಜನ್ ಮೂರ್ತಿ ತಿಳಿಸಿದರು.

ಹೆಣ್ಣು ಹುಲಿ ಯಶಸ್ವಿ ಸೆರೆ

ಹುಲಿಯನ್ನು ಗಮನಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಹಿರಿಯ ಅಧಿಕಾರಿಗಳ ಆದೇಶದ ಮೇರೆಗೆ ಇಂದು ಬೆಳಗ್ಗೆ ಸಾಕಾನೆಗಳ ನೆರವಿನೊಂದಿಗೆ ಕಾರ್ಯಾಚರಣೆ ನಡೆಸಿ, ಬೆಳಗ್ಗೆ 11.20ರಲ್ಲಿ ಪೊದೆಯೊಂದರಲ್ಲಿ ಅಡಗಿದ್ದ ಹುಲಿಗೆ ಪಶುವೈದ್ಯ ಡಾ.ರಮೇಶ್ ಅರವಳಿಕೆ ಮದ್ದು ಡಾಟ್ ಮಾಡಿದ್ದಾರೆ. ಪ್ರಜ್ಞೆ ತಪ್ಪಿದ ಕೂಡಲೇ ಬಲೆ ಬಳಸಿ ಪೊದೆಯಿಂದ ಹೊರ ತಂದು ಬಳಿಕ ಬೋನಿನಲ್ಲಿಟ್ಟು ಪ್ರಾಥಮಿಕ ಚಿಕಿತ್ಸೆ ನೀಡಲಾಗಿದೆ. ಇದು ಹೆಣ್ಣು ಹುಲಿಯಾಗಿದ್ದು, 8 ರಿಂದ 9 ವರ್ಷದ್ದು. ಹುಲಿಯ ಬಲ ಮುಂಗಾಲು, ಪಾದ, ಮೈ ಮೇಲೆ ಗಾಯವಾಗಿದೆ. ಅಲ್ಲದೆ, ಒಂದು ಕೋರೆ ಹಲ್ಲು ಮುರಿದಿದೆ ಬೇರೊಂದು ಹುಲಿಯೊಂದಿಗೆ ಕಾದಾಟ ನಡೆಸಿ ಗಂಭೀರವಾಗಿ ಗಾಯಗೊಂಡಿರಬಹುದು ಎಂದು ಶಂಕಿಸಲಾಗಿದೆ. ಹುಲಿಗೆ ತುರ್ತಾಗಿ ಶಸ್ತ್ರಚಿಕಿತ್ಸೆ ಮಾಡಬೇಕಾದ ಅನಿವಾರ್ಯತೆ ಇರುವುದರಿಂದ ಅದನ್ನು ಕೂರ್ಗಳ್ಳಿಯ ಪುನರ್ವಸತಿ ಕೇಂದ್ರಕ್ಕೆ ತಂದು, ಸಂಜೆ ಚಿಕಿತ್ಸೆ ಆರಂಭಿಸಲಾಗಿದೆ.

ಯುವಕನ ಮೇಲೆ ದಾಳಿ ನಡೆಸಿದ್ದ ಹುಲಿಯೇ: ಫೆ.22ರಂದು ನಾಗರಹೊಳೆಯ ಡಿ.ಬಿ.ಕುಪ್ಪೆ ವಲಯ ಕಚೇರಿ ಹಿಂಭಾಗದಲ್ಲೇ ಬಳ್ಳೆ ಹಾಡಿ ನಿವಾಸಿ ಮಂಜು(18) ಎಂಬಾತನ ಮೇಲೆ ದಾಳಿ ಮಾಡಿ ಕೊಂದು ಹಾಕಿದ್ದು ಇದೇ ಹುಲಿ. ಗಾಯಗೊಂಡಿದ್ದರಿಂದ ಬೇಟೆಯಾಡಲು ಸಾಧ್ಯವಾಗದೇ ಹೆಚ್.ಡಿ.ಕೋಟೆ-ಮಾನಂದವಾಡಿ ಮುಖ್ಯರಸ್ತೆಯ ಬಳ್ಳೆ ಹಾಡಿ ಬಳಿ ಜಾನುವಾರುಗಳ ಮೇಲೆ ದಾಳಿ ನಡೆಸುತ್ತಿತ್ತು ಎಂದು ಹೇಳಲಾಗಿದೆ. ಅದೇ ವೇಳೆ ಯುವಕನನ್ನು ಕೊಂದಿರಬಹುದು ಎಂಬ ಶಂಕೆ ವ್ಯಕ್ತವಾಗಿದೆ. ಉಪಟಳ ನೀಡುತ್ತಿದ್ದ ಹುಲಿ ಸೆರೆ ಹಿಡಿಯುವಂತೆ ಬಳ್ಳೆ ಹಾಡಿ ನಿವಾಸಿಗಳು ಪ್ರತಿಭಟನೆ ನಡೆಸಿದ್ದರು. ಈ ಹಿನ್ನೆಲೆಯಲ್ಲಿ ಕಾರ್ಯಾಚರಣೆ ನಡೆಸಿ ಹುಲಿಯನ್ನು ಸೆರೆ ಹಿಡಿಯಲಾಗಿದೆ ಎಂದು ತಿಳಿದು ಬಂದಿದೆ. ಕಾರ್ಯಾಚರಣೆಯಲ್ಲಿ ಡಿಸಿಎಫ್ ಹರ್ಷಕುಮಾರ್, ಎಸಿಎಫ್ ಕೆ.ಎನ್.ರಂಗಸ್ವಾಮಿ, ಪಶುವೈದ್ಯರಾದ ಡಾ.ರಮೇಶ್, ಡಾ.ಮದನ್, ಆರ್‌ಎಫ್‌ಓ ಕೆ.ಎಲ್.ಮಧು, ಹರ್ಷಿತ್, ಸಿದ್ದರಾಜು ಹಾಗೂ ಸಿಬ್ಬಂದಿಗಳು ಪಾಲ್ಗೊಂಡಿದ್ದರು.

ಪೈಪ್‌ನಲ್ಲಿ ಹುಲಿ ಕಳೇಬರ ಪತ್ತೆ

ಇರಲಿಲ್ಲ. ಎರಡು ತಿಂಗಳ ಹಿಂದೆಯಷ್ಟೇ ಗುಬ್ಬಿ ಅರಣ್ಯ ಭಾಗದಲ್ಲಿ ಹುಲಿಯೊಂದನ್ನು ಕಂಡಿದ್ದಾಗಿ ಕೆಲವರು ಹೇಳಿದ್ದರು. ವಿಡಿಯೋವೊಂದನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಟ್ಟು, ಇದೇ ಗುಬ್ಬಿ ಸುತ್ತಮುತ್ತ ಓಡಾಡುತ್ತಿರುವ ಹುಲಿ ಎಂದು ಸಂದೇಶ ಹರಿಬಿಟ್ಟಿದ್ದರು. ಇದನ್ನು ಅರಣ್ಯ ಇಲಾಖೆ ಅಧಿಕಾರಿಗಳು ಅಲ್ಲಗಳೆದು ತುಮಕೂರು ಭಾಗದಲ್ಲಿ ಹುಲಿ ಇಲ್ಲವೇ ಇಲ್ಲ ಎಂದು ಸ್ಪಷ್ಟಪಡಿಸಿದ್ದರು.

ಇಂದು ಬೆಳಗ್ಗೆ ಮುಖ್ಯ ರಸ್ತೆ ಮೋರಿಯಡಿ ಪೈಪ್‌ನಲ್ಲಿ ಹುಲಿ ದೇಹ ಇರುವುದನ್ನು ಕಂಡು ಗಾಬರಿಯಾಗಿದ್ದಾರೆ. ಅರಣ್ಯ ಸಿಬ್ಬಂದಿಗೆ ಮಾಹಿತಿ ನೀಡಿದ್ದು, ಸ್ಥಳಕ್ಕೆ ಬಂದ ಅವರು ಪರಿಶೀಲನೆ ನಡೆಸಿದಾಗ ಹುಲಿ ಮಲಗಿದ ಸ್ಥಿತಿಯಲ್ಲೇ ಸಾವಿಗೀಡಾಗಿರುವುದನ್ನು ಗಮನಿಸಿದ್ದಾರೆ. ಹುಲಿ ಸಂತತಿಯೇ ಇಲ್ಲದ ಸ್ಥಳದಲ್ಲಿ ಹುಲಿ ದೇಹ ಪತ್ತೆಯಾದ ಹಿನ್ನೆಲೆಯಲ್ಲಿ ಇಡೀ ತುಮಕೂರು ಬೆಚ್ಚಿ ಬಿದ್ದಿದೆ. ಹಿರಿಯ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿ ಪರಿಶೀಲಿಸಿದ್ದಾರೆ. ಮರಣೋತ್ತರ ಪರೀಕ್ಷೆ ನಡೆಸಲಾಗಿದೆ. ಈ ಹುಲಿ ಎಲ್ಲಿಂದ ಬಂತು, ಇದರ ಸಾವಿಗೆ ಕಾರಣವೇನು ಎಂದು ತನಿಖೆ ನಡೆಸಲಾಗುತ್ತಿದೆ. ಈ ಹುಲಿ ಮೈಮೇಲಿನ ಪಟ್ಟೆ ಆಧರಿಸಿ ತನಿಖೆ ನಡೆಸಲಾಗುತ್ತಿದೆ. ಇನ್ನೊಂದು ಮೂಲದ ಪ್ರಕಾರ ಈ ಹುಲಿ ವಲಸೆ ಬಂದಿರಬಹುದು. ಹವಾಮಾನ ಹೊಂದಿಕೊಳ್ಳದೇ ಸಾವಿಗೀಡಾಗಿರಬಹುದು ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಸ್ಥಳಕ್ಕೆ ಸಿಎಫ್ ರಮೇಶ್, ಡಿಸಿಎಫ್ ಅನುಮಪ, ಎಸಿಎಫ್ ಮಹೇಶ್, ಆರ್‌ಎಫ್‌ಓ ದುರ್ಗಪ್ಪ ಹಾಗೂ ಇನ್ನಿತರರು ಭೇಟಿ ನೀಡಿದ್ದರು.

ಬರೀ ಸುಳ್ಳೇ ಸುಳ್ಳು...!

ಏನು ಫಲ ಎಂದು ಪ್ರಶ್ನಿಸಿದರು. 2018ರಲ್ಲಿ ಬಿಜೆಪಿ ರಾಜ್ಯದ ಜನರಿಗೆ 600 ಭರವಸೆಗಳನ್ನು ನೀಡಿತ್ತು. ಅದರಲ್ಲಿ ಈವರೆಗೆ 50 ರಿಂದ 60 ಭರವಸೆಗಳನ್ನು ಕೂಡ ಪೂರ್ಣ ಈಡೇರಿಸಿಲ್ಲ. ರಾಜ್ಯಪಾಲರ ಭಾಷಣದಲ್ಲಿ ಬಡವರ, ರೈತರ, ಅವಕಾಶ ವಂಚಿತರ ಧ್ವನಿಯಾಗಿ ಕೆಲಸ ಮಾಡಿದೆ ಎಂದು ಹೇಳಿಸಲಾಗಿದೆ, ವಾಸ್ತವದಲ್ಲಿ ಈ ವರ್ಗದ ಜನರ ಪರವಾಗಿ ಸರ್ಕಾರ ಕೆಲಸ ಮಾಡಿಲ್ಲ ಎಂಬುದು ನನ್ನ ಅನಿಸಿಕೆ.

ರೈತರಿಗೆ ಹಲವು ಭರವಸೆಗಳನ್ನು ನೀಡಿದ್ದರು. ಆದರೆ ಯಾವೊಂದು ಭರವಸೆಯನ್ನು ಈಡೇರಿಸಲಿಲ್ಲ. ಹೀಗಾದರೆ ರೈತರ ಆದಾಯ ದುಪ್ಪಟ್ಟು ಆಗುವುದು ಹೇಗೆ. ಇದನ್ನೇ ನಾನು ಸುಳ್ಳು ಭಾಷಣ ಎಂದು ದೂರಿರುವುದು. ಇದು ಸಂಸದೀಯ ಪದವೂ ಹೌದು ಎಂದು ಸಮರ್ಥಿಸಿಕೊಂಡರು. ರೈತರ ಸಾಲವನ್ನು ಒಂದು ರೂಪಾಯಿ ಕೂಡ ಮನ್ನಾ ಮಾಡುವ ಕೆಲಸ ಮಾಡಿಲ್ಲ. ಹಿಂದೆ ಸಾಲ ಮನ್ನಾ ಮಾಡಿದ್ದು ಸಮ್ಮಿಶ್ರ ಸರ್ಕಾರದ ಅವಧಿಯಲ್ಲಿ. ಅದರಲ್ಲಿ ದಾಖಲೆ ನೀಡದೆ ಉಳಿದುಕೊಂಡ ಕೆಲವು ರೈತರ ಸಾಲ ಮನ್ನಾವನ್ನು ಈ ಸರ್ಕಾರ ಪೂರ್ಣಗೊಳಿಸುವ ಕೆಲಸ ಮಾಡಿದೆ. ಪ್ರಧಾನಿ ನರೇಂದ್ರ ಮೋದಿ ಅವರು 2016ರಲ್ಲಿ ಮುಂದಿನ 6 ವರ್ಷಗಳಲ್ಲಿ ರೈತರ ಆದಾಯವನ್ನು ದುಪ್ಪಟ್ಟು ಮಾಡುತ್ತೇವೆ ಎಂದು ಹೇಳಿದ್ದರು, 2022ನೇ ಇಸವಿಗೆ ಇದು ಆಗಬೇಕಿತ್ತಲ್ವಾ, ಆಗಿದೆಯಾ. ರೈತರ ಸಾಲ ದುಪ್ಪಟ್ಟಾಗಿದೆ, ಆದಾಯವಲ್ಲ ಎಂದು ಸಿದ್ದರಾಮಯ್ಯ ವ್ಯಂಗ್ಯವಾಡಿದರು.

ರಸಗೊಬ್ಬರ ದುಬಾರಿ : ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ರಸಗೊಬ್ಬರಕ್ಕೆ ನೀಡುವ ಸಬ್ಸಿಡಿಯನ್ನು ಸುಮಾರು 50,000 ಕೋಟಿ ರೂ. ಕಡಿಮೆ ಮಾಡಿದ್ದಾರೆ. ನರೇಗಾದಲ್ಲಿ ಕಳೆದ ಬಾರಿಗೂ ಈ ಬಾರಿಗೂ ನೀಡಿರುವ ಅನುದಾನದಲ್ಲಿ 29,000 ಕೋಟಿ ರೂ. ಕಡಿತ ಮಾಡಿದ್ದಾರೆ. 2014ರಲ್ಲಿ 50 ಕೆ.ಜಿ ಡಿಎಪಿ ಚೀಲವೊಂದರ ಬೆಲೆ 450 ರೂ. ಇತ್ತು, ಇಂದು 1,350 ರಿಂದ 1400 ರೂ. ಆಗಿದೆ.

ರೈತರ ಮಕ್ಕಳಿಗೆ ವಿದ್ಯಾರ್ಥಿ ವೇತನ ನೀಡಿದ್ದೇವೆ, ಡೀಸೆಲ್‌ಗೆ ಸಹಾಯಧನ ನೀಡಿದ್ದೇವೆ, ಸಸಿ ವಿತರಣೆ ಮಾಡಿದ್ದೇವೆ, ಗೋಹತ್ಯೆ ನಿಷೇಧ ಕಾಯ್ದೆ ಜಾರಿ ಮಾಡಿದ್ದೇವೆ, ಗೋಶಾಲೆಗಳನ್ನು ತೆರೆದಿದ್ದೇವೆ ಎಂದು ಸರ್ಕಾರ ಹೇಳಿದೆ. ಇವುಗಳ ಪರಿಣಾಮದ ಬಗ್ಗೆ ನಂತರ ಮಾತನಾಡುತ್ತೇನೆ. ಈ ಸರ್ಕಾರ ಶೋಷಿತ ವರ್ಗ, ರೈತರು, ಬಡವರು, ಅವಕಾಶ ವಂಚಿತ ಜನರ ವಿರೋಧಿ ಸರ್ಕಾರ. ಈ ವರ್ಗದ ಜನರ ಪರವಾದ ಸರ್ಕಾರವಲ್ಲ. ಇತ್ತೀಚೆಗೆ ಬೆಂಗಳೂರು ದಕ್ಷಿಣ ಕ್ಷೇತ್ರದ ಸಂಸದರಾದ ತೇಜಸ್ವಿ ಸೂರ್ಯ ಅವರು ರೈತರ ಸಾಲ ಮನ್ನಾ ಮಾಡುವುದರಿಂದ ದೇಶಕ್ಕೆ ಉಪಯೋಗ ಇಲ್ಲ ಎಂದಿದ್ದಾರೆ. ಹಾಗಾದರೆ ಉದ್ಯಮಿಗಳು, ಬಂಡವಾಳಶಾಹಿಗಳ 12 ಲಕ್ಷ ಕೋಟಿಗೂ ಅಧಿಕ ಸಾಲವನ್ನು ಮನ್ನಾ ಮಾಡಿದ್ದಾರಲ್ಲ ಇದು ದೇಶಕ್ಕೆ ಒಳ್ಳೆಯದಾ ಇದು ಬಿಜೆಪಿಯವರಿಗೆ ರೈತರ ಬಗ್ಗೆ ಇರುವ ಧೋರಣೆ. ರೈತರ ಬಗ್ಗೆ ಸರ್ಕಾರದ ಧೋರಣೆ ಬಾಯಲ್ಲಿ ಒಂದು, ಕೃತಿಯಲ್ಲಿ ಒಂದು ಇದೆ, ತರಾಟೆಗೆ ತೆಗೆದುಕೊಂಡರು.

ನಾನು ಮುಖ್ಯಮಂತ್ರಿಯಾಗಿರುವಾಗ ನಮ್ಮ ಪ್ರಣಾಳಿಕೆಯಲ್ಲಿನ 165 ಭರವಸೆಗಳಲ್ಲಿ 158 ಭರವಸೆಗಳನ್ನು ಈಡೇರಿಸಿದ್ದೆ. ಇದರ ಜೊತೆಗೆ ಹೆಚ್ಚುವರಿಯಾಗಿ 30 ಕಾರ್ಯಕ್ರಮಗಳನ್ನು ಜಾರಿ ಮಾಡಿದ್ದೆ. ನಾವು ನುಡಿದಂತೆ ನಡೆದಿದ್ದೇವೆ.

ಬಿಜೆಪಿಯ ರಾಜ್ಯಾಧ್ಯಕ್ಷರಾದ ನಳಿನ್ ಕುಮಾರ್ ಕಟೀಲ್ ಅವರು ಮಂಗಳೂರಿನಲ್ಲಿ ಮಾತನಾಡುವಾಗ ಅಭಿವೃದ್ಧಿ ಬಗ್ಗೆ ಮಾತನಾಡಬೇಡಿ, ಲವ್ ಜಿಹಾದ್, ಹಿಜಾಬ್ ಬಗ್ಗೆ ಮಾತನಾಡಿ ಎಂದಿದ್ದಾರೆ. ಮೊನ್ನೆ ರಾಜ್ಯಕ್ಕೆ ಬಂದಿದ್ದ ಅಮಿತ್ ಶಾ ಅವರು ಅಭಿವೃದ್ಧಿ ಬಗ್ಗೆ ಮಾತನಾಡದೆ, ಅಬ್ಬಕ್ಕ ವರ್ಸಸ್ ಟಿಪ್ಪು ನಡುವಿನ ಚುನಾವಣೆ ಎಂದಿದ್ದಾರೆ. ಇದು ಈ ದೇಶದ ಗೃಹ ಮಂತ್ರಿ ಆಡುವ ಮಾತಾ! ಮಹಾತ್ಮಾ ಗಾಂಧಿ ವರ್ಸಸ್ ಸಾವರ್ಕರ್ ನಡುವಿನ ಚುನಾವಣೆ ಎನ್ನುತ್ತಾರೆ. ಇವೆಲ್ಲ ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದೆಯಾ ಎಂದು ಪ್ರಶ್ನಿಸಿದರು. ಗೋಹತ್ಯೆ ನಿಷೇಧ ಕಾಯ್ದೆ ಇರುವುದರಿಂದ ವಯಸಾಗಿರುವ, ರೋಗ ಬಂದಿರುವ, ಉಳುಮೆ ಮಾಡಲು ಸಾಧ್ಯವಾಗದ ಜಾನುವಾರುಗಳನ್ನು ಯಾರು ಖರೀದಿಸದೆ ಇರುವುದು ರೈತರಿಗೆ ದೊಡ್ಡ ತಲೆ ನೋವಾಗಿದೆ. ಕೋಮುವಾದಿ ಉದ್ದೇಶದೊಂದಿಗೆ ಜಾರಿಗೆ ತಂದಿರುವ ಈ ಕಾಯ್ದೆಯನ್ನು ಮೊದಲು ತೆಗೆದುಹಾಕಬೇಕು ಎಂದು ಒತ್ತಾಯಿಸಿದರು.

ಶುಕ್ರವಾರ ರಾಜ್ಯ ಬಜೆಟ್ ಮಂಡನೆ

ಪ್ರತಿಯೊಬ್ಬರು ಕಡ್ಡಾಯವಾಗಿ ಭಾಗವಹಿಸಬೇಕು ಎಂದು ಮನವಿ ಮಾಡಿದರು. ನಿಗದಿತ ಕಾರ್ಯಕ್ರಮಗಳು ನಿಮ್ಮ ನಿಮ್ಮ ಕ್ಷೇತ್ರಗಳಲ್ಲಿ ಇದ್ದರೆ, ಒಂದು ದಿನದ ಮಟ್ಟಿಗೆ ಮುಂದೂಡಿ, ಕಾರಣ ನೀಡಿ ಗೈರು ಹಾಜರಾಗಬಾರದು. ಇದು ಕೊನೆಯ ಅಧಿವೇಶನ ಆಗಿರುವುದರಿಂದ ಸದಸ್ಯರು ಕಡೇ ಪಕ್ಷ ಈ ಕಾರ್ಯಕ್ರಮಕ್ಕಾದರೂ ಬನ್ನಿ ಎಂದು ಸಲಹೆ ಮಾಡಿದರು. ಇಂದು ಮತ್ತು ನಾಳೆ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಗೆ ಸಮಯ ನಿಗದಿ ಮಾಡಲಾಗಿದೆ. ಫೆ.16ರಂದು ಪ್ರಶ್ನೋತ್ತರ ಅವಧಿ ಮುಗಿದ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯದ ಚರ್ಚೆಗೆ ಮುಖ್ಯಮಂತ್ರಿ ಉತ್ತರ ನೀಡಲಿದ್ದಾರೆ. ಬಜೆಟ್ ಮಂಡನೆಯಾದ ನಂತರ ಫೆ.20, 21, 22ರಂದು ಬಜೆಟ್ ಮೇಲಿನ ಚರ್ಚೆ ನಡೆಯಲಿದೆ. ಫೆ.23ರಂದು ಪ್ರಶ್ನೋತ್ತರ ವೇಳೆ ಬಳಿಕ ಮುಖ್ಯಮಂತ್ರಿ ಬಜೆಟ್ ಮೇಲಿನ ಚರ್ಚೆಗೆ ಉತ್ತರ ನೀಡಲಿದ್ದಾರೆ. ಬಜೆಟ್‌ಗೆ ಅಂಗೀಕಾರ ಪಡೆಯುವ ಪ್ರಕ್ರಿಯೆ ನಡೆಯಲಿದೆ. ಈಗಾಗಲೇ ನಿಗದಿಯಾಗಿರುವಂತೆ ಫೆ.24 ಅಧಿವೇಶನದ ಕೊನೆಯ ದಿನವೆಂದು ಹೇಳಿದರು. ಎಲ್ಲಾ ಸದಸ್ಯರು ಕಲಾಪಕ್ಕೆ ಬರಬೇಕು ಎಂದು ಹೇಳಿದಾಗ ಪ್ರತಿಪಕ್ಷದ ನಾಯಕ ಸಿದ್ದರಾಮಯ್ಯ ಅವರು ಫೆ.21ರಿಂದ ಸದನಕ್ಕೆ ಬರಲಾಗುವುದಿಲ್ಲ. ನೀವು ಅನುಮತಿ ಕೊಟ್ಟರೂ ಸರಿ, ಕೊಡದಿದ್ದರೂ ಸರಿ ನನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ಸ್ಪಷ್ಟಪಡಿಸಿದರು. ನಾಳೆ ಕೆಲವು ಮಸೂದೆಗಳನ್ನು ಮಂಡನೆ ಮಾಡ ಲಾಗುವುದು. ಒಟ್ಟು 7 ವಿಧೇಯಕಗಳಿವೆ. ಇನ್ನೂ ಕೆಲವು ವಿಧೇಯಕ ಬರಬಹುದು ಎಂದು ಕಾನೂನು ಸಚಿವ ಮಾಧುಸ್ವಾಮಿ ತಿಳಿಸಿದ್ದಾರೆ ಎಂದರು.

ಪ್ರಶಸ್ತಿ ಪುರಸ್ಕೃತರಿಗೆ ಮೈಸೂರು ಜಿಲ್ಲಾ ಪತ್ರಕರ್ತರ ಸಂಘದಿಂದ ಅಭಿನಂದನೆ

ದೃಶ್ಯ ಮಾಧ್ಯಮ ಸೇರುವವರು ಮೊದಲು ಎರಡ್ಮೂರು ವರ್ಷ ಪತ್ರಿಕೆಗಳಲ್ಲಿ ಕೆಲಸ ಮಾಡಲಿ; ಸಂಸದ ಪ್ರತಾಪ ಸಿಂಹ ಸಲಹೆ

ಮೈಸೂರು,ಫೆ.14(ಎಂಟಿವೈ)– ಕರ್ನಾಟಕ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಮೈಸೂರಿನ ಪತ್ರಕರ್ತರನ್ನು ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಆತ್ಮೀಯವಾಗಿ ಅಭಿನಂದಿಸಲಾಯಿತು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪುರಸ್ಕೃತರಾದ ದಿ ಹಿಂದೂ ಹಿರಿಯ ವರದಿಗಾರ ಶಂಕರ್ ಬೆನ್ನೂರು, ಪಬ್ಲಿಕ್ ಟಿವಿಯ ಹಿರಿಯ ವರದಿಗಾರ ಕೆ.ಪಿ.ನಾಗರಾಜ್, ಆಂದೋಲನದ ಹಿರಿಯ ಉಪ ಸಂಪಾದಕ ಮುಳ್ಳೂರು ಶಿವಪ್ರಸಾದ್, ವರದಿಗಾರ ರಮೇಶ್ ನಾಯಕ್, ವಿಜಯವಾಣಿಯ ಹಿರಿಯ ಉಪಸಂಪಾದಕ ಮುಳ್ಳೂರು ರಾಜು, ವಿಜಯ ಕರ್ನಾಟಕದ ಛಾಯಾಗ್ರಾಹಕ ನಾಗೇಶ್ ಪಾಣತ್ತಲೆ, ಹುಣಸೂರು ತಾಲೂಕು ವಿಜಯವಾಣಿ ವರದಿಗಾರ ಶಿವಕುಮಾರ್ ವಿ.ರಾವ್, ಉದಯವಾಣಿ ಗ್ರಾಮೀಣ ಸುದ್ದಿ ವಿಭಾಗದ ಮುಖ್ಯಸ್ಥ ಅ.ಮ.ಸುರೇಶ್ ಅವರನ್ನು ಸನ್ಮಾನಿಸಲಾಯಿತು.



ಕಾರ್ಯಕ್ರಮದಲ್ಲಿ ಸಂಸದ ಪ್ರತಾಪ ಸಿಂಹ ಮಾತನಾಡಿ, ವರದಿಗಾರರು ದೃಶ್ಯ ಮಾಧ್ಯಮಗಳಿಗೆ ಸೇರುವ ಮುನ್ನ ಕನಿಷ್ಠ 2–3 ವರ್ಷವಾದರೂ ಮುದ್ರಣ ಮಾಧ್ಯಮದಲ್ಲಿ ಕೆಲಸ ಮಾಡುವ ಅಗತ್ಯವಿದೆ. ಇದರಿಂದ ಪತ್ರಿಕೋದ್ಯಮದ ಗುಣಮಟ್ಟ ಹೆಚ್ಚಾಗಲಿದೆ. ಇಂದು ಟಿವಿ ಮಾಧ್ಯಮದಲ್ಲಿ ಕೆಲಸ ಮಾಡುತ್ತಿರುವ ಬಹು ಮಂದಿಗೆ ಕನ್ನಡ ಭಾಷೆಯ ಮೇಲೆ ಹಿಡಿತವಿಲ್ಲ. ಅವರ ಭಾಷೆ ಸುಧಾರಿಸಬೇಕಾದರೆ ಕನಿಷ್ಠ ನಾಲ್ಕು ವರ್ಷಗಳ ಕಾಲ ಪತ್ರಿಕಾ ಕಚೇರಿಯಲ್ಲಿ ಕೆಲಸ ಮಾಡಬೇಕು. ಅಂತಹವರನ್ನು ಟಿವಿ ಮಾಧ್ಯಮಕ್ಕೆ ಆಯ್ಕೆ ಮಾಡಿದರೆ ಕನ್ನಡ ಪದಗಳನ್ನು ಅಪಭ್ರಂಶ ಮಾಡುವುದು ತಪ್ಪಲಿದೆ. ಪ್ರಸ್ತುತ ದೃಶ್ಯ ಮಾಧ್ಯಮಗಳಲ್ಲಿ ಉನ್ನತ ಸ್ಥಾನದಲ್ಲಿರುವವರೆಲ್ಲರೂ ಮುದ್ರಣ ಮಾಧ್ಯಮದಿಂದಲೇ ಬಂದವರಾಗಿದ್ದಾರೆ. ಪತ್ರಿಕೋದ್ಯಮದ ಅನುಭವವನ್ನು ಪಡೆದರೆ ಇನ್ನೂ ಉತ್ತಮ ಪತ್ರಕರ್ತರು ಹೊರಹೊಮ್ಮಲು ಸಾಧ್ಯ. ಮೈಸೂರಿನ ಹತ್ತು ಮಂದಿ ಹಿರಿಯ ಪತ್ರಕರ್ತರಿಗೆ ಮಾಧ್ಯಮ ಅಕಾಡೆಮಿ ಪ್ರಶಸ್ತಿ ಲಭ್ಯವಾಗಿರುವುದು ಹೆಮ್ಮೆಪಡುವ ಸಂಗತಿ ಎಂದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ. ರವಿಕುಮಾರ್ ಮಾತನಾಡಿ, ಮೈಸೂರು ಜಿಲ್ಲೆಯ ಹತ್ತು ಮಂದಿಗೆ ಈ ಬಾರಿ ಮಾಧ್ಯಮ ಅಕಾಡೆಮಿ ಪ್ರಶಸ್ತಿ ದೊರೆತಿರುವುದು ಸಂತಸದ ಸಂಗತಿ. ಇದರಿಂದಾಗಿ ಸಂಘದ ಘನತೆ ಹೆಚ್ಚಿದಂತಾಗಿದೆ ಎಂದರು.

ಜಿಲ್ಲಾ ಪತ್ರಕರ್ತರ ಸಂಘಕ್ಕೆ ಸುಸಜ್ಜಿತ ಬಡಾವಣೆಯಲ್ಲಿ ನಿವೇಶನ ದೊರೆತಿದೆ. ಚುನಾವಣೆಯ ನೀತಿ ಸಂಹಿತೆ ಜಾರಿಗೆ ಬರುವ ಮೊದಲೇ ಮುಖ್ಯಮಂತ್ರಿಗಳನ್ನು ಆಹ್ವಾನಿಸಿ, ಕಟ್ಟಡ ನಿರ್ಮಾಣಕ್ಕೆ ಉದ್ದೇಶಿಸಿದ್ದು, ಸಂಸದರು ಇದಕ್ಕೆ ನೆರವಾಗಬೇಕೆಂದು ಮನವಿ ಮಾಡಿದರು.

ಸನ್ಮಾನ ಸ್ವೀಕರಿಸಿದ ಅ.ಮ. ಸುರೇಶ್ ಮಾತನಾಡಿ, ಅಕಾಡೆಮಿ ಪ್ರಶಸ್ತಿಗಿಂತ ನನ್ನೂರಿನಲ್ಲಿ ಅಭಿನಂದನೆ ಸ್ವೀಕರಿಸಿದ್ದಕ್ಕೆ ಹೆಚ್ಚು ಸಂತೋಷವಾಗಿದೆ. ಇತ್ತೀಚಿನ ವರ್ಷಗಳಲ್ಲಿ ವಿಶ್ವವಿದ್ಯಾಲಯಗಳಿಂದ ಪದವಿ ಪಡೆದು ಪತ್ರಿಕಾ ಕಚೇರಿಗಳಿಗೆ ಕೆಲಸಕ್ಕಾಗಿ ಬರುವ ಮಕ್ಕಳಿಗೆ ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ ವ್ಯಾಕರಣ ದೋಷವಿಲ್ಲದೆ ವಾಕ್ಯ ರಚನೆ ಮಾಡಲು ಬರುವುದಿಲ್ಲ. ಭಾಷಾ ಜ್ಞಾನವೂ ಇರುವುದಿಲ್ಲ. ಇಂತಹ ಪರಿಸ್ಥಿತಿಗೆ ಯಾರು ಹೊಣೆ ಎಂದು ನಾವೆಲ್ಲ ಪ್ರಶ್ನಿಸಿಕೊಳ್ಳುವ ಅಗತ್ಯವಿದೆ ಎಂದರು.

ಕಾರ್ಯಕ್ರಮದಲ್ಲಿ ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕೆಯ ಹಿರಿಯ ವರದಿಗಾರ ಕೆ.ಶಿವಕುಮಾರ್, ಮೈಸೂರು ದಿಗಂತ ಪತ್ರಿಕೆ ಸಂಪಾದಕ ಘನವಂತ ಮಳಲಿ ನಟರಾಜ್ ಕುಮಾರ್ ಪ್ರಶಸ್ತಿ ಪುರಸ್ಕೃತರನ್ನು ಗೌರವಿಸಿದರು. ಈ ಸಂದರ್ಭ ಮಾಧ್ಯಮ ಅಕಾಡೆಮಿ ಸದಸ್ಯರಾದ ಸಿ.ಕೆ.ಮಹೇಂದ್ರ, ಕೂಡ್ಲಿ ಗುರುರಾಜ್, ಜಿಲ್ಲಾ ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಸುಬ್ರಹ್ಮಣ್ಯ, ಉಪಾಧ್ಯಕ್ಷ ಎಂ.ಎಸ್. ಬಸವಣ್ಣ, ಗ್ರಾಮಾಂತರ ಉಪಾಧ್ಯಕ್ಷ ಧರ್ಮಾಪುರ ನಾರಾಯಣ್, ಕಾರ್ಯದರ್ಶಿ ರಂಗಸ್ವಾಮಿ, ಎಂ.ಮಹದೇವ್, ರಾಜ್ಯ ಸಮಿತಿ ಸದಸ್ಯ ರಾಘವೇಂದ್ರ ಹಾಗೂ ಇನ್ನಿತರರು ಪಾಲ್ಗೊಂಡಿದ್ದರು.


> ರಾಜಕಾರಣಿಗಳು ಮತ್ತು ಅಧಿಕಾರಿಗಳು ಕಮಿಷನ್‌ನಿಂದ ದೂರ ಉಳಿದರೆ ಅಭಿವೃದ್ಧಿಯ ಜೊತೆಗೆ ಗುತ್ತಿಗೆದಾರರು ಗುಣಮಟ್ಟದ ಕೆಲಸ ಮಾಡಲು ಅನುಕೂಲವಾಗಲಿದೆ. ಮೈಸೂರಿನ ರಿಂಗ್ ರಸ್ತೆಗೆ ದೀಪಗಳ ಅಳವಡಿಕೆಗೆ 3 ಕೋಟಿ ರೂ.ಅನುದಾನ ಬಿಡುಗಡೆಗೆ ನನ್ನದಲ್ಲದ ಈ ಕೆಲಸಕ್ಕೆ ನಾನೇ ಮುತುವರ್ಜಿ ವಹಿಸಬೇಕಾಯಿತು. ಗುತ್ತಿಗೆದಾರರಿಗೆ ಹಣ ಬಿಡುಗಡೆ ಮಾಡಿಸುವ ಭರವಸೆ ನೀಡಿದ ಮೇಲೆ ರಿಂಗ್ ರಸ್ತೆಯಲ್ಲಿ ಬೆಳಕು ಬಂದಿದೆ. ಈಗ 10 ಕೋಟಿ ರೂ.ಬಿಡುಗಡೆಯಾಗಬೇಕು. ಇದಕ್ಕೂ ನಾನೇ ಮುಡಾ ಅಧಿಕಾರಿಗಳ ಜೊತೆ ಚರ್ಚಿಸಬೇಕಿದೆ. ರಿಂಗ್ ರಸ್ತೆಯಲ್ಲಿ ಕಸ ಬಿಸಾಡುವ ವಿಚಾರದಲ್ಲಿ ಜನರು ಪ್ರಜ್ಞಾವಂತಿಕೆ ಬೆಳೆಸಿಕೊಳ್ಳಬೇಕು.
> – ಪ್ರತಾಪಸಿಂಹ, ಸಂಸದ



ಮೈಸೂರು ಕರ್ಜನ್ ಪಾರ್ಕ್‌ನ ಜಿಲ್ಲಾ ಹಾಪ್‌ಕಾಮ್ಸ್ ವತಿಯಿಂದ ನೂತನ ಸಾವಯವ ಹಣ್ಣು, ತರಕಾರಿ, ಸಿರಿಧಾನ್ಯಗಳು ಹಾಗೂ ತೆಂಗಿನಕಾಯಿ ಪೌಡರ್ ಮಾರಾಟ ಮಳಿಗೆಯನ್ನು ಮೈಸೂರು ನಗರದ ಟಿ.ಕೆ.ಬಡಾವಣೆಯ ಪಾರ್ಕ್ ಆವರಣದಲ್ಲಿ ಮಂಗಳವಾರ ಹಾಪ್‌ಕಾಮ್ಸ್ ಅಧ್ಯಕ್ಷ ಎಂ.ಟಿ.ಅಣ್ಣೇಗೌಡರ ಸಮ್ಮುಖದಲ್ಲಿ ಮೇಯರ್ ಶಿವಕುಮಾರ್ ಉದ್ಘಾಟಿಸಿದರು. ಈ ವೇಳೆ ನಗರಪಾಲಿಕೆ ಸದಸ್ಯ ಗೋಪಿ, ತೋಟಗಾರಿಕೆ ಜಂಟಿ ನಿರ್ದೇಶಕ ನಾಗರಾಜು, ಉಪ ನಿರ್ದೇಶಕ ಕೆ.ರುದ್ರೇಶ್, ಹಾಪ್‌ಕಾಮ್ಸ್‌ನ ಆಡಳಿತ ಮಂಡಳಿ ನಿರ್ದೇಶಕರಾದ ಹೊಸಹುಂಡಿ ರಘು, ಹೆಚ್.ಎಸ್.ಚಂದ್ರೇಗೌಡ, ಎಸ್.ಆರ್.ಶ್ರೀನಿವಾಸ್ ಹಾಗೂ ವ್ಯವಸ್ಥಾಪಕ ನಿರ್ದೇಶಕ ಎಂ.ಆರ್.ಚೇತನ್ ಉಪಸ್ಥಿತರಿದ್ದರು.

ಪೊಲೀಸ್ ಭದ್ರತೆಯಲ್ಲಿ ಮೈಸೂರು ತಲುಪಿದ ವಿವಿ ಪ್ಯಾಟ್‌ಗಳು

ಮೈಸೂರು, ಫೆ. 14(ಆರ್‌ಕೆ)– 2023ರ ವಿಧಾನಸಭೆ ಸಾರ್ವತ್ರಿಕ ಚುನಾವಣೆಗಾಗಿ ಹೈದರಾಬಾದ್‌ನಿಂದ ತರಲಾದ ವಿವಿ ಪ್ಯಾಟ್‌ಗಳು ಇಂದು ರಾತ್ರಿ ಮೈಸೂರು ತಲುಪಿದವು. ಚುನಾವಣಾ ನೋಡಲ್ ಅಧಿಕಾರಿಯೂ ಆದ ಮುಡಾ ಆಯುಕ್ತ ಜಿ.ಟಿ. ದಿನೇಶ್‌ಕುಮಾರ್ ನೇತೃತ್ವದಲ್ಲಿ ಪೊಲೀಸ್ ಭದ್ರತೆಯೊಂದಿಗೆ 7 ಟ್ರಕ್‌ಗಳಲ್ಲಿ 4274 ವೋಟರ್ ವೆರಿಫಿಕೇಷನ್ ಪೇಪರ್ ಆಡಿಟ್ ಟ್ರಯಲ್ (ವಿವಿ ಪ್ಯಾಟ್)ಗಳು ಮಂಗಳವಾರ ರಾತ್ರಿ 11 ಗಂಟೆಗೆ ಮೈಸೂರು ತಲುಪಿದವು.



ಹೈದರಾಬಾದ್‌ನ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ ಲಿಮಿಟೆಡ್ (ಇಸಿಐಎಲ್) ಕಂಪನಿಯಿಂದ ಒಂದರಲ್ಲಿ 610 ರಂತೆ 7 ಟ್ರಕ್‌ಗಳಲ್ಲಿ ವಿವಿ ಪ್ಯಾಟ್‌ಗಳನ್ನು ತಂದು ಮೈಸೂರಿನ ಸಿದ್ಧಾರ್ಥನಗರದ ಜಿಲ್ಲಾ ಕಚೇರಿಗಳ ಸಂಕೀರ್ಣದ ಆವರಣದಲ್ಲಿ ನಿರ್ಮಿಸಿರುವ ಇವಿಎಂ ಉಗ್ರಾಣದಲ್ಲಿ ಸುರಕ್ಷಿತವಾಗಿರಿಸಲಾಗಿದೆ.

ಮುಂಜಾನೆ 5 ಗಂಟೆಗೆ ಹೈದರಾಬಾದ್‌ನಿಂದ ವಿವಿ ಪ್ಯಾಟ್‌ನೊಂದಿಗೆ ಹೊರಟ ಟ್ರಕ್‌ಗಳಲ್ಲಿ ಓರ್ವ ಶಸ್ತ್ರಸಜ್ಜಿತ ಪೊಲೀಸ್ ಹಾಗೂ ರೆವಿನ್ಯೂ ಇಲಾಖೆಯ ಓರ್ವ ಸಿಬ್ಬಂದಿ ನಿಯೋಜಿಸಲಾಗಿತ್ತು. ನೋಡಲ್ ಅಧಿಕಾರಿ ಜಿ.ಟಿ. ದಿನೇಶ್‌ಕುಮಾರ್ ಸಹ ಟ್ರಕ್‌ಗಳೊಂದಿಗೆ ಕಾರಿನಲ್ಲಿ ಮೈಸೂರಿಗೆ ಆಗಮಿಸಿದರು.

ಸಿಸಿ ಕ್ಯಾಮರಾ ಸರ್ವೇಲೆನ್ಸ್ ಹಾಗೂ ದಿನದ 24 ಗಂಟೆಯೂ ಪೊಲೀಸ್ ಭದ್ರತೆಯಲ್ಲಿ ಇವಿಎಂ ಮತ್ತು ವಿವಿ ಪ್ಯಾಟ್‌ಗಳನ್ನು ಇರಿಸಲಾಗಿದೆ. ಚುನಾವಣೆ ಮುಗಿದು ಮತ ಎಣಿಕೆ ನಂತರ ಫಲಿತಾಂಶ ಪ್ರಕಟವಾಗುವವರೆಗೂ ಇವಿಎಂಗಳಿಗೆ ಭಾರೀ ಭದ್ರತೆ ಒದಗಿಸಲಾಗುತ್ತದೆ.

ಫೆ.20ರಿಂದ ಕೆಆರ್, ಚೆಲುವಾಂಬ, ಪಿಕೆಟಿಬಿ ಆಸ್ಪತ್ರೆ ಕಟ್ಟಡಗಳ ದುರಸ್ತಿ ಕಾಮಗಾರಿ ಆರಂಭ

89 ಕೋಟಿ ರೂ. ವೆಚ್ಚದಲ್ಲಿ 14 ವಿವಿಧ ಕೆಲಸಗಳಿಗೆ ಗ್ಲೋಬಲ್ ಟೆಂಡರ್ ಮೂಲಕ ಕಾರ್ಯಾದೇಶ

ಮೈಸೂರು, ಫೆ.14(ಆರ್‌ಕೆ)– ಶಿಥಿಲಾವಸ್ಥೆಯಲ್ಲಿರುವ ಮೈಸೂರಿನ ಕೆಆರ್, ಚೆಲುವಾಂಬ, ಪಿಕೆಟಿಬಿ ಆಸ್ಪತ್ರೆ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ (MMCRI) ಪಾರಂಪರಿಕ ಕಟ್ಟಡಗಳ ರಿಪೇರಿ ಕೆಲಸ ಫೆ.20ರಿಂದ ಆರಂಭವಾಗಲಿದೆ.



ಶತಮಾನೋತ್ಸವದ ಹೊಸ್ತಿಲಲ್ಲಿರುವ ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಧೀನದಲ್ಲಿರುವ ಬೋಧನಾ ಆಸ್ಪತ್ರೆಗಳಾದ ಕೃಷ್ಣರಾಜೇಂದ್ರ ಆಸ್ಪತ್ರೆ, ಚೆಲುವಾಂಬ ಆಸ್ಪತ್ರೆ, ಕೆಆರ್‌ಎಸ್ ರಸ್ತೆಯಲ್ಲಿರುವ ಪಿಕೆಟಿಬಿ ಆಸ್ಪತ್ರೆ, ಎಂಎಂಸಿ ಅಂಡ್ ಆರ್‌ಐ ಆಡಳಿತ ವಿಭಾಗದ ಪಾರಂಪರಿಕ ಕಟ್ಟಡಗಳು ಪುರುಷರ ವಿದ್ಯಾರ್ಥಿನಿಲಯದ ಕಟ್ಟಡಗಳನ್ನು ದುರಸ್ತಿಯೊಂದಿಗೆ ಆಧುನೀಕರಣಗೊಳಿಸಲು ಸರ್ಕಾರವು 89 ಕೋಟಿ ರೂ. ಅನುದಾನ ಮಂಜೂರು ಮಾಡಿತ್ತು.

ಕರ್ನಾಟಕ ಆರೋಗ್ಯ ಪದ್ಧತಿ ಅಭಿವೃದ್ಧಿ ಮತ್ತು ಸುಧಾರಣಾ ಯೋಜನೆ (KHSD&R)ಯ ಇಂಜಿನಿಯರಿಂಗ್ ವಿಭಾಗದಿಂದ ವಿವಿಧ 14 ಕಾಮಗಾರಿಗಳಿಗಾಗಿ ಗ್ಲೋಬಲ್ ಟೆಂಡರ್ ಮೂಲಕ ಕಟ್ಟಡಗಳ ರಿಪೇರಿ ಕೈಗೊಳ್ಳಲು ಗುತ್ತಿಗೆದಾರರಿಗೆ ಕಾರ್ಯಾದೇಶ ನೀಡಲಾಗಿದ್ದು, ಫೆ.20 ರಿಂದ ಕೆಲಸ ಆರಂಭಿಸಲಾಗುವುದು ಎಂದು ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಡೀನ್ ಅಂಡ್ ಡೈರೆಕ್ಟರ್ ಡಾ.ದಾಕ್ಷಾಯಿಣಿ ತಿಳಿಸಿದ್ದಾರೆ.

ಕಾಮಗಾರಿ ಹಿನ್ನೆಲೆಯಲ್ಲಿ ಕೆ.ಆರ್. ಆಸ್ಪತ್ರೆಯ ಸೂಪರ್ ಸ್ಪೆಷಾಲಿಟಿ ಓಪಿಡಿ ಮತ್ತು ಓಟಿಯನ್ನು ಕೆಆರ್‌ಎಸ್ ರಸ್ತೆಯಲ್ಲಿರುವ ಪಿಕೆಟಿಬಿ ಆಸ್ಪತ್ರೆ ಆವರಣದ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಮತ್ತು ಟ್ರಾಮಾ ಕೇರ್ ಸೆಂಟರ್‌ಗೆ ಸ್ಥಳಾಂತರಿಸಲಾಗುತ್ತಿದೆ. ಅಲ್ಲಿ ಫೆ.27 ರಿಂದ ಸೇವೆಗಳು ಆರಂಭವಾಗಲಿವೆ ಎಂದು ಅವರು ತಿಳಿಸಿದರು.

ಇದರಿಂದ ಕೆಆರ್ ಆಸ್ಪತ್ರೆ ವೈದ್ಯಕೀಯ ಸೇವೆಗಳು ಸಂಪೂರ್ಣ ಸ್ಥಗಿತಗೊಳ್ಳುವುದಿಲ್ಲ. ಬದಲಾಗಿ ಓಪಿಡಿ, ಐಪಿಡಿ, ಓಟಿ ಗಳ ಒತ್ತಡ ಕಡಿಮೆಯಾಗಲಿದೆ. ಏಕಕಾಲದಲ್ಲಿ ಎಲ್ಲಾ 14 ಕಾಮಗಾರಿಗಳೂ ಆರಂಭವಾಗುವುದರಿಂದ ನಿಗದಿತ ಅವಧಿಯೊಳಗಾಗಿ ದುರಸ್ತಿ ಕೆಲಸ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಡಾ. ದಾಕ್ಷಾಯಿಣಿ ತಿಳಿಸಿದರು.

'ಕ್ಯಾಂಪಸ್ ಕ್ರಾಂತಿ' ಫೆ.24ಕ್ಕೆ ತೆರೆಗೆ

ಮೈಸೂರು,ಫೆ.14(ಎಂಟಿವೈ)– ಕಾಲೇಜು ಕ್ಯಾಂಪಸ್‌ನಲ್ಲಿ ವಿದ್ಯಾರ್ಥಿಗಳ ಸುತ್ತ ನಡೆಯುವ ಕಥಾ ಹಂದರವುಳ್ಳ 'ಕ್ಯಾಂಪಸ್ ಕ್ರಾಂತಿ' ಚಲನಚಿತ್ರ ಫೆ. 24 ರಂದು ತೆರೆ ಕಾಣುತ್ತಿದೆ ಎಂದು ನಿರ್ದೇಶಕ ಸಂತೋಷ್‌ಕುಮಾರ್ ತಿಳಿಸಿದ್ದಾರೆ. ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಕ್ಯಾಂಪಸ್ ಕ್ರಾಂತಿ' ಚಲನಚಿತ್ರ ಕಾಲೇಜು ಆವರಣದಲ್ಲಿ ನಡೆಯುವ ಚಟುವಟಿಕೆಯನ್ನು ಒಳಗೊಂಡಿರುತ್ತದೆ. ನಾಯಕ ನಟನಾಗಿ ಆರ್ಯ, ನಾಯಕಿಯಾಗಿ ಇಶಾನಾ ನಟಿಸಿದ್ದಾರೆ. ಇನ್ನಿತರ ಪ್ರಮುಖ ನಟ, ನಟಿಯರೂ ತಾರಾಗಣದಲ್ಲಿದ್ದು, ಕಾಲೇಜು ಹುಡುಗರೆಲ್ಲ ಸೇರಿ ಮಾಡುವ ಹೊಸ ಕ್ರಾಂತಿ ಎಳೆಯ ಸುತ್ತ ಚಲನಚಿತ್ರ ಓಡುತ್ತದೆ. ಇದರಲ್ಲಿ ಹಾಸ್ಯ, ಉತ್ತಮ ಹಾಡು, ಹೊಡೆದಾಟದ ದೃಶ್ಯವೂ ಇದೆ. ಕನ್ನಡ ಚಲನಚಿತ್ರ ರಂಗದ ಅಭಿಮಾನಿಗಳು ಬೆಂಬಲ ನೀಡಬೇಕೆಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಚಿತ್ರ ತಂಡದ ಆರ್ಯ, ಇಶಾನಾ, ರಣವೀರ್, ಚೇತನ್ ಇನ್ನಿತರರು ಇದ್ದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮೈಸೂರು,ಫೆ.14– ಮೈಸೂರು ಸೌತ್ ವಿದ್ಯುತ್ ವಿತರಣಾ ಕೇಂದ್ರದಲ್ಲಿ ತ್ರೈಮಾಸಿಕ ಅವಧಿಯ ನಿರ್ವಹಣಾ ಕಾಮಗಾರಿಯನ್ನು ಹಮ್ಮಿಕೊಂಡಿರುವುದರಿಂದ ಫೆ.16ರ (ಗುರುವಾರ) ಬೆಳಗ್ಗೆ 10 ರಿಂದ ಸಂಜೆ 5.30 ರವರೆಗೆ ನಂಜುಮಳಿಗೆ ವೃತ್ತ, ಲಕ್ಷ್ಮಿಪುರಂ, ವಿದ್ಯಾರಣ್ಯಪುರಂ, ನಾರಾಯಣಶಾಸ್ತ್ರಿ ರಸ್ತೆ, ಕಾಕರವಾಡಿ, ನಾಲಾ ಬೀದಿ, ಹೊಸಕೇರಿ, ಅಗ್ರಹಾರ, ತ್ಯಾಗರಾಜ ರಸ್ತೆ, ಇಂಡಸ್ಟ್ರಿಯಲ್ ಸಬರ್ಬ್, ವಿಶ್ವೇಶ್ವರಯ್ಯನಗರ, ಕೃಷ್ಣಮೂರ್ತಿಪುರಂ, ನಾಚನಹಳ್ಳಿ ಪಾಳ್ಯ, ಗುಂಡೂರಾವ್‌ನಗರ, ಕನಕಗಿರಿ, ಅಶೋಕಪುರಂ, ಸರಸ್ವತಿಪುರಂ, ರೈಲ್ವೆ ಕಾರ್ಯಾಗಾರ, ಮಹದೇವಪುರ, ರಮಾಬಾಯಿನಗರ, ಶ್ರೀರಾಂಪುರ, ಜಯನಗರ, ಕೆ.ಜಿ.ಕೊಪ್ಪಲ್, ಶಿವಪುರ, ದೇವಲಾಪುರ ಹೋಬಳಿ, ಆದಿಚುಂಚನಗಿರಿ ರಸ್ತೆ, ಜೆ.ಪಿ.ನಗರ, ಶ್ರೀರಾಂಪುರ 2ನೇ ಹಂತ, ಪರಸಯ್ಯನಹುಂಡಿ, ಶಿವಪುರ, ಕುವೆಂಪುನಗರ 'ಕೆ' ಬ್ಲಾಕ್, ಅಪೊಲೋ ಆಸ್ಪತ್ರೆಯ ಸುತ್ತ–ಮುತ್ತಲಿನ ಪ್ರದೇಶಗಳು, ಗೊರೂರು ಗ್ರಾಮ, ಕಳಲವಾಡಿ, ಕೋಟೆಹುಂಡಿ, ಯಡಹಳ್ಳಿ, ರಾಯನಕೆರೆ, ಸರಸ್ವತಿಪುರಂ 1ನೇ ಮುಖ್ಯ ರಸ್ತೆಯಿಂದ 6ನೇ ಮುಖ್ಯರಸ್ತೆ, ಕೆ.ಜಿ.ಕೊಪ್ಪಲು ಹಾಗೂ ಸುತ್ತ–ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ಸರಬರಾಜಿನಲ್ಲಿ ನಿಲುಗಡೆಯಾಗಲಿದೆ ಎಂದು ನರಸಿಂಹರಾಜ ಮೊಹಲ್ಲಾ ವಿಭಾಗದ ಸೆಸ್ಕಾಂ ಪ್ರಕಟಣೆ ತಿಳಿಸಿದ್ದಾರೆ.

ಕೆಳ ಸಮುದಾಯಗಳು ಶೈಕ್ಷಣಿಕ, ಆರ್ಥಿಕವಾಗಿ ಪ್ರಗತಿ ಸಾಧಿಸಬೇಕು

ಶ್ರೀ ಸವಿತಾ ಮಹರ್ಷಿ ಜಯಂತಿ ಉದ್ಘಾಟಿಸಿ ಎಲ್.ನಾಗೇಂದ್ರ ಅಭಿಮತ

ಮೈಸೂರು, ಫೆ.14– ವೃತ್ತಿ ಜೊತೆಗೆ ಸಮಾಜದ ಅಭಿವೃದ್ಧಿಗಾಗಿ ಶಿಕ್ಷಣ ಬೇಕು. ಯಾವುದೇ ಸಮಾಜದ ಅಭಿವೃದ್ಧಿಗೆ ಶಿಕ್ಷಣ ಬಹಳ ಮುಖ್ಯ ಎಂದು ಶಾಸಕ ಎಲ್. ನಾಗೇಂದ್ರ ತಿಳಿಸಿದರು.



ಜಿಲ್ಲಾಡಳಿತ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಗರದ ಕರ್ನಾಟಕ ಕಲಾಮಂದಿರದಲ್ಲಿ ಹಮ್ಮಿಕೊಂಡಿದ್ದ ಶ್ರೀ ಸವಿತಾ ಮಹರ್ಷಿ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಯಾವುದೇ ರೀತಿ ಕೀಳರಿಮೆ ಬೇಡ. ಪ್ರತಿನಿತ್ಯ ನಿಮ್ಮ ವೃತ್ತಿ ಸಮಾಜಕ್ಕೆ ಸೇರಲು ಇತರೆ ಸಮುದಾಯದವರು ಕಾಯುತ್ತಿದ್ದಾರೆ. ಸಂವಿಧಾನದ ಸವಲತ್ತುಗಳನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ನೀವು ಕಾರ್ಯೋನ್ಮುಖರಾಗಬೇಕು. ಸರ್ಕಾರದ ಸವಲತ್ತುಗಳನ್ನು ಪಡೆದುಕೊಳ್ಳುವ ನಿಟ್ಟಿನಲ್ಲಿ ಜಾಗೃತರಾಗಬೇಕು ಎಂದರು.

ಎಲ್ಲ ಸಮಾಜದಲ್ಲೂ ಬಡವರಿದ್ದಾರೆ. ವೃತ್ತಿ ಬಗ್ಗೆ ಗೌರವ ಇರಲಿ. ಮನುಷ್ಯನ ಆಚಾರ–ವಿಚಾರಗಳಿಂದ ಸಮಾಜದ ಏಳಿಗೆಗೆ ಶ್ರಮಿಸಬೇಕು. ಮುಂದಿನ ಪೀಳಿಗೆಗಳಿಗೂ ನಮ್ಮ ಸಂದೇಶ ಸಾಗಬೇಕು. ಕೆಳ ಸಮುದಾಯಗಳು ಶೈಕ್ಷಣಿಕವಾಗಿ ಹಾಗೂ ಆರ್ಥಿಕವಾಗಿ ಮೇಲ್ಪಂಕ್ತಿಗೆ ಬರಬೇಕು ಎಂದು ತಿಳಿಸಿದರು.

ಕಾರ್ಯಕ್ರಮದ ಸಾನ್ನಿಧ್ಯ ವಹಿಸಿದ್ದ ವಿಜಯನಗರ ಸುದರ್ಶನಾರಸಿಂಹ ಕ್ಷೇತ್ರದ ಪೀಠಾಧಿಪತಿಗಳಾದ ನಾಡೋಜ ಡಾ. ಭಾಷ್ಯಂ ಸ್ವಾಮೀಜಿ ಮಾತನಾಡಿ, ಸಮುದಾಯದ ಜನರಿಗೆ ಸವಿತಾ ಮಹರ್ಷಿ ತತ್ವಗಳ ಮಹತ್ವ ತಿಳಿಯಬೇಕು ಎಂದರು.

ಮನಸ್ಸಿನ ಕಲ್ಮಶವನ್ನು ಹೋಗಲಾಡಿಸಿ ಮಾನವನ ಉಜ್ಜೀವನಕ್ಕಾಗಿ ಹಾಗೂ ಸಮಾನತೆಗಾಗಿ ಜನ್ಮ ತಾಳಿದವರು ಸವಿತಾ ಮಹರ್ಷಿಗಳು. ಸವಿತಾ ಸಮಾಜದ ಉತ್ಕೃಷ್ಟತೆಯನ್ನು ಅಳೆಯಲು ಸಾಧ್ಯವಿಲ್ಲ. ಸ್ವತಃ ಕುವೆಂಪುರವರು ಸವಿತಾ ಸಮಾಜಕ್ಕೆ ತಲೆಬಾಗಬೇಕು ಎಂದು ಹೇಳಿದ್ದಾರೆ. ಇದು ಸಾಧಾರಣ ಸಮಾಜವಲ್ಲ, ಪರಮಾತ್ಮನ ಸಾಕ್ಷಾತ್ಕಾರ ಇರುವವರು ಮಾತ್ರ ಮಹರ್ಷಿಗಳಾಗಿ, ಋಷಿಮುನಿಗಳಾಗಿ ಜನಿಸುತ್ತಾರೆ ಎಂದು ಅಭಿಪ್ರಾಯಪಟ್ಟರು.

ಉರಿಲಿಂಗ ಪೆದ್ದಿ ಮಠದ ಶ್ರೀ ಜ್ಞಾನಪ್ರಕಾಶ ಸ್ವಾಮೀಜಿ ಮಾತನಾಡಿ, ಭಾರತ ದೇಶ ಆದರ್ಶಗಳ ತವರು. ಸವಿತಾ ಸಮಾಜ ಸ್ವಾಭಿಮಾನದ ಸಂಕೇತ. ಕರ್ತವ್ಯ ಪ್ರಜ್ಞೆ ಮೆರೆದ ಸಮಾಜವಿದು. ಪವಿತ್ರವಾದ ವೇದಗಳಲ್ಲಿ ಸಾಮವೇದದ ಕರ್ತೃ ಸವಿತಾ ಮಹರ್ಷಿಗಳು ಎಂದು ತಿಳಿಸಿದರು.

ನೆನಪುಗಳಿಲ್ಲದ ಸಮಾಜ ಕನಸುಗಳನ್ನು ಕಟ್ಟಲು ಸಾಧ್ಯವಿಲ್ಲ. ಸ್ವಾರ್ಥದ ಕತ್ತರಿಗಳಾಗುವ ಬದಲು ಎಲ್ಲರನ್ನೂ ಒಗ್ಗೂಡಿಸುವ ಸ್ವಾಭಿಮಾನದ ಸೂಜಿ ಆಗಬೇಕು. ಸವಿತಾ ಸಮಾಜ ಬಹಳ ಇತಿಹಾಸವುಳ್ಳ ಶ್ರೇಷ್ಠ ಸಮಾಜವಾಗಿದೆ. ಸವಿತಾ ಮಹರ್ಷಿಗಳ ಆದರ್ಶವನ್ನು ಸಮುದಾಯದಲ್ಲಿ ಕೊಂಡೊಯ್ಯಬೇಕು.

ಆರ್ಥಿಕವಾಗಿ ಸಬಲರಾಗದಿದ್ದರೆ ಸಮಾಜ ಮುಖಿ ಕೆಲಸಗಳನ್ನು ಮಾಡಲು ಸಾಧ್ಯವಿಲ್ಲ. ಸಾಮಾಜಿಕವಾಗಿ, ಆರ್ಥಿಕವಾಗಿ ಭದ್ರತೆ ಮುಖ್ಯ. ಈ ಸಮಾಜ ಇಂದಿಗೂ ಶೈಕ್ಷಣಿಕವಾಗಿ, ಉದ್ಯೋಗ ಕ್ಷೇತ್ರದಲ್ಲಿ ಹಾಗೂ ರಾಜಕಾರಣದಲ್ಲಿ ಹಿಂದುಳಿದಿದೆ. ಕಟ್ಟ ಕಡೆಯ ಸಮುದಾಯಗಳು ದೇಶದ ತುತ್ತ ತುದಿಗೆ ಏರಬೇಕೆಂಬುದೇ ಸಂವಿಧಾನದ ಉದ್ದೇಶ ಎಂದರು.

ಆನೆ ಆನೆಯನ್ನು ಕೊಲ್ಲುವುದಿಲ್ಲ, ನರಿ ನರಿಯನ್ನು ಕೊಲ್ಲುವುದಿಲ್ಲ ಆದರೆ ಮನುಷ್ಯ ಮನುಷ್ಯನನ್ನು ಕೊಲ್ಲುತ್ತಾನೆ. ಈ ರೀತಿಯ ಕಲ್ಮಶಗಳನ್ನು ತೊರೆಯಬೇಕು. ಮಾನವತೆ, ಪ್ರೀತಿ ಹಾಗೂ ಸೌಹಾರ್ದತೆ ಇಲ್ಲದ ಮನುಷ್ಯ ಪರಿಪೂರ್ಣನಾಗುವುದಿಲ್ಲ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ಮಹಾನಗರ ಪಾಲಿಕೆಯ ಮೇಯರ್ ಶಿವಕುಮಾರ್, ಉಪಮೇಯರ್ ಡಾ. ಜಿ.ರೂಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ. ಎಮ್.ಡಿ. ಸುದರ್ಶನ್, ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಜಾಗೃತಿ ವೇದಿಕೆಯ ರಾಜ್ಯಾಧ್ಯಕ್ಷ ಶಿವರಾಂ, ಮೈಸೂರು ಬಣ್ಣ ಮತ್ತು ಅರಗು ಕಾರ್ಖಾನೆಯ ಅಧ್ಯಕ್ಷ ರಘು ಕೌಟಿಲ್ಯ, ಸವಿತಾ ಸಮಾಜದ ರಾಜ್ಯಾಧ್ಯಕ್ಷ ಸಂಪತ್ ಕುಮಾರ್ ಮತ್ತು ಜಿಲ್ಲಾ ಹಾಗೂ ತಾಲೂಕು ಮಟ್ಟದ ಸವಿತಾ ಸಮಾಜದ ಮುಖಂಡರು ಉಪಸ್ಥಿತರಿದ್ದರು.

ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆ ಸಮಾವೇಶ ಯಶಸ್ವಿಗೊಳಿಸಿ

ಪೂರ್ವಭಾವಿ ಸಭೆಯಲ್ಲಿ ಕಾರ್ಯಕರ್ತರಿಗೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಕರೆ



ನಂಜನಗೂಡು, ಫೆ.14– ನಗರದ ವಿದ್ಯಾವರ್ಧಕ ಶಾಲಾ ಮೈದಾನದಲ್ಲಿ ಫೆ.20ರಂದು ಸಂಜೆ 5 ಗಂಟೆಗೆ ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆ ಸಮಾವೇಶ ನಡೆಯಲಿದ್ದು, ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಿ ಕ್ಷೇತ್ರದಲ್ಲಿ ಬಲ ಪ್ರದರ್ಶನ ಮಾಡಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಕರೆ ನೀಡಿದರು.

ತಾಲೂಕಿನ ಸಿಂಧುವಳ್ಳಿ ಗ್ರಾಮದ ಸಂತಾನ ಗಣಪತಿ ಕಲ್ಯಾಣ ಮಂಟಪದಲ್ಲಿ ನಡೆದ ಪೂರ್ವಭಾವಿ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಈಗಾಗಲೇ ಜಿಲ್ಲೆಯಲ್ಲಿ ಪ್ರಜಾಧ್ವನಿ ಯಾತ್ರೆ ಯಶಸ್ವಿಗೊಂಡಿದೆ. ಈಗ ಕ್ಷೇತ್ರವಾರು ಪ್ರವಾಸ ಪ್ರಾರಂಭವಾಗಿದೆ. ಬಿಜೆಪಿ ಸರ್ಕಾರದ ಆಡಳಿತ ವೈಫಲ್ಯ, ಮಿತಿಮೀರಿದ ಭ್ರಷ್ಟಾಚಾರದಿಂದಾಗಿ ಜನ ಬೇಸತ್ತಿದ್ದು, ರಾಜ್ಯಾದ್ಯಂತ ಕಾಂಗ್ರೆಸ್ ಪ್ರಜಾಧ್ವನಿ ಯಾತ್ರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಸೇರುತ್ತಿದ್ದಾರೆ. ಮೈಸೂರಲ್ಲಿ ಕಳೆದ 20 ವರ್ಷಗಳಿಂದ ನಮ್ಮ ಪಕ್ಷದ ಶಾಸಕರಿಲ್ಲ. ಆದರೂ 10 ಸಾವಿರಕ್ಕಿಂತಲೂ ಹೆಚ್ಚಿನ ಜನರು ಸೇರಿದ್ದರು. ಹೀಗೆ ಎಲ್ಲೆಡೆ ಕಾಂಗ್ರೆಸ್ ಪರ ಅಲೆಯಿದೆ. ಚುನಾವಣಾ ವರ್ಷವಾದ್ದರಿಂದಾಗಿ ಎಲ್ಲೆಡೆ ಬಲಾಬಲ ಪ್ರದರ್ಶನವಾಗುತ್ತಿದೆ. ಮುಖಂಡರು ಹೆಚ್ಚಿನ ಜವಾಬ್ದಾರಿ ತೆಗೆದುಕೊಂಡು ಹೆಚ್ಚಿನ ಜನರನ್ನು ಕರೆತರುವ ಮೂಲಕ ಯಶಸ್ವಿಗೊಳಿಸಬೇಕು ಎಂದರು.

ಸ್ಥಳೀಯ ಶಾಸಕರ ವಿರೋಧಿ ಅಲೆಯಿದೆ: ಕ್ಷೇತ್ರದಲ್ಲಿ ಸ್ಥಳೀಯ ಶಾಸಕರ ವಿರೋಧಿ ಅಲೆ ಎದ್ದು ಕಾಣುತ್ತಿದೆ. ಆದ್ದರಿಂದ ಶೇ.100 ರಷ್ಟು ನಂಜನಗೂಡಿನಲ್ಲಿ ಕಾಂಗ್ರೆಸ್ ಗೆಲ್ಲುವ ಅವಕಾಶವಿದೆ. ಇದನ್ನು ಸದುಪಯೋಗಪಡಿಸಿಕೊಂಡು ಭಿನ್ನಾಭಿಪ್ರಾಯ ಬದಿಗೊತ್ತಿ ಪಕ್ಷ ಸಂಘಟಿಸಿ ಬಿಜೆಪಿ ಸೋಲಿಸುವುದು ನಮ್ಮ ಗುರಿಯಾಗಬೇಕು. ಆ ಮೂಲಕ ಸ್ಥಳೀಯ ಶಾಸಕರ ವೈಫಲ್ಯಗಳನ್ನು ಜನರಿಗೆ ತಿಳಿಸಿ ಚುನಾವಣೆಗೆ ಸಜ್ಜಾಗಬೇಕು ಎಂದು ಕರೆ ನೀಡಿದರು.

ಕೇಂದ್ರ ಬಜೆಟ್‌ನಲ್ಲಿ ನರೇಗಾ ಯೋಜನೆಗೆ 90 ಸಾವಿರ ಕೋಟಿ ಮೀಸಲಿಡಲಾಗುತ್ತಿತ್ತು. ಆದರೆ ಈ ಬಾರಿ ಬಜೆಟ್‌ನಲ್ಲಿ 30 ಸಾವಿರ ಕೋಟಿ ಕಡಿತಗೊಳಿಸಲಾಗಿದ್ದು, ಆಹಾರ ಭದ್ರತಾ ಯೋಜನೆಯಡಿ ಅಕ್ಕಿ, ಗೋಧಿಯನ್ನು 10 ರಿಂದ 5 ಕೆಜಿಗೆ ಇಳಿಕೆ ಮಾಡಿ ರೈತರ ಸಬ್ಸಿಡಿ ಕಡಿತಗೊಳಿಸಲಾಗಿದೆ. ರೈತರ, ಬಡವರ ಪರ ಯಾವುದೇ ಯೋಜನೆ ರೂಪಿಸಲು ಮುಂದಾಗಿಲ್ಲ. ರಾಜ್ಯದ ಬಿಜೆಪಿ ಪ್ರಭಾವಿ ನಾಯಕರು ಮತ ಕೇಳಲು ಆಗುತ್ತಿಲ್ಲ. ಆದ್ದರಿಂದಲೇ ಪ್ರವಾಹ ಸಂದರ್ಭ ತಿರುಗಿ ನೋಡದ ಪ್ರಧಾನಿ ಮೋದಿ ಚುನಾವಣೆ ದೃಷ್ಟಿಯಿಂದ ರಾಜ್ಯಕ್ಕೆ ಪದೇ ಪದೇ ಬರುತ್ತಿದ್ದಾರೆ. ಇದು ಚುನಾವಣೆ ತಂತ್ರಗಾರಿಕೆ ಎಂದು ಟೀಕಾಪ್ರಹಾರ ನಡೆಸಿದರು.

ಮಾಜಿ ಶಾಸಕ ಕಳಲೆ ಕೇಶವಮೂರ್ತಿ ಮಾತನಾಡಿ, ಅಂದು ಪ್ರಜಾಧ್ವನಿ ಯಾತ್ರೆ ತಿ.ನರಸೀಪುರ, ವರುಣಾ ಕ್ಷೇತ್ರ ಮುಗಿಸಿ ನಗರದ ಡಿ.ದೇವರಾಜ ಅರಸು ಸೇತುವೆ ಮೂಲಕ ಕ್ಷೇತ್ರ ಪ್ರವೇಶಿಸಲಿದ್ದು, ಅಲ್ಲಿಂದ ಬೈಕ್ ರ್‍ಯಾಲಿ ಮೂಲಕ ನಗರದ ವಿದ್ಯಾವರ್ಧಕ ಶಾಲಾ ಮೈದಾನಕ್ಕೆ ಕರೆತರಲಾಗುವುದು. ಕಾರ್ಯಕರ್ತರು ಪ್ರತಿಬೂತ್‌ನಿಂದ ಕನಿಷ್ಠ 50 ಜನರನ್ನು ಕರೆತರಬೇಕು. ಆ ಮೂಲಕ ಗ್ರಾಮೀಣ ಭಾಗದಿಂದ 10 ಮತ್ತು ನಗರದಿಂದ 6 ಸಾವಿರ ಸೇರಿದಂತೆ 16 ಸಾವಿರಕ್ಕೂ ಹೆಚ್ಚಿನ ಜನರನ್ನು ಸೇರಿಸುವ ನಿರೀಕ್ಷೆಯಿದೆ ಎಂದರು.

ಕಾರ್ಯಕ್ರಮದಲ್ಲಿ ವಿಧಾನಸಭಾ ಉಸ್ತುವಾರಿಗಳಾದ ಶ್ರೀಕಂಠು, ಸೋಮೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ. ಮಹೇಶ್, ಸಿ.ಎಂ.ಶಂಕರ್, ಶ್ರೀಕಂಠನಾಯಕ, ವಾಲ್ಮೀಕಿ ನಿಗಮದ ಮಾಜಿ ಅಧ್ಯಕ್ಷ ಹೆಚ್.ಸಿ.ಬಸವರಾಜು, ಜಿಪಂ ಮಾಜಿ ಸದಸ್ಯರಾದ ಲತಾ, ಕೆ.ಮಾರುತಿ, ಮಹದೇವಯ್ಯ, ಎಪಿಎಂಸಿ ಮಾಜಿ ಅಧ್ಯಕ್ಷರಾದ ಮುದ್ದುಮಾದಶೆಟ್ಟಿ, ಎಂ.ಮಾದಪ್ಪ, ನಗರಸಭಾ ಸದಸ್ಯರಾದ ಗಂಗಾಧರ್, ಶ್ರೀಕಂಠಸ್ವಾಮಿ, ಪ್ರದೀಪ್, ಎಸ್.ಪಿ.ಮಹೇಶ್, ತಾಪಂ ಮಾಜಿ ಅಧ್ಯಕ್ಷ ನಾಗೇಶರಾಜ್, ಮುಖಂಡರಾದ ನಾಗರಾಜಯ್ಯ, ಶ್ರೀನಿವಾಸಮೂರ್ತಿ, ವಿಜಯಕುಮಾರ್, ಕುಳ್ಳಯ್ಯ, ರಾಜು, ರಾಜೇಶ್, ನಾಗರಾಜು, ಪ್ರದೀಪ್, ಶಂಕರಪ್ಪ, ನಂದಕುಮಾರ್ ಇನ್ನಿತರರಿದ್ದರು.

> ಕೆಲವರು ಕ್ಷೇತ್ರದಲ್ಲಿ ಗೊಂದಲ ಸೃಷ್ಟಿಸುವ ಉದ್ದೇಶದಿಂದ ಟಿಕೆಟ್ ನಮಗೆ ನಿಶ್ಚಿತವಾಗಿದೆ ಎಂದು ಪಟಾಕಿ ಸಿಡಿಸಿ, ಸಿಹಿ ಹಂಚುತ್ತಿದ್ದಾರೆ. ಈ ಬಗ್ಗೆ ಕಾರ್ಯಕರ್ತರು ತಲೆಕೆಡಿಸಿಕೊಳ್ಳಬೇಡಿ. ಈಗಾಗಲೇ ಎಐಸಿಸಿ, ಕೆಪಿಸಿಸಿ ಎಲ್ಲೆಡೆ ಸರ್ವೆ ನಡೆಸಿ ವೀಕ್ಷಕರನ್ನು ನೇಮಿಸಿ ಜನಾಭಿಪ್ರಾಯ ಸಂಗ್ರಹಿಸಿದೆ. ಅಲ್ಲದೆ ನಲ್ವರು ಸಂಸದರು, ಅಧ್ಯಕ್ಷರನ್ನು ಒಳಗೊಂಡ ಸ್ಕ್ರೀನಿಂಗ್ ಸಮಿತಿಯಲ್ಲಿ 3 ಗಂಟೆಗಳಿಗೂ ಹೆಚ್ಚು ಕಾಲ ಚರ್ಚೆ ನಡೆಸಿ 48 ಕ್ಷೇತ್ರಗಳ ಬಗ್ಗೆ ನಿಖರ ಮಾಹಿತಿ ನೀಡಿದ್ದೇನೆ. ನಿಯಮಾವಳಿ ಪ್ರಕಾರ ಪರಿಶ್ರಮ ಅಭ್ಯರ್ಥಿ ಆಯ್ಕೆ ಮಾಡಲಿದ್ದು, ಕಾರ್ಯಕರ್ತರು ಪಕ್ಷ ಸಂಘಟನೆಯಲ್ಲಿ ತೊಡಗಿ. ಫೆ.21ರ ನಂತರ ಕ್ಷೇತ್ರದ ಪ್ರತಿ ಬೂತ್‌ಗೆ ಭೇಟಿ ನೀಡಿ ಸದಸ್ಯತ್ವ, ಗುರುತಿನ ಚೀಟಿ, ಪಕ್ಷದ ಪ್ರಣಾಳಿಕೆ, ಪಕ್ಷದ ಸಾಧನೆ ಜನರಿಗೆ ತಿಳಿಸುವ ಕೆಲಸ ಮಾಡೋಣ.
> –ಆರ್.ಧ್ರುವನಾರಾಯಣ್, ಕೆಪಿಸಿಸಿ ಕಾರ್ಯಾಧ್ಯಕ್ಷ.



ಹೆಚ್.ಡಿ.ಕೋಟೆ ತಾಲೂಕಿನ ನಂಜನಾಯಕನಹಳ್ಳಿ ಗ್ರಾಮದಲ್ಲಿ ಮೈಮುಲ್ ವತಿಯಿಂದ ನಡೆದ ಕಹಾಮ ಸಂಜೀವಿನಿ ಹೈನುಗಾರಿಕೆ ಮೂಲಕ ಗ್ರಾಮೀಣ ಮಹಿಳೆಯರ ಸಾಮಾಜಿಕ ಆರ್ಥಿಕಾಭಿವೃದ್ಧಿ ಯೋಜನೆ ಅರಿವು ಕಾರ್ಯಕ್ರಮ ಹಾಗೂ ರಾಸು ನಿರ್ವಹಣಾ ಶಿಬಿರವನ್ನು ಮೈಮುಲ್ ನಿರ್ದೇಶಕ ಹಿರೇಗೌಡ ಉದ್ಘಾಟಿಸಿದರು. ಗ್ರಾಮದ ಡೈರಿ ಅಧ್ಯಕ್ಷೆ ಮಹದೇವಮ್ಮ, ಉಪಾಧ್ಯಕ್ಷೆ ಸೌಮ್ಯ, ಮೈಮುಲ್ ಸಹಾಯಕ ವ್ಯವಸ್ಥಾಪಕ ಡಾ.ಉಷಾ ಪ್ರಭುಶಂಕರ್, ನಿರ್ದೇಶಕಿ ದ್ರಾಕ್ಷಾಯಿಣಿ ಸೇರಿದಂತೆ ಇನ್ನಿತರರಿದ್ದರು.




ಹುಣಸೂರಿನ ಶ್ರೀಮೈಲಾರಲಿಂಗೇಶ್ವರ ಸೇವಾ ಟ್ರಸ್ಟ್‌ನಿಂದ ನೂತನ ಶ್ರೀಮೈಲಾರಲಿಂಗೇಶ್ವರ ಸ್ವಾಮಿ ದೇವಸ್ಥಾನದ ಪ್ರತಿಷ್ಠಾಪನಾ ಮಹೋತ್ಸವ ನಡೆಯಿತು. ಈ ವೇಳೆ ಶಾಸಕ ಜಿ.ಟಿ. ದೇವೇಗೌಡ, ಹೆಚ್.ಪಿ.ಮಂಜುನಾಥ್ ದೇವರ ದರ್ಶನ ಪಡೆದರು. ಶಿವಾನಂದಪುರಿ ಸ್ವಾಮಿ, ನಟರಾಜ ಸ್ವಾಮೀಜಿ, ಸಾಂಬ ಸದಾಶಿವ ಸ್ವಾಮೀಜಿ, ದೇವಾಲಯ ಟ್ರಸ್ಟ್ ಅಧ್ಯಕ್ಷ ಹೆಚ್.ಕೆ.ವೆಂಕಟೇಶ್, ವಾಸುದೇವ, ಗೌರವಾಧ್ಯಕ್ಷ ಅನಂತ, ಉಪಾಧ್ಯಕ್ಷ ಗಣೇಶ್, ಪ್ರಧಾನ ಕಾರ್ಯದರ್ಶಿ ಅಲೋಕ್, ಖಜಾಂಚಿ ಗಣೇಶ್, ನಿರ್ದೇಶಕರಾದ ಮೈಲಾರಪ್ಪ, ರಾಮೇಗೌಡ, ಪ್ರಕಾಶ್, ಮೋಹನ್ ಕುಮಾರ್, ಮಲ್ಲಿಕಾರ್ಜುನ ಸೇರಿದಂತೆ ಇನ್ನಿತರರಿದ್ದರು.

ಪ್ರಜಾಧ್ವನಿ ಯಾತ್ರೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಿ

ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮನವಿ

ತಿ.ನರಸೀಪುರ, ಫೆ.14– ತಾಲೂಕಿನ ಬನ್ನೂರಿನಲ್ಲಿ ಫೆ.20ರಂದು ನಡೆಯುವ ಪ್ರಜಾಧ್ವನಿ ಯಾತ್ರೆಯಲ್ಲಿ ಕಾರ್ಯಕರ್ತರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಮನವಿ ಮಾಡಿದರು.



ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಪ್ರಜಾಧ್ವನಿ ಯಾತ್ರೆಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಆಗಮಿಸುತ್ತಿದ್ದು, ಸಾವಿರಾರು ಕಾಂಗ್ರೆಸ್ ಕಾರ್ಯಕರ್ತರು ಬೈಕ್ ಜಾಥ ಮೂಲಕ ಸ್ವಾಗತ ಕೋರಲಿದ್ದಾರೆ. ಈ ಬಾರಿಯ ಚುನಾವಣೆಯಲ್ಲಿ ಸುನೀಲ್‌ಬೋಸ್ ಅವರನ್ನು ಶಾಸನ ಸಭೆಗೆ ಕಳುಹಿಸಲು ತಿ.ನರಸೀಪುರದ ಕಾಂಗ್ರೆಸ್ ಕಾರ್ಯಕರ್ತರು ಪಣತೊಡಬೇಕು ಎಂದರು.

ಕಾಂಗ್ರೆಸ್ ಮುಖಂಡ ಸುನೀಲ್ ಬೋಸ್ ಮಾತನಾಡಿ, ಕ್ಷೇತ್ರದಲ್ಲಿ ಮಹದೇವಪ್ಪನವರು ಮಾಡಿದ ಅಭಿವೃದ್ಧಿ ಗಮನಿಸಿ ತಾಲೂಕಿನ ಜನತೆ ಮಹದೇವಪ್ಪರ ಕೈ ಬಲಪಡಿಸಬೇಕು. ಕಾರ್ಯಕರ್ತರು ಪ್ರಜಾಧ್ವನಿ ಸಭೆಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕು. ಈ ಬಾರಿ ಕ್ಷೇತ್ರ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಗೆಲುವು ಶತಸಿದ್ಧ ಎಂದು ಭರವಸೆ ವ್ಯಕ್ತಪಡಿಸಿದರು.

ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಮಾಜಿ ತಾಪಂ ಸದಸ್ಯ ನರಸಿಂಹ ಮಾದನಾಯಕ, ಕೊತ್ತೇಗಾಲ ಗ್ರಾಪಂ ಅಧ್ಯಕ್ಷ ಲಕ್ಷ್ಮಣ, ಬಸವರಾಜು, ದೊಡ್ಡಬಾಗಿಲು ಗ್ರಾಪಂ ಅಧ್ಯಕ್ಷ ಮಹದೇವಸ್ವಾಮಿ, ಶಿವಣ್ಣ, ಸಿದ್ದರಾಜು, ಮಾಡ್ರಹಳ್ಳಿ ಶಿವಮೂರ್ತಿ, ಮಾವನಹಳ್ಳಿ ಮಾದೇಶ, ಕುಕ್ಕೂರು ಗಣೇಶ, ಚಂದ್ರಧರ, ಉಕ್ಕಲಗೆರೆ ಬಸವಣ್ಣ, ರಾಘವೇಂದ್ರ, ಮಾದೇಶ, ಸಿದ್ದನಹುಂಡಿ ನಟರಾಜು, ಸೋಮಣ್ಣ, ಸುರೇಶ, ಹುಣಸೂರು ಬಸವಣ್ಣ, ಸೋಸಲೆ ಮಹದೇವಸ್ವಾಮಿ, ಸೋಸಲೆ ಮಹೇಶ, ಮಹದೇವಪ್ಪ, ರಾಮಲಿಂಗು, ಮಾಜಿ ತಾಪಂ ಅಧ್ಯಕ್ಷ ಹ್ಯಾಕನೂರು ಉಮೇಶ್, ವಿಜಾಪುರ ಶಿವಶಂಕರ, ದೊಡ್ಡನಹುಂಡಿಮೂರ್ತಿ, ಹಿರಿಯೂರು ನವೀನ್, ಚೌಹಳ್ಳಿ ಮಹದೇವಪ್ಪ, ಆದಿಬೆಟ್ಟಹಳ್ಳಿ ಮಂಜುನಾಥ್, ಮಾಜಿ ಪಿಎಸಿಸಿ ಅಧ್ಯಕ್ಷ ಮೂಗೂರು ನಾಗರಾಜು, ಶೇಷಾದ್ರಿ ಇತರರಿದ್ದರು.

ಫೆ.19ಕ್ಕೆ, ದಲಿತ ಕಲಾವಿದರ ಸಂಘ ಉದ್ಘಾಟನೆ



ತಿ.ನರಸೀಪುರ, ಫೆ.14– ತಾಲೂಕಿನಲ್ಲಿ ಹೊಸದಾಗಿ ಅಸ್ತಿತ್ವಕ್ಕೆ ಬಂದಿರುವ ದಲಿತ ಕಲಾವಿದರ ಸಂಘ(ಬಣ ರಹಿತ)ವನ್ನು ಫೆ.19 ರಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್. ಧ್ರುವನಾರಾಯಣ್ ಉದ್ಘಾಟಿಸಲಿದ್ದಾರೆ ಎಂದು ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಚಾಲಕ ಸಿ.ಉಮಾಮಹದೇವ್ ತಿಳಿಸಿದರು.

ಪಟ್ಟಣದ ಅತಿಥಿಗೃಹದಲ್ಲಿ ಮಂಗಳವಾರ ಕಾರ್ಯಕ್ರಮದ ಆಹ್ವಾನ ಪತ್ರಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಅಂದು ಬೆಳಗ್ಗೆ 10 ಗಂಟೆಗೆ ಪಟ್ಟಣದ ಚೌಡಯ್ಯ ವೃತ್ತದಲ್ಲಿ ಪಿಟೀಲು ಚೌಡಯ್ಯನವರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ, ಸಾಂಸ್ಕೃತಿಕ ಮೆರವಣಿಗೆಗೆ ಯುವ ಮುಖಂಡ ಸುನೀಲ್‌ಬೋಸ್, ಚಿತ್ರನಟ ಚೇತನ್ ಅಹಿಂಸಾ ಚಾಲನೆ ನೀಡಲಿದ್ದಾರೆ. ಬಳಿಕ 11 ಗಂಟೆಗೆ ತಾಲೂಕು ಕಚೇರಿ ಆವರಣದಲ್ಲಿರುವ ಅಂಬೇಡ್ಕರ್ ಪುತ್ಥಳಿಗೆ ವೈದ್ಯಾಧಿಕಾರಿ ಡಾ.ರೇವಣ್ಣ ಮಾಲಾರ್ಪಣೆ ಮಾಡಲಿದ್ದಾರೆ ಎಂದರು.

ಪಟ್ಟಣದ ಅಂಬೇಡ್ಕರ್ ಭವನದಲ್ಲಿ 11.30ಕ್ಕೆ ನಡೆಯುವ ಸಮಾರಂಭದಲ್ಲಿ ಡಾ.ಸಿದ್ದಲಿಂಗಶಿವಚಾರ್ಯ ಸ್ವಾಮೀಜಿ, ವಿಶ್ವಮೈತ್ರಿ ಬುದ್ಧ ವಿಹಾರದ ಡಾ.ಕಲ್ಯಾಣಸಿರಿ ಬಂತೇಜಿ ಸಾನಿಧ್ಯ ವಹಿಸಲಿದ್ದಾರೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್ ಆಶಯ ನುಡಿ ಹಾಗೂ ನಾನು ಪ್ರಾಸ್ತಾವಿಕ ಮಾತುಗಳಾಡುವುದಾಗಿ ತಿಳಿಸಿದರು.

ಶಾಸಕ ಅಶ್ವಿನ್ ಕುಮಾರ್ ಅಧ್ಯಕ್ಷತೆ ವಹಿಸಲಿದ್ದು, ಶಾಸಕ ಡಾ.ಯತೀಂದ್ರ ನಾಮಫಲಕ ಅನಾವರಣಗೊಳಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ವಿಧಾನಪರಿಷತ್ ಸದಸ್ಯ ಡಿ. ತಿಮ್ಮಯ್ಯ, ಸಿ.ನರೇಂದ್ರ, ತಾಪಂ ಇಓ ಕೃಷ್ಣ, ತಹಶೀಲ್ದಾರ್ ಗೀತಾ, ಎಸ್.ಎನ್. ಸಿದ್ದಾರ್ಥ, ಡಾ.ಜ್ಞಾನಪ್ರಕಾಶ್, ಪುರಸಭಾಧ್ಯಕ್ಷ ಟಿ.ಎಂ. ನಂಜುಂಡಸ್ವಾಮಿ ಕೆ.ಆರ್.ಆಸ್ಪತ್ರೆ ಅಧೀಕ್ಷಕ ಡಾ.ನಂಜುಂಡಸ್ವಾಮಿ, ಕೆ.ವಜ್ರೇಗೌಡ, ಚಿನ್ನಸ್ವಾಮಿ, ಗಣೇಶ್, ಶ್ರೀಧರ್, ಡಿ.ಆರ್.ಮೂರ್ತಿ ಮತ್ತಿತರರು ಭಾಗವಹಿಸಲಿದ್ದಾರೆ ಎಂದರು.

ಭೇರ್ಯ ಗ್ರಾಪಂಗೆ ಶಿವಣ್ಣ ಉಪಾಧ್ಯಕ್ಷ



ಭೇರ್ಯ, ಫೆ.14– ಸಾಲಿಗ್ರಾಮ ತಾಲೂಕಿನ ಭೇರ್ಯ ಗ್ರಾಪಂ ಉಪಾಧ್ಯಕ್ಷರಾಗಿ ಬಿ.ಬಿ. ಶಿವಣ್ಣ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಈ ಹಿಂದಿನ ಉಪಾಧ್ಯಕ್ಷ ಬಿ.ಕೆ.ಶಿವಕುಮಾರ್ ರಾಜೀನಾಮೆಯಿಂದ ತೆರವಾದ ಸ್ಥಾನಕ್ಕೆ ಬಿ.ಬಿ.ಶಿವಣ್ಣ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಪಶುಸಂಗೋಪನೆ ಇಲಾಖೆ ಸಹಾಯಕ ನಿರ್ದೇಶಕ ಡಾ.ಮಂಜುನಾಥ್ ಪ್ರಕಟಿಸಿದರು. ಪಿಡಿಓ ಕೆ.ಮಂಜುನಾಥ್ ಇದ್ದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ಜ್ಯೋತಿ, ಜಿಪಂ ಮಾಜಿ ಸದಸ್ಯ ಎಂ.ಟಿ.ಕುಮಾರ್, ಗ್ರಾಪಂ ಮಾಜಿ ಅಧ್ಯಕ್ಷ ಶಿವಶಂಕರ್, ಗ್ರಾಪಂ ಸದಸ್ಯರಾದ ಮೊಹಸೀನ್ ತಾಜ್, ತಾಯಮ್ಮ ರೂಪ, ಶಾಂತಮ್ಮ ಬಿ.ಕೆ.ಶಿವಕುಮಾರ್, ಬಿ.ಕೆ.ಕುಮಾರ್, ಮಾಜಿ ಸದಸ್ಯ ಸೋಮು, ಜೆಡಿಎಸ್ ಮುಖಂಡರಾದ ಮಹೇಶ್ ನಾಯಕ, ಆಟೋ ಯೋಗೇಶ್, ಟೈಲರ್ ಹರೀಶ್, ಮುಖಂಡರಾದ ನಾಡಗೌಡ ಕುಮಾರಸ್ವಾಮಿ, ಬೋರಪ್ಪನಾಯಕ, ಸಾದೀಕ್ ಖಾನ್ ಇನ್ನಿತರರು ಶುಭಾಶಯ ಕೋರಿದರು.

ಅನಧಿಕೃತ ತಂಬಾಕು ಬೆಳೆಗಾರರಿಗೆ ತಂಬಾಕು ಮಾರಾಟಕ್ಕೆ ಅವಕಾಶ ನೀಡಿ: ಹೆಚ್‌ಪಿಎಂ ಒತ್ತಾಯ

ಹುಣಸೂರು, ಫೆ.14– ಅನಧಿಕೃತ ತಂಬಾಕು ಬೆಳೆಗಾರರಿಗೆ ತಂಬಾಕು ಮಾರಾಟಕ್ಕೆ ಅವಕಾಶ ನೀಡಬೇಕು ಎಂದು ಶಾಸಕ ಹೆಚ್.ಪಿ. ಮಂಜುನಾಥ್ ಮಂಗಳವಾರ ವಿಧಾನಸಭೆ ಅಧಿವೇಶನದಲ್ಲಿ ಸರ್ಕಾರವನ್ನು ಒತ್ತಾಯಿಸಿದರು.

ಪ್ರಶ್ನೋತ್ತರ ವೇಳೆ ವಿಷಯ ಪ್ರಸ್ತಾಪಿಸಿದ ಅವರು, ಕಳೆದೊಂದು ವಾರದೊಳಗೆ ತಂಬಾಕಿನ ದರ 270 ರೂ.ಗಳಿಂದ 225 ರೂ.ಗಳಿಗೆ ಕುಸಿದಿದೆ. ಇದ್ದಕ್ಕಿದ್ದಂತೆ ದರ ಕುಸಿತ ರೈತರನ್ನು ಕಂಗಾಲಾಗಿಸಿದೆ. ಸರ್ಕಾರ ಕೂಡಲೇ ಮಧ್ಯಪ್ರವೇಶಿಸಿ ದಿಢೀರ್ ದರ ಕುಸಿತಕ್ಕೆ ಕಾರಣವೇನೆಂದು ತನಿಖೆ ನಡೆಸಬೇಕು. ಅಲ್ಲದೇ ಈ ಬಾರಿ 16 ಸಾವಿರ ಕಾರ್ಡ್‌ದಾರರಿಗೆ ಮಾರುಕಟ್ಟೆ ಮುಕ್ತಾಯವಾಗುವ ಹಂತದಲ್ಲೂ ತಂಬಾಕು ಮಾರಾಟಕ್ಕೆ ಅವಕಾಶ ನೀಡಿಲ್ಲ ಏಕೆಂದು ತಿಳಿಯುತ್ತಿಲ್ಲ. ತಂಬಾಕು ಮಂಡಳಿ ಈಸ್ಟ್ ಇಂಡಿಯಾ ಕಂಪನಿಯಂತೆ ಧೋರಣೆ ತಳೆದಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ ಅವರು, ಈ ಭಾಗದ 36 ಸಾವಿರ ರೈತ ಕುಟುಂಬದ ಅಳಿವು ಉಳಿವಿನ ಪ್ರಶ್ನೆಯಾಗಿದ್ದು, ಸರ್ಕಾರ ಕೂಡಲೇ ಮಧ್ಯೆ ಪ್ರವೇಶಿಸಿ ರೈತರ ಬೆಂಬಲಕ್ಕೆ ನಿಲ್ಲಬೇಕೆಂದು ಆಗ್ರಹಿಸಿದರು.




ಶಾಸಕರ ಪ್ರಶ್ನೆಗೆ ಉತ್ತರಿಸಿದ ಸಚಿವ ಮಾಧುಸ್ವಾಮಿ, ತಂಬಾಕು ಮಾರುಕಟ್ಟೆ ಬೋರ್ಡ್ ಹಿಡಿತದಲ್ಲಿದ್ದುದರಿಂದ ಸರ್ಕಾರ ಗಮನ ನೀಡಿರಲಿಲ್ಲ. ಆದರೆ ಇದೀಗ ಶಾಸಕ ಮಂಜುನಾಥ್ ಅಧಿವೇಶನದಲ್ಲಿ ಪ್ರಸ್ತಾಪಿಸಿರುವುದರಿಂದ ಈ ಕೂಡಲೇ ಬೆಲೆ ಕುಸಿತ ಮತ್ತು ಕಾರ್ಡ್‌ದಾರರಿಗೆ ಮಾರಾಟಕ್ಕೆ ಅವಕಾಶ ನೀಡದಿರುವ ಕುರಿತು ತನಿಖೆ ನಡೆಸಿ ವರದಿ ನೀಡಲಾಗುವುದೆಂದರು.

ಜಿಲ್ಲಾಮಂತ್ರಿ ಮತ್ತು ಅಧಿಕಾರಿ ಕಳುಹಿಸಿ: ನಾಳೆ (ಫೆ.15) ಪಿರಿಯಾಪಟ್ಟಣದಲ್ಲಿ ರೈತ ಸಂಘಟನೆಗಳು ದರ ಕುಸಿತದ ವಿರುದ್ಧ ಪ್ರತಿಭಟನೆ ಹಮ್ಮಿಕೊಂಡಿದ್ದು, ಸರ್ಕಾರ ಕೂಡಲೇ ಜಿಲ್ಲಾ ಮಂತ್ರಿಗಳು ಮತ್ತು ಹಿರಿಯ ಐಎಎಸ್ ಅಧಿಕಾರಿಯನ್ನು ಸ್ಥಳಕ್ಕೆ ಕಳುಹಿಸಿ ಉಪಕ್ರಮ ಕೈಗೊಳ್ಳಬೇಕೆಂದು ಮಂಜುನಾಥ್ ಒತ್ತಾಯಿಸಿದಾಗ, ಹಿರಿಯ ಅಧಿಕಾರಿಗಳನ್ನು ಕಳುಹಿಸಲಾಗುವುದು. ರೈತರ ಪರ ಸರ್ಕಾರ ನಿಲುವು ಹೊಂದಿದ್ದು, ಪ್ರತಿಭಟನೆ ಹಿಂಪಡೆಯುವಂತೆ ಸ್ಥಳೀಯ ಶಾಸಕರು ಕ್ರಮವಹಿಸಲು ಸದನದಲ್ಲಿ ಕೋರಿದರು.

ಹುಣಸೂರಿಗೆ ತಾರತಮ್ಯ?: ವಿಧಾನಸಭೆ ಅಧಿವೇಶನದ ಪ್ರಶ್ನೋತ್ತರ ವೇಳೆ ವಿವಿಧ ಶೀರ್ಷಿಕೆಯಡಿ ಹುಣಸೂರು ತಾಲೂಕಿಗೆ 16 ವಿವಿಧ ಯೋಜನೆಯಡಿ ನೀಡಿರುವ ಅನುದಾನದ ಬಗ್ಗೆ ವಿಷಯ ಶಾಸಕ ಮಂಜುನಾಥ್ ಪ್ರಸ್ತಾಪಿಸಿ ಪಿಎಂಜಿಎಸ್‌ವೈ ಯೋಜನೆ ಸೊನ್ನೆ, ಸಿಎಂಜಿಎಸ್‌ವೈ ಯೋಜನೆ ಸೊನ್ನೆ, ರಸ್ತೆ ಟಾಸ್ಕ್ ಪೋರ್ಸ್ ಸೊನ್ನೆ, ಸುವರ್ಣ ಯೋಜನೆ ಸೊನ್ನೆ ಅಲ್ಲದೆ ಮಳೆ ಹಾನಿ ಪರಿಹಾರಕ್ಕೆ ಈ ಬಾರಿ ಕಡಿಮೆ ಅನುದಾನ ನೀಡಿದ್ದಿರಿ. ಆದರೆ ಸರ್ಕಾರವೇ ನೀಡಿರುವ ವರದಿ ಪ್ರಕಾರ ಬೇರೆ ಎಲ್ಲಾ ತಾಲೂಕುಗಳಿಗೆ ಹೆಚ್ಚು ಅನುದಾನ ನೀಡಿದ್ದೀರಿ. ಆದರೆ ಹುಣಸೂರು ತಾಲೂಕಿಗೆ ಏಕೆ ಈ ತಾರತಮ್ಯವೆಂದು ಪ್ರಶ್ನಿಸಿದರು. ಇದಕ್ಕೆ ಲೋಕೋಪಯೋಗಿ ಸಚಿವ ಸಿಸಿ ಪಾಟೀಲ್ ಯಾವುದೇ ಕ್ಷೇತ್ರಗಳಿಗೂ ತಾರತಮ್ಯ ಮಾಡಿಲ್ಲ. ನಿಮ್ಮ ಕ್ಷೇತ್ರಕ್ಕೂ ಅನುದಾನ ನೀಡಿದ್ದೇವೆ ಎಂದು ಸಮಜಾಯಿಷಿ ನೀಡಿದರು.

ಪ್ರತಿಯೊಬ್ಬರೂ ವೈದ್ಯರ ಸೇವೆ ಗುರ್ತಿಸಿ ಪ್ರೋತ್ಸಾಹಿಸಿ

ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಜೆ.ಅರುಣ್ ಕುಮಾರ್



ಕೆ.ಆರ್.ನಗರ, ಫೆ.14– ಎಲ್ಲಿ ವೈದ್ಯರ ಸೇವೆ ಗುರುತಿಸಲಾಗುತ್ತದೆಯೋ ಅಲ್ಲಿ ಮಾನವೀಯತೆಯ ಪ್ರೀತಿ ಇರುತ್ತದೆ. ಈ ಪ್ರೀತಿ ಶಕ್ತಿಯಿಂದ ವೈದ್ಯರು ನಮ್ಮನ್ನು ನೋಡಿಕೊಳ್ಳುತ್ತಾರೆ. ಆದ್ದರಿಂದ, ನಾವು ಅದೇ ಪ್ರೀತಿಯಿಂದ ಕೃತಜ್ಞತೆ ಸಲ್ಲಿಸಿ ಅವರನ್ನು ಪ್ರೋತ್ಸಾಹಿಸುವುದು ನಮ್ಮ ಜವಾಬ್ದಾರಿ ಎಂದು ತಾಲೂಕು ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಜೆ.ಅರುಣ್ ಕುಮಾರ್ ತಿಳಿಸಿದರು.

ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಪ್ರಸೂತಿ ತಜ್ಞರಾಗಿ ಸೇವೆ ಸಲ್ಲಿಸುತ್ತಿರುವ ಡಾ.ಕೆ.ಆರ್.ಚಂದ್ರಕಲಾ ಅವರನ್ನು ಕರ್ನಾಟಕ ರಾಜ್ಯ ಸರ್ಕಾರಿ ವೈದ್ಯಾಧಿಕಾರಿಗಳ ಸಂಘದಿಂದ ದಾವಣಗೆರೆಯಲ್ಲಿ ನಡೆದ ರಾಜ್ಯ ಮಟ್ಟದ ಸಮ್ಮೇಳನದಲ್ಲಿ ವೈದ್ಯಕೀಯ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದನ್ನು ಪುರಸ್ಕರಿಸಿ ವೈದ್ಯಶ್ರೀ ಪ್ರಶಸ್ತಿ ನೀಡಿದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ ಕೆ.ಆರ್.ನಗರ ತಾಲೂಕು ಘಟಕದಿಂದ ಆತ್ಮೀಯವಾಗಿ ಅಭಿನಂದಿಸಿ ಮಾತನಾಡಿದರು.

ದೇಶದ ಅಭ್ಯುದಯ ಮತ್ತು ಆರೋಗ್ಯವಂತ ಸಮಾಜ ನಿರ್ಮಾಣದಲ್ಲಿ ವೈದ್ಯರು ಅತ್ಯಂತ ಮಹತ್ವದ ಪಾತ್ರವಹಿಸುತ್ತಾರೆ. ಇವರನ್ನು ಗೌರವಿಸುವುದು ಸಮಾಜದ ಆದ್ಯ ಕರ್ತವ್ಯ. ವೈದ್ಯೋ ಹರಿ ನಾರಾಯಣ ಎಂಬಂತೆ ವೈದ್ಯರು ರೋಗಿಗಳ ಪಾಲಿಗೆ ದೇವರೇ ಆಗಿರುತ್ತಾರೆ. ಸರ್ಕಾರಿ ಆಸ್ಪತ್ರೆ ಕೇವಲ ಬಡವರಿಗಾಗಿ ಮಾತ್ರವಲ್ಲದೆ, ಶ್ರೀಮಂತರು ಸಹ ಆರೋಗ್ಯ ಪರೀಕ್ಷೆ ಮಾಡಿಸಿಕೊಳ್ಳಬೇಕೆಂಬ ವಾತಾವರಣವನ್ನು ತಾಯಿ ಮತ್ತು ಮಕ್ಕಳ ಆಸ್ಪತ್ರೆ ವೈದ್ಯರು ಸೃಷ್ಟಿಸಿದ್ದಾರೆ. ಇಲ್ಲಿನ ವೈದ್ಯರ ಅವಿರತ ನಿಸ್ವಾರ್ಥ ಸೇವೆ ಅನನ್ಯ ಎಂದರು.

ಇಡೀ ರಾಜ್ಯದಲ್ಲಿ ಸರ್ಕಾರಿ ಹೆರಿಗೆ ಆಸ್ಪತ್ರೆಗೆ ಶ್ರೀಮಂತರು ಹಾಗೂ ಸರ್ಕಾರಿ ಹಿರಿಯ ನೌಕರರು ತಮ್ಮ ಕುಟುಂಬದ ಮಹಿಳೆ ಹಾಗೂ ಮಕ್ಕಳನ್ನು ಕರೆದುಕೊಂಡು ಬಂದು ಚಿಕಿತ್ಸೆ ಕೊಡಿಸಿಲ್ಲ. ಆದರೆ ಕೆ.ಆರ್.ನಗರದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ನ್ಯಾಯಾಧೀಶರು ಸೇರಿದಂತೆ ಶ್ರೀಮಂತ ಮನೆ ಮಕ್ಕಳು ಹೆರಿಗೆಗೆ ದಾಖಲಾಗಿ ಸುಗಮವಾಗಿ ಹೆರಿಗೆ ಮಾಡಿಸಿಕೊಂಡಿದ್ದಾರೆ ಎಂದರು.

ಪ್ರಸೂತಿ ತಜ್ಞೆ ಡಾ.ಕೆ.ಆರ್.ಚಂದ್ರಕಲಾ ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಬಂದ ಮೇಲೆ ಪ್ರತಿ ತಿಂಗಳು ಮುನ್ನೂರಕ್ಕೂ ಹೆಚ್ಚು ಗರ್ಭಿಣಿಯರು ಹೆರಿಗೆಗಾಗಿ ದಾಖಲಾಗಿ ನಂತರ ಸುಗಮವಾಗಿ ಹೆರಿಗೆಯಾಗಿ ತಾಯಿ ಮತ್ತು ಮಗು ಆರೋಗ್ಯವಾಗಿ ಮನೆಗೆ ತೆರಳುತ್ತಿದ್ದಾರೆ. ಅಕ್ಕಪಕ್ಕದ ತಾಲೂಕುಗಳಿಂದ ಹೆರಿಗೆಗಾಗಿ ಗರ್ಭಿಣಿಯರು ಬರುತ್ತಿದ್ದಾರೆ. ಮೈಸೂರಿನ ಪ್ರಸಿದ್ಧ ಚೆಲುವಾಂಬ ಹೆರಿಗೆ ಆಸ್ಪತ್ರೆಯಲ್ಲಿ ತಿಂಗಳಿಗೆ 600 ಹೆರಿಗೆ ಮಾಡಲಾಗುತ್ತಿದೆ. ಇದನ್ನೆಲ್ಲಾ ಪರಿಗಣಿಸಿರುವ ಶಾಸಕ ಸಾ.ರಾ.ಮಹೇಶ್ 4 ಕೋಟಿ ವೆಚ್ಚದಲ್ಲಿ ಮೇಲಂತಸ್ತಿನ ಕಟ್ಟಡ ನಿರ್ಮಾಣ ಮಾಡಲಿದ್ದಾರೆ ಎಂದು ತಿಳಿಸಿದರು.

ವೈದ್ಯರ ಹಾಗೂ ಸಿಬ್ಬಂದಿಗಳ ಪ್ರಾಮಾಣಿಕ ಸೇವೆಯಿಂದ ಇಂದು ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆ ರಾಜ್ಯದಲ್ಲಿ ಮೊದಲ ಸ್ಥಾನ ಪಡೆದಿದೆ ಎಂದರು.

ತಾಲೂಕು ಆರೋಗ್ಯಾಧಿಕಾರಿ ಡಾ.ಕೆ.ಆರ್. ಮಹೇಂದ್ರಪ್ಪ, ತಜ್ಞ ವೈದ್ಯ ಡಾ.ಶಿವಶಂಕರ್, ತಾಸ ರಾಜ್ಯ ಪರಿಷತ್ ಸದಸ್ಯ ಕೆ.ವಿ.ರಮೇಶ್, ನಿರ್ದೇಶಕರಾದ ಎಸ್.ಡಿ.ಲತಾ, ಶಶಿಕಿರಣ್, ಕೆ.ಪಿ.ಆನಂದ್, ಶುಶ್ರೂಷಣಾಧಿಕಾರಿಗಳಾದ, ಕೆ.ವಿ.ರೇಖಾ, ವತ್ಸಲ, ತ್ರಿಪುರಾಂಬ, ಗೀತಾ, ವಸಂತ್, ಲೀಲಾವತಿ, ಪುಟ್ಟರಾಜು, ಸುಮನ್, ಆಶಾ ಕಾರ್ಯಕರ್ತೆ ಕೆ.ಎಸ್.ಹೇಮಲತಾ ಇದ್ದರು.

ವಿಜೃಂಭಣೆಯ ತೋಟಗೇರಮ್ಮ ಜಾತ್ರೆ



ತಿ.ನರಸೀಪುರ, ಫೆ.14– ಕೊರೊನಾ ಹಿನ್ನೆಲೆಯಲ್ಲಿ ಕಳೆದೆರಡು ವರ್ಷಗಳಿಂದ ಸರಳವಾಗಿ ನಡೆದಿದ್ದ ತೋಟಗೇರಮ್ಮ ಜಾತ್ರೆ ಮಂಗಳವಾರ ಸಂಭ್ರಮ ಸಡಗರದಿಂದ ನಡೆಯಿತು.

ಪಟ್ಟಣದ ತಲಕಾಡು ರಸ್ತೆಯಲ್ಲಿರುವ ಕುರುಬ ಸಮುದಾಯದ ನಿವೇಶನದಲ್ಲಿ ಇಂದು ಉತ್ಸವ ಮೂರ್ತಿಯನ್ನು ಕಪಿಲ ನದಿಯಿಂದ ಮೆರವಣಿಗೆಯಲ್ಲಿ ತಂದು ಪೂಜೆ ನಡೆಸಲಾಯಿತು. ಪಟ್ಟಣದ ಕಡ್ಡೆ ರಂಗಮನ ಬೀದಿಯಿಂದ ತಂಬಿಟ್ಟಿನಾರತಿ ಮೆರವಣಿಗೆ ಮೂಲಕ ಹೊತ್ತು ತಂದ ಇಟ್ಟು ಹಣ್ಣು ಮುರಿದು, ಕಾಯಿ ಒಡೆದು ಗಂಧದಕಡ್ಡಿ ಹಚ್ಚಿ ಸಾವಿರಾರು ಹೆಂಗಳೆಯರು ಮತ್ತು ಪುರುಷರು ಭಕ್ತಿಭಾವದಿಂದ ಪೂಜೆ ನೆರವೇರಿದರು.

ಎಂ. ರಾಜೇಶ್‌ಗೆ ಪಿಎಚ್.ಡಿ ಪದವಿ



ಮೈಸೂರು, ಫೆ.14– ಡಾ. ಕೆ.ಸೌಭಾಗ್ಯವತಿ ಅವರ ಮಾರ್ಗದರ್ಶನದಲ್ಲಿ ಎಂ. ರಾಜೇಶ ಅವರು ಜಾನಪದ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿಶ್ವವಿದ್ಯಾನಿಲಯ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.



ಇತ್ತೀಚೆಗೆ ಹುಟ್ಟುಹಬ್ಬ ಆಚರಿಸಿಕೊಂಡ ಶಾಸಕ ಅನಿಲ್ ಚಿಕ್ಕಮಾದು ಅವರನ್ನು ಸರಗೂರು ಕಟ್ಟಡ ಕಾರ್ಮಿಕರ ಸಂಘದ ಅಧ್ಯಕ್ಷ ಶಿವರಾಜು, ಸೋಮೇಶ್ ನಾಯಕ, ಸಿದ್ದರಾಜು, ಕಾರಯ್ಯಶೆಟ್ಟಿ, ಕಾರ್ತಿಕ್, ಗೋಪಾಲ್, ಸುರೇಶ್, ಮಹೇಶ್, ಅಭಿ, ಗಿರೀಶ್, ರಾಜೇಶ್ ಸೇರಿದಂತೆ ಇನ್ನಿತರರು ಅಭಿನಂದಿಸಿದರು.

ಮಾರಾಟಾಧಿಕಾರಿ (ಸರ್ಕಾರ)

ಸಹಕಾರ ಸಂಘಗಳ ಸಹಾಯಕ ನಿಬಂಧಕರ ಕಛೇರಿ, ಮೈಸೂರು ಉಪವಿಭಾಗ, ಮೈಸೂರು ಹಾಗೂ ಮಾರಾಟಾಧಿಕಾರಿಗಳು

ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು

ಮುಡಾ ಕಛೇರಿ ಆವರಣ, ಜೆ.ಎಲ್.ಬಿ ರಸ್ತೆ, ಮೈಸೂರು.
ದೂರವಾಣಿ: 2424246
ಮೊಬೈಲ್ ಸಂಖ್ಯೆ: 9880875242, 9663859200

ಸ್ಥಿರ ಸ್ವತ್ತುಗಳ ಬಹಿರಂಗ ಹರಾಜು ಪ್ರಕಟಣೆ

ಈ ಮೂಲಕ ಸಮಸ್ತ ಮಹಾಜನಗಳಿಗೂ ತಿಳಿಯಪಡಿಸುವುದೇನೆಂದರೆ, ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ ಲಿ., ಮೈಸೂರು ಈ ಸಂಘದ ಕೆಳಕಂಡ ಸದಸ್ಯರು ಸದರಿ ಸಂಘದಿಂದ ಸಾಲ ಪಡೆದು, ಸಾಲ ಮರುಪಾವತಿ ಮಾಡದೇ ಸಾಲವು ಸುಸ್ತಿಯಾದ ಕಾರಣ ಕರ್ನಾಟಕ ಸಹಕಾರ ಸಂಘಗಳ ಕಾನೂನು ಮತ್ತು ಕಾಯಿದೆಯನ್ವಯ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಇವರ ನ್ಯಾಯಾಲಯದಲ್ಲಿ ದಾವಾ ಡಿಕ್ರಿ ಪಡೆಯಲಾಗಿದ್ದು, ಹಾಗೂ ಅಮಲ್ಜಾರಿ ಅರ್ಜಿಯನ್ನು ನ್ಯಾಯಾಲಯದಿಂದ ಪಡೆಯಲಾಗಿದೆ.

ಅದರಂತೆ ಬಾಕಿ ಇರುವ ಸಾಲದ ಮೊಬಲಗಿನ ವಸೂಲಾತಿಗಾಗಿ ಈ ಕೆಳಕಂಡ ಸುಸ್ತಿದಾರರ ಸ್ಥಿರ ಸ್ವತ್ತಿಗೆ ಸಂಬಂಧಿಸಿದಂತೆ ಹಕ್ಕು ಬಾಧ್ಯತೆಗಳು ಬಹಿರಂಗ ಹರಾಜು ಮಾಡಲಾಗುವುದು. ಸದರಿಯವರಿಗೆ ಸೇರಿದ ಸ್ಥಿರಾಸ್ತಿಗಳ ವಿವರ ಹಾಗೂ ಅವರ ವಿರುದ್ಧ ಪಡೆಯಲಾದ ಅಮಲ್ಜಾರಿ ಸಂಖ್ಯೆ ಮತ್ತು ಅವರಿಂದ ವಸೂಲಾಗಬೇಕಾದ ಮೊಬಲಗಿನ ವಿವರಗಳನ್ನು ಈ ಕೆಳಕಂಡಂತೆ ನಮೂದಿಸಲಾಗಿದೆ.

ಕ್ರಸಂ	ಬಾಕಿದಾರರ ಹೆಸರು ಮತ್ತು ಜಾಮೀನುದಾರರ ಹೆಸರು	ಸುಸ್ತಿದಾರರ ಸದಸ್ಯರ ವಿಳಾಸ	ಅಮಲ್ಜಾರಿ ಸಂಖ್ಯೆ	ಹರಾಜಿಗೆ ಒಳಪಡಿಸಿರುವ ಸ್ಥಿರಾಸ್ತಿಯ ವಿಳಾಸ ಮತ್ತು ಚೆಕ್ಕುಬಂದಿ	ಸಂಘಕ್ಕೆ ಬರಬೇಕಾದ ಮೊಬಲಗು	ಹರಾಜು ದಿನಾಂಕ ಮತ್ತು ಸಮಯ	ಹರಾಜು ನಡೆಯುವ ಸ್ಥಳ
1.	ಶ್ರೀ ಎಂ.ಪ್ರತಾಪ್ ಬಿನ್ ಲೇಟ್.ಪಿ.ವಿ.ಮಹದೇವಯ್ಯ ಜಾಮೀನುದಾರರು 1. ಶ್ರೀಮತಿ.ಪಿ.ಹೇಮಲತಾ ಕೋಂ. ಎಂ.ಪ್ರತಾಪ್ 2. ಶ್ರೀ.ವೈ.ಟಿ. ಮಂಜುನಾಥ್ ಬಿನ್. ಲೇಟ್.ವೈ.ಎನ್. ತಮ್ಮಯ್ಯ	ನಂ.402, ಹೈಟೆನ್ಷನ್ ಡಬಲ್ ರಸ್ತೆ, 3ನೇ ಫೇಸ್, 4ನೇ ಹಂತ ವಿಜಯನಗರ ಮೈಸೂರು	ಡಿಆರ್‌ಎಂ / ದಾವಾ /ಸಿ7 /70/07/ 2021–2022	ಮೈಸೂರು ನಗರ, ದೇವರಾಜ ಮೊಹಲ್ಲಾ, ವಿನಾಯಕ ನಗರ, 7ನೇ ಅಡ್ಡರಸ್ತೆ, 6ನೇ ಮುಖ್ಯರಸ್ತೆಯಲ್ಲಿರುವ 5/1 ರ ಮನೆ ಇದರ ಚೌತರ್ಪು. ಪೂರ್ವಕ್ಕೆ –ನೆಲ ಅಂತಸ್ತಿನಲ್ಲಿರುವ ಪೂರ್ವದ ಕಡೆಯ ನನ್ನ ಬಾಬ್ತು ಸ್ವತ್ತು. ಪಶ್ಚಿಮಕ್ಕೆ–ಗೋವಿಂದಪ್ಪನವರ ಸ್ವತ್ತು. ಉತ್ತರಕ್ಕೆ –ರಸ್ತೆ ದಕ್ಷಿಣಕ್ಕೆ ಶ್ರೀಕಂಠಶಾಸ್ತ್ರಿರವರ ಸ್ವತ್ತು. ಈ ಮಧ್ಯೆ ಇರುವ ಪೂ.ಪ.26 ಅಡಿಗಳು. ದಕ್ಷಿಣೋತ್ತರ 39 1/4 ಅಡಿ ಪ್ಲಿಂತ್ ಏರಿಯಾ 672.65 ಚ.ಅ. ಮತ್ತು ನಿವೇಶನದ ವಿಸ್ತೀರ್ಣ 1091.8 ಅಡಿ	ರೂ 41,48,380/– +ಬಡ್ಡಿ+ಇತರೆ ಖರ್ಚು ಪ್ರತ್ಯೇಕ	ದಿನಾಂಕ 22.02.2023 ರ ಬುಧವಾರ ಮಧ್ಯಾಹ್ನ 12.00 ಗಂಟೆಗೆ	ಮೈಸೂರು ನಗರ ದೇವಾರಾಜ ಮೊಹಲ್ಲಾ ವಿನಾಯಕ ನಗರ 7ನೇ ಅಡ್ಡರಸ್ತೆ 6ನೇ ಮುಖ್ಯರಸ್ತೆ, ಮನೆ ನಂ 5/1 ರಲ್ಲಿ

ಷರತ್ತುಗಳು

1. ಮೇಲೆ ತಿಳಿಸಲ್ಪಟ್ಟಿರುವ ಕಟ್ಟಡ (ಸ್ಥಿರಾಸ್ತಿಯನ್ನು) ಸಾರ್ವಜನಿಕ ಹರಾಜು ಮಾಡಲಾಗುವುದು.
2. ಹರಾಜಿನಲ್ಲಿ ಭಾಗವಹಿಸುವವರು ಹರಾಜು ನಡೆಯುವುದಕ್ಕೆ 1 ಗಂಟೆ ಮುಂಚಿತವಾಗಿ ಠೇವಣಿ ರೂ.20,000/–ಗಳನ್ನು ಸಂಘಕ್ಕೆ ಪಾವತಿಸಿ ಹರಾಜಿನಲ್ಲಿ ಭಾಗವಹಿಸಬಹುದು.
3. ಹರಾಜಿನಲ್ಲಿ ಭಾಗವಹಿಸಿ, ಹರಾಜಿನ ಅಖೈರು ಮೊಬಲಗಿನ ಪೈಕಿ ಕೂಡಲೇ ಆ ಹಣದ ಶೇಕಡ 25% ರಷ್ಟು ಮೊಬಲಗನ್ನು ಹರಾಜಿನ ಸಮಯದಲ್ಲಿ ಸ್ಥಳದಲ್ಲೇ ಪಾವತಿ ಮಾಡಿ ರಶೀದಿ ಪಡೆಯುವುದು. ಉಳಿಕೆ ಹಣವನ್ನು ಹರಾಜು ದಿನಾಂಕದಿಂದ 30 ದಿನಗಳೊಳಗಾಗಿ ಸಂಘಕ್ಕೆ ಪಾವತಿಸತಕ್ಕದ್ದು, ತಪ್ಪಿದಲ್ಲಿ ಬಿಡ್‌ದಾರರು ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

4) ಆಸಕ್ತಿ ಹೊಂದಿದ ಬಿಡ್‌ದಾರರು ಕಟ್ಟಡದ (ಸ್ಥಿರಾಸ್ತಿಯನ್ನು) ಆದಷ್ಟು ಮುಂಚಿತವಾಗಿ ಪರಿಶೀಲನೆ ಮಾಡಿಕೊಳ್ಳಬಹುದು.
5) ಮೇಲೆ ಹೇಳಿದ ಪ್ರಕಾರ ನಿರ್ಣಯಿಸಿದ ಸಮಯದೊಳಗೆ ಹಣವನ್ನು ಠೇವಣಾತಿ ಕಟ್ಟದಿದ್ದರೆ ಅಥವಾ ದರಖಾಸ್ತು ಹಣದ ಪೈಕಿ ಉಳಿದ ಮೊಬಲಗನ್ನು ಕಟ್ಟದಿದ್ದರೆ ಪ್ರಥಮ ದರಖಾಸ್ತುದಾರನ ಖರ್ಚು ಅಥವಾ ನಷ್ಟ ಬಾಧ್ಯತೆ ಮೇಲೆ ಮಾರಾಟದ ಹೊಸ ಇಸ್ತಿಹಾರವನ್ನು ಪ್ರಕಟಿಸಿದ ನಂತರ ಕಟ್ಟಡವು ಮಾರಾಟವಾದಿತು.
6) ಹರಾಜು ಆದ 30 ದಿವಸಗಳ ನಂತರ ಹರಾಜನ್ನು ಮಾರಾಟಾಧಿಕಾರಿಗಳ ಶಿಫಾರಸ್ಸಿನ ಮೇರೆಗೆ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಇವರು ಸ್ಥಿರೀಕರಿಸುವವರು ಸ್ಥಿರೀಕರಿಸಿದ ನಂತರವೇ ವಿಲೇವಾರಿ ಕ್ರಮವಿಡಲಾಗುವುದು.
7) ಸಾರ್ವಜನಿಕರು ಬಿಡ್ ಮಾಡದಿದ್ದಲ್ಲಿ ಸಹಕಾರ ಸಂಘಗಳ ಕಾಯಿದೆ 101 (ಸಿ) ಪ್ರಕಾರ ಸಂಘಕ್ಕೆ ಸ್ಥಿರಾಸ್ತಿಯನ್ನು ಕೊಳ್ಳಲು ಅವಕಾಶ ಮಾಡಿಕೊಟ್ಟಿರುತ್ತದೆ.
8) ಬಾಕಿದಾರರೇ ಆಗಲಿ ಅಥವಾ ಅವರ ಅನುಮತಿ ಪಡೆದ ಅಧಿಕೃತ ವ್ಯಕ್ತಿಯಾಗಲಿ ಹರಾಜು ವೇಳೆಗಿಂತ ಮುಂಚೆ ಅಮಲ್ಜಾರಿ ಮೊಬಲಗನ್ನು ಕಟ್ಟಿದಲ್ಲಿ ಹರಾಜನ್ನು ರದ್ದುಗೊಳಿಸಲಾಗುತ್ತದೆ.
9) ಹರಾಜಿನ ಅಖೈರು ಬಿಡ್‌ನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಮಾರಾಟಾಧಿಕಾರಿಗಳಿಗೆ ಸೇರಿರುತ್ತದೆ.
10) ಹರಾಜಿನ ದಿನಾಂಕದಂದು ಆಡಳಿತಾತ್ಮಕ ಕಾರಣಗಳಿಂದ ಹರಾಜು ನಡೆಯದೇ ಇದ್ದ ಪಕ್ಷದಲ್ಲಿ ಯಾವುದೇ ಪ್ರಕಟಣೆ ನೀಡದೇ ಮುಂದಿನ 7 ದಿನಕ್ಕೆ ಕ್ರಮವಾಗಿ ಮಧ್ಯಾಹ್ನ 12.00 ಗಂಟೆಗೆ ಸದರಿ ಸ್ಥಳದಲ್ಲೇ ಮತ್ತೆ ಹರಾಜನ್ನು ನಡೆಸಲಾಗುವುದು.
11) ಹರಾಜಿಗೆ ಒಳಪಡಿಸಿರುವ ಸ್ಥಿರಾಸ್ತಿಗಳ ವಿವರಗಳ ಬಗ್ಗೆ ಅಥವಾ ಇತರೆ ಸಂಬಂಧಪಟ್ಟ ಮಾಹಿತಿ ಬಗ್ಗೆ ಸೊಸೈಟಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿದೆ.
12) ಹರಾಜಿನ ಸಂಬಂಧ ಯಾವುದೇ ತಕರಾರು ಉಂಟಾಗಿದ್ದಲ್ಲಿ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಉಪ ವಿಭಾಗ, ಮೈಸೂರು ಇವರ ನ್ಯಾಯಾಲಯದ ಕಾರ್ಯವ್ಯಾಪ್ತಿಗೆ ಒಳಪಟ್ಟಿರುತ್ತದೆ.

ಸ್ಥಳ: ಮೈಸೂರು
ದಿನಾಂಕ: 15–02–2023

ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಮೈಸೂರು ಉಪವಿಭಾಗ, ಮೈಸೂರು
ಈ ನ್ಯಾಯಾಲಯದ ಆದೇಶದ ಮೇರೆಗೆ
ಸಹಿ/– ಶ್ರೀ ಹೆಚ್.ಕೆ. ಸತೀಶ್, ಮಾರಾಟಾಧಿಕಾರಿ (ಸರ್ಕಾರ),
ಗುತ್ತಿಗೆದಾರರ ಕ್ರೆಡಿಟ್ ಕೋ–ಆಪರೇಟಿವ್ ಸೊಸೈಟಿ, ಮಾರಾಟಾಧಿಕಾರಿಗಳು, ಮೈಸೂರು